
ಮಂತ್ರಾಲಯದ ಮುನೀಂದ್ರ



ರಾಜಾ ಎಸ್ ಗುರುರಾಜಾಚಾರ್ಯ

ಸು.ರಾ.ಸಂ.ಕೇಂದ್ರ
ಪ್ರಕಾಶನ -12

ಶ್ರೀ ಸುಶೀಲೇಂದ್ರ
ವಿಜಯಮಾಲಾ-1

ಶ್ರೀಮಂತ್ರಾಲಯದ ಮುನೀಂದ್ರರು

ಗ್ರಂಥಕರ್ತರು
ವಿದ್ಯಾರತ್ನಂ, ಪಂಡಿತರಾಜ
ರಾಜಾ.ಎಸ್.ಗುರುರಾಜಾಚಾರ್ಯರು
ನಂಜನಗೂಡು

ಪ್ರಕಾಶಕರು :
ಶ್ರೀ ಸುಯಮಿ ರಾಘವೇಂದ್ರ ಸಂಶೋಧನ ಕೇಂದ್ರ
ನಂ. 38, ಬನಶಂಕರಿ ಮೂರನೆಯ ಹಂತ, 3ನೆಯ ಮುಖ್ಯರಸ್ತೆ,
3ನೆಯ ಫೇಸ್, ಮೊದಲನೆಯ ಬ್ಲಾಕ್,
ಬೆಂಗಳೂರು - 560 085

ಗ್ರಂಥದ ಹೆಸರು : ಶ್ರೀಮಂತ್ರಾಲಯದ ಮುನೀಂದ್ರರು

ಗ್ರಂಥಕರ್ತೃಗಳು : ರಾಜಾ ಎಸ್. ಗುರುರಾಜಾಚಾರ್ಯರು
"ಬೃಂದಮಂದಿರ ಕಂದ"

ಪ್ರಕಾಶಕರು : ಶ್ರೀ ಸುಯಮಿರಾಘವೇಂದ್ರ
ನಂ. 38, ಬನಶಂಕರಿ ಮೂರನೆಯ ಹಂತ,
3ನೆಯ ಮುಖ್ಯರಸ್ತೆ, 3ನೆಯ ಫೇಸ್,
ಮೊದಲನೆಯ ಬ್ಲಾಕ್,
ಬೆಂಗಳೂರು - 560 085

ಮುದ್ರಣ : ಪ್ರಥಮ ಮುದ್ರಣ-2000

ಅಕ್ಷರ ವಿನ್ಯಾಸ : ಸತ್ಯಶ್ರೀ ಪ್ರಿಂಟರ್ಸ್ (ಪ್ರೈ) ಲಿಮಿಟೆಡ್
ಚಾಮರಾಜಪೇಟೆ,
ಬೆಂಗಳೂರು - 560 018

ಮುದ್ರಕರು : ಸತ್ಯಶ್ರೀ ಪ್ರಿಂಟರ್ಸ್ (ಪ್ರೈ) ಲಿಮಿಟೆಡ್
ಚಾಮರಾಜಪೇಟೆ
ಬೆಂಗಳೂರು - 560 018
ದೂರವಾಣಿ : 6525736

ಗ್ರಂಥ ಸಮರ್ಪಣೆ

ಶ್ರೀ ಮತ್ಪರಮಹಂಸ ಪರಿವ್ರಾಜಕಾಚಾರ್ಯೇತ್ಯಾದಿ
ಬಿರುದಾಂಕಿತ ಜಗದ್ಗುರು ಶ್ರೀಮಧ್ವಾಚಾರ್ಯರ
ವೇದಾಂತ ಸಾಮ್ರಾಜ್ಯಾಧೀಶ್ವರರಾದ
ಶ್ರೀಮದ್ರಾಘವೇಂದ್ರ ಸ್ವಾಮಿಗಳವರ ಚರಣ ಕಮಲಗಳಲ್ಲಿಯೂ,
ಮತ್ತು
ಶ್ರೀಗುರುರಾಜರ ದಿಗ್ವಿಜಯ ವಿದ್ಯಾ
ಸಿಂಹಾಸನಾಧೀಶ್ವರರುಗಳಾದ
ಶ್ರೀಮಂತ್ರಾಲಯದ ಮಹಾಶಿಲ್ಪಿಗಳಾದ
ಶ್ರೀಮತ್ಸುಶೀಲೇಂದ್ರತೀರ್ಥಶ್ರೀಪಾದಂಗಳವರು
ಅವರ ಪ್ರಶಿಷ್ಯರಾದ
ಶ್ರೀಮತ್ಸುಯಮೀಂದ್ರತೀರ್ಥಶ್ರೀಪಾಂದಗಳವರು
ಹಾಗು
ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರ
ಚರಣಾರವಿಂದಗಳಲ್ಲಿ ಈ ಗ್ರಂಥವನ್ನು
ಭಕ್ತಿ ಶ್ರದ್ಧಾದರ ನಮನ ಪೂರ್ವಕವಾಗಿ
ಸಮರ್ಪಿಸಲಾಗಿದೆ

ಬೆಂಗಳೂರು
12.9.2000

ಪ್ರಕಾಶಕ
ಶ್ರೀ ಸು.ರಾ. ಸಂಶೋಧನ ಕೇಂದ್ರ
ಶ್ರೀ ಅನಂತನಹಬ್ಬ

ಪ್ರಕಾಶಕರ ನುಡಿ- ಧನ್ಯವಾದ ಸಮರ್ಪಣೆ

ನಂಜನಗೂಡಿನ ಶ್ರೀ ಪರಿಮಳ ಸಂಶೋಧನ ಮತ್ತು ಪ್ರಕಾಶನ ಮಂದಿರದ ಸಂಸ್ಥಾಪಕ-ಸಂಚಾಲಕ-ಸಂಪಾದಕರಾದ ಪೂಜ್ಯ ಶ್ರೀ ರಾಜಾ.ಎಸ್.ಗುರುರಾಜಾಚಾರ್ಯರು ರಚಿಸಿ ತಮ್ಮ ಶ್ರೀ ಪರಿಮಳ ವಿದ್ಯಾಮಂದಿರದಿಂದ 1990ರಲ್ಲಿ ಪ್ರಕಟಿಸಿದ ''ಶ್ರೀ ಮಂತ್ರಾಲಯಯುದಮುನೀಂದ್ರರು'' ಎಂಬ ಈ ಗ್ರಂಥವನ್ನು ನಮ್ಮ ಸಂಶೋಧನಕೇಂದ್ರದಿಂದ ಪ್ರಕಟಿಸಲು ಆಶಿಸಿದಾಗ ಶ್ರೀ ಆಚಾರ್ಯರು ಅಭಿಮಾನಪುರ್ವಕ ಒಪ್ಪಿಗೆ ನೀಡಿದರು. ಅದಕ್ಕಾಗಿ ಅವರಿಗೆ ನಮ್ಮ ನಮನಪೂರ್ವಕ ಧನ್ಯವಾದಗಳನ್ನರ್ಪಿಸುತ್ತೇವೆ.

ಶ್ರೀ ಪರಿಮಳ ವಿದ್ಯಾಮಂದಿರದ ಸೋದರ ಸಂಸ್ಥೆಯಾದ ನಮ್ಮ ಶ್ರೀ ಸುಯಮಿ ರಾಘವೇಂದ್ರ ಸಂಶೋಧನಕೇಂದ್ರವು ಈಗಾಗಲೇ ಅನೇಕ ಶಾಸ್ತ್ರ-ಮಹಿಮಾಪರ ಗ್ರಂಥಗಳನ್ನು ಪ್ರಕಟಿಸಿದ್ದು ಈ ಗ್ರಂಥವನ್ನು ನಾವೀಗ ನಮ್ಮ ಸಂಶೋಧನ ಕೇಂದ್ರದ ಹನ್ನೆರಡನೆಯ ಗ್ರಂಥವಾಗಿ ಪ್ರಕಟಿಸಿ ಶ್ರೀ ಗುರುಭಕ್ತರಿಗೆ ನೀಡಲು ಹರ್ಷಿಸುತ್ತೇವೆ.

ಈ ಗ್ರಂಥ ಪ್ರಕಾಶನಕ್ಕಾಗಿ ಶ್ರೀವಿಜಯೀಂದ್ರಾಚಾರ್ಯರ ಮಾತಾಪಿತೃಗಳಾದ ಶ್ರೀ ವೇಣುಗೋಪಾಲಾಚಾರ್ಯ ಮಹಾನುಭಾವ್ ಮತ್ತು ಮಾನವೀಯ ಶ್ರೀಮತಿ ರುಕ್ಮಿಣೀಬಾಯಿ ಹಾಗೂ ಶ್ರೀಯುತ ರಾಘವರೆಡ್ಡಿ ಮಾನವಿ, ಇವರ ತಂದೆಯವರಾದ ಶ್ರೀ ಟಿ. ಗುರುವಾರೆಡ್ಡಿ-ಇವರುಗಳು ಉದಾರವಾಗಿ ಧನಸಹಾಯಮಾಡಿದ್ದಾರೆ. ಇವರುಗಳಿಗೆ ಶ್ರೀ ಗುರುರಾಜರು ಸಕಲಸನ್ಮಂಗಳಗಳನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ. ಮತ್ತು ನಮ್ಮ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದರಂತೆ ಅಕ್ಷರ ವಿನ್ಯಾಸ ಮತ್ತು ಮುದ್ರಣ ಮಾಡಿಕೊಟ್ಟ ಸತ್ಯಶ್ರೀ ಪ್ರಿಟಂರ್ಸ್‌ನ ಮಾಲೀಕರಿಗೂ ನಮ್ಮ ಧನ್ಯವಾದಗಳು. ಶ್ರೀ ಗುರುಭಕ್ತರು ಈ ಗ್ರಂಥವನ್ನು ಸಂಗ್ರಹಿಸಿ ಓದಿ ಗುರ್ವನುಗ್ರಹಕ್ಕೆ ಪಾತ್ರರಾಗಲು ಕೋರುತ್ತೇವೆ.

12.9.2000 ಪ್ರಕಾಶಕರು

ಬೆಂಗಳೂರು ಶ್ರೀ ಸು.ರಾ.ಸಂ.ಕೇಂದ್ರ

ಪ್ರಸ್ತಾವನೆ

''ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮರತಾಯ ಚ।
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ॥

''ದೇವರೆಂದರೆ ತಿರುಪತಿಯ ತಿಮ್ಮಪ್ಪ, ಗುರುವೆಂದರೆ ಮಂಚಾಲೆಯ ರಾಘಪ್ಪ'' ಎಂಬ ನಾಣ್ನುಡಿಯು ಪರಮಸತ್ಯವೆಂಬುದು ಎಲ್ಲ ಭಕ್ತರ ಅನುಭವಕ್ಕೂ ಬಂದಿರುವ ವಿಷಯ. ಇಂತಹ ಗುರುವರೇಣ್ಯರ ಚರಿತೆಯನ್ನು ಭಕುತ ಜನರಿಗೆ ನಿರೂಪಿಸಲು ಪ್ರಕಟಿಸಿರುವ ಈ ಸಣ್ಣ ಗ್ರಂಥವನ್ನು ಆದರದಿಂದ ಗುರುಭಕ್ತರಿಗೆ ನೀಡುತ್ತಾ, ಸುಜನವೃಂದಕ್ಕೆ ಸನ್ಮಂಗಳಗಳನ್ನು ಹಾರೈಸುತ್ತಾ ಕೆಲ ವಿಚಾರಗಳನ್ನಿಲ್ಲಿ ಅರುಹ ಬಯಸುತ್ತೇವೆ.

ಇಂದು ಪ್ರಪಂಚದ ಮುಖ್ಯವಾಗಿ ಭಾರತದೇಶದ ಜನರು ವಿವಿಧ ದುಃಖ-ದುಮ್ಮಾನ, ಹಸಿವು-ತೃಷೆ, ರೋಗ-ರುಜಿನ, ಅವಿದ್ಯೆ, ಅಶಾಂತಿಗಳಿಂದ ಬಳಲುತ್ತಾ ಕಂಗಾಲಾಗಿದ್ದಾರೆ. ಕೋಟ್ಯಂತರ ಜನರು ಸುಖಾನ್ವೇಷಣರೂಪ ಮರೀಚಿಕೆಯ ಬೆನ್ನು ಹತ್ತಿ ನಿರಾಶೆಯ ಗಾಡಾಂಧಕಾರದಲ್ಲಿ ಮುಳುಗಿ ಹತಾಶರಾಗುತ್ತಿದ್ದಾರೆ. ಆದರೂ ಜನ ಸುಖಕ್ಕಾಗಿ ಹಂಬಲಿಸುವ ಹವ್ಯಾಸವನ್ನು ಬಿಟ್ಟಿಲ್ಲ. ಅದು ಮಾನವ ಸ್ವಭಾವವೂ ಅಹುದೆನ್ನಿ. ಯಾವ ಸುಖಕ್ಕಾಗಿ ಪ್ರಯತ್ನಿಸಬೇಕೋ ಅಂತಹ ದುಃಖರಹಿತ ಶಾಶ್ವತ ಸುಖಸಾಧನೆಗೆ ಯತ್ನಿಸದೆ ಅಶಾಶ್ವತವೂ, ಕ್ಷಣಿಕವೂ, ಪುನಃ ದುಃಖಕ್ಕೇ ಕಾರಣವೂ ಆದ ಐಹಿಕ ಸುಖಕ್ಕಾಗಿ ಪರಿತಪಿಸುತ್ತಿರುವುದರಿಂದ ಶಾಶ್ವತ ಸುಖ-ಶಾಂತಿಗಳು ಕನಸಿನಗಂಟಾಗಿದೆ. ವಿವೇಕಿಯು ತನ್ನ ದುಃಖಪರಿಹಾರ ಸುಖಪ್ರಾಪ್ತಿಯು ಯಾತರಿಂದಾಗುವುದೆಂಬುದನ್ನು ಸ್ವಲ್ಪ ವಿವೇಚಿಸುವುದು ಅಗತ್ಯವಾಗಿದೆ. ನಮ್ಮ ಭಾರತೀಯ ವೇದಾದಿ ಶಾಸ್ತ್ರಗಳು ಅನಾದಿ ಕಾಲದಿಂದ ಈವೊಂದು ಸಾಧನಮಾರ್ಗವನ್ನೇ ಬೋಧಿಸುತ್ತಾ ಬಂದಿವೆ. ಅದನ್ನು ಕಡೆಗಣಿಸಿರುವುದರಿಂದಲೇ ಮಾನವರಿಂದು ದುಃಖಸಂಕಟಗಳಿಗೆ ಈಡಾಗಿದ್ದಾರೆ. ಇದರ ಪರಿಹಾರವಾಗಿ ಮಾನವರು ಸುಖವನ್ನು ಕರಗತಮಾಡಿಕೊಳ್ಳಬೇಕಾದರೆ ಅದರ ಉಪಾಯವನ್ನು ಉಪದೇಶಿಸುವ ವೇದಾದಿ ಸದ್ವಿದ್ಯೆಗಳಿಗೆ ಮೊರೆಹೋಗುವುದು ಅತ್ಯವಶ್ಯವಾಗಿದೆ.

ಇಂತಹ ಸದ್ವಿದ್ಯೆಗಳನ್ನು ಉಪದೇಶಿಸಿ ಭಾರತೀಯ ಜನತೆಯ ಕಲ್ಯಾಣಕ್ಕಾಗಿ ವಿಶೇಷವಾಗಿ ಶ್ರಮಿಸಿದ ಮಹಾನುಭಾವರು ಶ್ರೀರಾಘವೇಂದ್ರಸ್ವಾಮಿಗಳವರು. ಇವರು ನಾಡು, ನುಡಿ, ಜನತೆಗೆ ಮಾಡಿರುವ ಉಪಕಾರ ಅಪಾರವಾಗಿದೆ. ಶ್ರೀಗುರುವರರ ಬಗೆಗೆ ತಿಳಿಯುವುದು ಆತ್ಮೋದ್ಧಾರವನ್ನು ಬಯಸುವ ಸಕಲ ಮಾನವರ ಕರ್ತವ್ಯವಾಗಿದೆ.

ಮಂಗಳಮೂರ್ತಿಗಳಾದ ಮಂತ್ರಾಲಯ ಮುನೀಂದ್ರರ ಮಹಿಮೆ ಇಂದು ಮನೆಮಾತಾಗಿದೆ. ತಿಳಿಯಲಳವಲ್ಲದ ಅವರ ಮಹಿಮೆ ಅಗಾಧವಾಗಿದೆ. ಅಪ್ರತಿಹತವಾಗಿದೆ. ಅದು ನಾಲ್ಕು ಸಮುದ್ರಗಳ ಸೀಮೆಯನ್ನೂ ಉಲ್ಲಂಘಿಸಿ ವಿಶ್ವದಲ್ಲೆಲ್ಲಾ ವ್ಯಾಪಿಸಿದೆ. ಗುರುಗಳ ಮಹಿಮೆ ಅಖಂಡ ಮನುಕುಲವನ್ನು ಪೊರೆಯಲು ಸಮರ್ಥವಾಗಿದೆ. ಶ್ರೀ ಅಪ್ಪಣ್ಣಾಚಾರ್ಯರು "ಶ್ರೀರಾಘವೇಂದ್ರ ಗುರುಸ್ತೋತ್ರ"ದಲ್ಲಿ ಅವರ ಮಹಿಮೆಯನ್ನು ಸಾಕಲ್ಯೇನ ವರ್ಣಿಸಲಾಗಿದೆ. "ಅಗಮ್ಯ ಮಹಿಮಾ ಲೋಕೇ ರಾಘವೇಂದ್ರೋ ಮಹಾಯಶಾಃ" ರಾಘವೇಂದ್ರರ ಮಹಿಮೆ ವರ್ಣಿಸಲಾಗದಷ್ಟಿದೆ, ಅಗಮ್ಯವಾಗಿದೆ, ಆದುದರಿಂದಲೇ ಅವರು ಮಹಾಕೀರ್ತಿಸಂಪನ್ನರಾಗಿದ್ದಾರೆ ಎಂದು ಉದ್ಗಾರ ತೆಗೆದಿದ್ದಾರೆ! ಅವರಿಂತು ಮಹಾಮಹಿಮರಾಗಿರುವುದರಿಂದಲೇ ವಿಶ್ವಗುರುಗಳೆನಿಸಿ ಜಗದ ಸಮಸ್ತ ಜತನೆಯಿಂದ ಪೂಜಿತರಾಗಿ ಕಂಗೊಳಿಸುತ್ತಿದ್ದಾರೆ.

ಉದ್ಧೃತರಾಗುವ ದಾರಿಕಾಣದೆ ಅಜ್ಞಾನವೆಂಬ ಕತ್ತಲಿನಲ್ಲಿ ಮುಳುಗಿ ಸಂಸಾರದ ಕಷ್ಟಕಾರ್ಪಣ್ಯ, ದುಃಖಗಳಿಂದ ತೊಳಲಾಡುತ್ತಿರುವ ಜನರಿಗೆ ಜ್ಞಾನಭಾಸ್ಕರರಂತಿರುವ ಆ ಜ್ಞಾನಿನಾಯಕರ ಅಗಾಧ ತಪಸ್ಸು ಹಾಗೂ ಜ್ಞಾನಸಂಪತ್ತು ಸಕಲರ ಅಜ್ಞಾನವೆಂಬ ಅಂಧಕಾರವನ್ನು ಪರಿಹರಿಸಿ ಜ್ಞಾನ ಜ್ಯೋತಿಯನ್ನು ಕರುಣಿಸಿ, ಭವಸಾಗರವನ್ನು ದಾಟಿಸಿ, ಸುಜನರು ಭಗವಂತನ ಅತ್ಯರ್ಥಪ್ರಸಾದಕ್ಕ ಪಾತ್ರರಾಗುವಂತೆ ಮಾಡಿ, ತಮ್ಮ ಅನುಗ್ರಹವೆಂಬ ಮಂಗಳದ ಹೊಂಗಿರಣಗಳ ಪ್ರಕಾಶದ ಪ್ರಭೆಯಲ್ಲಿ ಅಮಂದಾನಂದತುಂದಿಲರಾಗಿ ನಲಿಯುವಂತೆ ಮಾಡಲು ಶಕ್ತವಾಗಿದೆ.

"ಶ್ರೀರಾಘವೇಂದ್ರೋ ಹರಿಪಾದಕಂಜ ನಿಷೇವಣಾಲ್ಲಬ್ಧ ಸಮಸ್ತ ಸಂಪತ್" ಎಂದು ಗುರುಸ್ತೋತ್ರದಲ್ಲಿ ಹೊಗಳಿರುವಂತೆ ಶ್ರೀಹರಿಪರಮಾತ್ಮನ

ಚರಣಾರವಿಂದ ಸಂಸೇವನದಿಂದ ಲಬ್ಧವಾದ ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥ ಸಂಪದ್ವಿಭೂಷಿತರಾಗಿದ್ದಾರೆ ನಮ್ಮ ಶ್ರೀಮಂತ್ರಾಲಯದ ಮುನೀಂದ್ರರು. ಶ್ರೀರಾಘವೇಂದ್ರಸ್ವಾಮಿಗಳವರಿಗೆ ಶ್ರೀಹರಿ-ವಾಯುಗಳಲ್ಲಿರುವ ಭಕ್ತಿ ಅನ್ಯಾದೃಶವಾದುದು. ಚತುರ್ಮುಖ ಬ್ರಹ್ಮದೇವರು ಭಕ್ತಿಭಾಗ್ಯದ ವಿವಿಧ ಮುಖಗಳನ್ನೆಲ್ಲಾ ಒಟ್ಟಾಗಿ ಸೇರಿಸಿ, ತಮ್ಮೆಲ್ಲ ಸೃಷ್ಟಿಕಲಾಕೌಶಲಗಳನ್ನು ಮೆರೆಸಿ ಅತಿ ಪ್ರೀತಿಯಿಂದ ನಿರ್ಮಿಸಿದ ಭಕ್ತಿಪುತ್ಥಳಿಯೇ ರಾಘವೇಂದ್ರಗುರುವರರೆಂದು ಒಂದೇ ಮಾತಿನಲ್ಲಿ ಹೇಳಬಹುದು. ಇದರಿಂದ ಶ್ರೀರಾಯರ ಭಕ್ತಿಸಾಮ್ರಾಜ್ಯದ ಒಂದು ಭವ್ಯಚಿತ್ರ ಭಕ್ತರ ಚಿತ್ತಭಿತ್ತಿಯಲ್ಲಿ ಒಡಮೂಡಬಹುದಲ್ಲವೆ.

ಶ್ರೀ ಪರಿಮಳಾಚಾರ್ಯರ ತಪಸ್ಸು ವಿಶ್ವದ ಜನತೆಯ ಎಲ್ಲ ವಿಧಕಲ್ಯಾಣಗಳಿಗಾಗಿಯೇ ಮೀಸಲಾಗಿದೆ. ಅವರ ಸಂಪತ್ತು ಅಚ್ಯುತ ಮೆಚ್ಚಿಕೊಟ್ಟ ಅಕ್ಷಯಸಂಪತ್ತು. ಸಂಪದಭಿಮಾನಿನಿಯಾದ ಇಂದಿರೆಯ ಹೃದಯಾರವಿಂದ ಮಕರಂದ ಮಧ್ವಾಸ್ವಾದನ ಮತ್ತಮಧುಕರನಾದ ಮುಕುಂದನ ಪಾದಕಮಲ ಸೇವನೆಯಿಂದ ದೊರಕಿದ ಆ ಅಕ್ಷಯ ಸಂಪತ್ತು ಯುಗಾಂತ್ಯದವರೆಗೂ ಶರಣಜನರ ದಾರಿದ್ರ್ಯವನ್ನು ತೊಡೆದುಹಾಕಲೂ, ಸಿರಿಸಂಪದ್ವೈಭವಗಳಲ್ಲಿ ಅವರನ್ನು ಮೆರೆಸಲೂ ಶಕ್ತವಾಗಿದೆ. ಅಂತೆಯೇ ಗುರುರಾಯರು ಕೊಟ್ಟು ಕೊಟ್ಟಂತೆಲ್ಲಾ ಮತ್ತೆ ಮತ್ತೆ ತುಂಬಿ ತುಳುಕುವ ಸಂಪದ್ಭಂಡಾರ ನಮ್ಮ ರಾಯರದು. ಜಗತ್ತಿನಲ್ಲಿ ಇಂತಹ ಭಾಗ್ಯ ಮತ್ತಾರಿಗುಂಟು?

ಪುಣ್ಯಮೂರ್ತಿಗಳಾದ ಮಂತ್ರಾಲಯದ ಮಾಂತ್ರಿಕರ ಪುಣ್ಯ, ಅನೇಕ ಪರ್ವತಗಳಷ್ಟು ಬೆಳೆದು ನಿಂತಿದೆ. ಉದಾರಚರಿತರಾದ ಯತಿವರರು ಶತಶತಮಾನಗಳವರೆಗೆ ಈಡಾಡಿದರೂ ಬರಿದಾಗದು ಅವರ ಪುಣ್ಯಭಂಡಾರ. ಆ ಮಹನೀಯರ ಔದಾರ್ಯಕ್ಕಂತು ಒಂದು ಮೇರೆಯೆಂಬುದೇ ಇಲ್ಲ. ತ್ರಿಭುವನ ಪ್ರಸಿದ್ಧವಾದ ಅಮರಾಧಿಪ ಇಂದ್ರದೇವನ ನಂದನವನದಲ್ಲಿರುವ ಕಾಮಧೇನು, ಕಲ್ಪವೃಕ್ಷ, ಮತ್ತು ಚಿಂತಾಮಣಿಗಳ ದಾತೃತ್ವದ ಅಹಂಕಾರವನ್ನು ಕಳೆದು, ಅರ್ಥಿಜನರ ವಾಂಛಿತಾರ್ಥಗಳನ್ನು ದಯಪಾಲಿಸಲೆಂದೇ ಧರೆಗುದಿಸಿಬಂದ ಅವರ ಔದಾರ್ಯದ ಮಹತ್ತು ಭಕ್ತವೃಂದದ ಅನುಭವಕ್ಕೆ ಚಿರಪರಿಚಿತವೇ ಆಗಿದೆ.

ಕರುಣಾಸಮುದ್ರರಾದ ರಾಯರ ಕಾರುಣ್ಯಕ್ಕೆ ಉದಾಹರಣೆಯಂತೂ ನಮಗೆ ದೊರಕದಾಗಿದೆ. ಅವರ ಕರುಣೆಗೆ ಪಾತ್ರಾಪಾತ್ರರೆಂಬ ಸಂಕುಚಿತ ಭಾವವಿಲ್ಲ. ಇತಿಮಿತಿಯಿಲ್ಲ ಅಡೆತಡೆಗಳಿಲ್ಲ. ಜಾತಿ,ಮತ, ಪಂಥ, ಭಾಷೆ, ದೇಶಗಳೆಂಬ ಭೇದವಿಲ್ಲ. ದೀನ-ದಲಿತ, ಬಡವ-ಸಿರಿವಂತ, ಪಂಡಿತ-ಪಾಮರ, ಸ್ತ್ರೀಪುಂವಯೋಭೇದವಿಲ್ಲ. ಸಕಲರ ಎಲ್ಲ ವಿಧ ಔನ್ನತ್ಯಕ್ಕಾಗಿ ಸ್ವರ್ಗಂಗೆಯ ಮಂಗಳ ತರಂಗಗಳಂತೆ ಗುರುಕಾರುಣ್ಯವಾಹಿನಿಯು ಭರದಿಂದ ಹರಿಯುತ್ತಲೇ ಇರುತ್ತದೆ. ಜನತೆಯ ಹಿತಚಿಂತನೆಗಾಗಿಯೇ ಅವರ ಅನುಗ್ರಹ ಮೀಸಲು. ಗುರುಗಳ ಉಪದೇಶ ವೇದಾದಿಶಾಸ್ತ್ರಗಳ ಮಥಿತಾರ್ಥ. ಅದು ಜಗತ್ತಿನ ತತ್ವ ಜಿಜ್ಞಾಸುಗಳ ಹೃದಯವನ್ನು ತಣಿಸಿ, ಮೋಕ್ಷಫಲವನ್ನು ಉಣಿಸಲು ಸಾಧನ ಮಾರ್ಗದಲ್ಲಿ ಕೊಂಡೈದು ಶರಣಜನರನ್ನು ಶ್ರೇಯಸ್ಸಿನ ಆನಂದಮಂದಿರದ ಸೋಪಾನಗಳನ್ನೇರಿಸಲು ಸಮರ್ಥವಾಗಿದೆ. ಇಂತು ಅಗಮ್ಯ ಮಹಿಮೆ, ಜ್ಞಾನ ಭಕ್ತಿ ವೈರಾಗ್ಯ, ತಪಸ್ಸು, ಔದಾರ್ಯ, ದಯೆ, ಭಕ್ತಾನುಕಂಪ, ಹಸಾದ, ತತ್ವ-ಧರ್ಮೋಪದೇಶ ಮುಂತಾದ ವಿಶಿಷ್ಟಗುಣಗಳಿಂದ ಶ್ರೇಷ್ಠರಾದ ಶ್ರೀರಾಘವೇಂದ್ರ ಗುರುಸಾರ್ವಭೌಮರಂತಹ ಮಹಾತ್ಮರನ್ನು ಗುರುಗಳಾಗಿ ಪಡೆದ ಭಾರತೀಯರ ಸೌಭಾಗ್ಯಕ್ಕೆ ಎಣೆಯುಂಟೆ?

ಇಂತು ಲೋಕಗುರುಗಳಾದ ಗುರುರಾಜರ ಅನುಗ್ರಹವು ನಮಗೆ ದೊರಕಬೇಕಾದರೆ ಅವರನ್ನು ಅನನ್ಯಭಾವದಿಂದ, ಮಹಿಮಾದಿಗಳನ್ನರಿತು ಭಕ್ತಿ ಶ್ರದ್ಧೆಗಳಿಂದ ಭಜಿಸಬೇಕು. ಅದರಿಂದ ನಮಗೆ ಮಂತ್ರಾಲಯ ಶ್ರೀಪಾದಂಗಳ ವರಲ್ಲಿ ವಿಶೇಷ ಭಕ್ತಾದರಗಳುಂಟಾಗುವುದಲ್ಲದೆ ಅನಿಷ್ಟ ಪರಿಹಾರ, ಇಷ್ಟ ಪ್ರಾಪ್ತಿಗಳೂ, ಸನ್ಮಂಗಳಗಳೂ ಉಂಟಾಗಿ ಶ್ರೇಯೋವಂತರಾಗಲು ಅವಕಾಶವಾಗುವುದು.

ಹಿಂದೆ ಹೇಳಿದಂತೆ "ದೇವರೆಂದರೆ ತಿರುಪತಿಯ ತಿಮ್ಮಪ್ಪ, ಗುರುವೆಂದರೆ ಮಂತ್ರಾಲಯದ ರಾಘಪ್ಪ" ಎಂಬ ನಾಣ್ನುಡಿಯು ಅತಿಮಹತ್ವಪೂರ್ಣವಾದ ನಿತ್ಯ ಸತ್ಯವೆಂಬುದು ಮನವರಿಕೆಯಾಗದಿರದು. ಶ್ರೀನಿವಾಸ, ಶ್ರೀರಮಾಬ್ರಹ್ಮ ರುದ್ರೇಂದ್ರಾದ್ಯಮರ ವಂದ್ಯನಾದ ಸರ್ವೋತ್ತಮ ದೇವತೆ. ಅವನು ಜಗಜ್ಜನ್ಮಾದಿಕಾರಣ, ಮೋಕ್ಷಪ್ರದಾತನಾದ ದೇವರ ದೇವನು; ಭಕ್ತಬಂಧು, ದಯಾಸಿಂಧುವಾದ ಅವನು ಸರ್ವಜೀವರ ದುಃಖಗಳನ್ನು ಕಳೆದು

ಶಾಶ್ವತಸುಖಪ್ರದನಾಗಿದ್ದಾನೆ-ಎಂದು, ಸಕಲಾಗಮಗಳು ಸಾರುವವು. ಸಕಲವನ್ನೂ ಧರಿಸಿರುವುದರಿಂದ ಶ್ರೀಹರಿಯು ಧರ್ಮಶಬ್ದ ವಾಚ್ಯನಾಗಿದ್ದಾನೆ. ಅವನ ಪ್ರಸಾದವಿಲ್ಲದ ಯಾರೂ ಮುಕ್ತರಾಗಲಾರರು. ಇಂತಹ ದೇವರ ದೇವನಾದ ಶ್ರೀನಿವಾಸನ ಅನುಗ್ರಹ ದೊರಕಿಸಿಕೊಡುವವರು ಗುರುಗಳು. ''ಗುಶಬ್ದಸ್ತ್ವಂಧಕಾರಸ್ಸ್ಯಾದ್ರುಶಬ್ದಸ್ತನ್ನಿವರ್ತಕಃ'' ಅಂದರೆ ಗುರುಗಳು ಸ್ವತಃ ಅಜ್ಞಾನಾದಿದೋಷ ದೂರರಾಗಿದ್ದು, ಆಶ್ರಯಿಸಿದ ಶಿಷ್ಯಸಮೂಹದ ಅಜ್ಞಾನಾಂಧಕಾರವನ್ನು ಹೊಡೆದೋಡಿಸಿ ಆತ್ಮೋದ್ಧಾರಕ್ಕೆ ಸಾಧನವಾದ ಜ್ಞಾನದ ಬೆಳಕನ್ನು ಕೊಡುವ ಮಹಿಮಾವಂತರಾಗಿರಬೇಕು. ಇಂತಹ ಗುರುಗಳ ಗುಂಪಿನಲ್ಲಿ ಮಂತ್ರಾಲಯದ ರಾಘಪ್ಪ ಅಗ್ರಗಣ್ಯರಾಗಿದ್ದಾರೆ.

''ಸಂತಃ ಭೂಮಿಂ ತಪಸಾ ಧಾರಯಂತಿ'' ಎಂಬ ಪ್ರಮಾಣವು ಸಾಧುಸಜ್ಜನರಾದ ಮಹಾತ್ಮರು ತಮ್ಮ ತಪಸ್ಸಿನಿಂದ ಭೂಮಿಯನ್ನು ಧರಿಸುವರೆಂದು ನಿರೂಪಿಸುವುದು. ಜ್ಞಾನ ಭಕ್ತಿ ವೈರಾಗ್ಯ-ತ್ಯಾಗ-ತಪಸ್ಸುಗಳಿಂದ ಲೋಕಕಲ್ಯಾಣಾಸಕ್ತರಾಗಿ, ಜಗದ್ಧಾರಕರಾದ ಸಾಧುಸಂತರು ನಮ್ಮೀ ಭಾರತಾವನಿಯಲ್ಲಿ ಅನೇಕರು ಆಗಿಹೋಗಿ ತಮ್ಮ ಹೆಜ್ಜೆಯ ಗುರುತುಗಳನ್ನು ಬಿಟ್ಟು ಹೋಗಿ ಅಮರರಾಗಿದ್ದಾರೆ. ಇಂತಹ ಸಂತರಲ್ಲಿ ಸಂತರೂ, ಸಂತಸಾರ್ವಭೌಮರೂ ಆದವರು ನಮ್ಮ ಮಂತ್ರಾಲಯ ಪ್ರಭುಗಳಾದ ರಾಘಪ್ಪ.

ಅನೇಕ ಸಂತರು ತಾವು ಜೀವಂತವಿರುವಾಗ ಅಂದರೆ ಜಗತ್ತಿನ ಜನರ ದೃಷ್ಟಿಗೆ ಗೋಚರಿಸುತ್ತಿದ್ದಾಗ ಲೋಕದ ಜನರನ್ನು ಪೊರೆದು ಜಗದ್ಧಾರಕರೆಂದು ಕೀರ್ತಿಗಳಿಸಿದ್ದಾರೆ. ಆದರೆ ಸಂತಸಾರ್ವಭೌಮರಾದ ಮಂತ್ರಾಲಯ ಮುನೀಂದ್ರರು ಯುಗಯುಗಗಳಿಂದಲೂ, ತಮ್ಮ ಹಿಂದಿನ ಪ್ರಹ್ಲಾದ ಬಾಹ್ಲೀಕ ವ್ಯಾಸರಾಜಾವತರಾಗಳಿಂದಲೂ, ಇಂದಿನ ಶ್ರೀರಾಘವೇಂದ್ರಾವತಾರ ಕಾಲದಲ್ಲಿ ಜ್ಞಾನಪ್ರಸಾರಕ್ಕಾಗಿ ಶ್ರೀಹಂಸನಾಮಕ ಪರಮಾತ್ಮನಿಂದ ಪ್ರವೃತ್ತವಾದ ಪರಮಹಂಸ ವಂಶದಲ್ಲಿ ಶ್ರೀಮಧ್ವಾಚಾರ್ಯರ ವೇದಾಂತ ಸಾಮ್ರಾಜ್ಯವನ್ನಾಳುತ್ತಿರುವಾಗಲೂ ನಂತರ ಸಶರೀರರಾಗಿ ಬೃಂದಾವನ ಪ್ರವೇಶಾನಂತರವೂ ಏಳುನೂರು ವರ್ಷಗಳ ಕಾಲ ಲೋಕದ ಜನರನ್ನು ಉದ್ಧರಿಸಿ ಅವರ ಸರ್ವಾಂಗೀಣ ಕಲ್ಯಾಣ ಮಾಡಲು ತಪೋನಿರತರಾಗಿ ತಮ್ಮ ತಪಸ್ಸಿನ ಫಲವನ್ನು, ಪುಣ್ಯರಾಶಿಯನ್ನು ಧಾರೆ ಎರೆಯುವುದಾಗಿ ಅಭಯವಿತ್ತು ಬೃಂದಾವನಪ್ರವೇಶಮಾಡಿ ಅದ್ಯಾಪಿ ಜಗದ್ಧಾರಕ ಜಗದ್ಗುರುಗಳೆನಿಸಿ

ವಿಖ್ಯಾತಿಗಳಿಸಿದ್ದಾರೆ. ಶ್ರೀಹರಿಯನ್ನು ಕುರಿತು ತಪೋನಿರತರಾದ ಆ ಮಹನೀಯರು ಸಶರೀರರಾಗಿ ಬೃಂದಾವನ ಪ್ರವೇಶಮಾಡಿ, ಜನರ ಕಣ್ಣಿಗೆ ಅದೃಶ್ಯರಾಗಿ 319ವರ್ಷಗಳು ಉರುಳಿದ್ದರೂ ತಮ್ಮ ಅಭಯದಂತೆ ಜಗತ್ಕಲ್ಯಾಣಾಸಕ್ತರಾಗಿ "ಸತ್ಯ ಧರ್ಮರಕಾಯಚ" ಎಂಬ ತಮ್ಮ ಬಿರುದನ್ನು ಸತ್ಯಮಾಡಿ ತೋರಿಸುತ್ತಿದ್ದಾರೆ. "ಸಂತಃ ಭೂಮಿಂ ತಪಸಾ ಧಾರಯಂತಿ" ಎಂಬ ಅಮೃತವಚನವು ಮಂತ್ರಾಲಯದ ಸಂತಸಾರ್ವಭೌಮರಲ್ಲಿ ಅನ್ವರ್ಥಕವಾಗಿದೆಎಂದು ಧೈರ್ಯವಾಗಿ ಹೇಳಬಹುದು.

ಶ್ರೀಗುರುರಾಜರು ಜಗತ್ತಿಗೆ, ವೈದಿಕ ವಾಙ್ಮಯಕ್ಕೆ, ಸನಾತನಧರ್ಮ ಮತ್ತು ಸತ್ಸಂಪ್ರದಾಯಗಳಿಗೆ, ಕನ್ನಡನಾಡಿಗೆ ಮುಖ್ಯವಾಗಿ ಭಾರತದ ಸಮಸ್ತ ಜನತೆಗೆ ಮಾಡಿರುವ ಉಪಾಕರಗಳು ಅವರ ಅಮರಚರಿತೆಯಿಂದ ಅವರ ವ್ಯಕ್ತಿತ್ವದ ವಿವಿಧ ಮುಖಗಳಿಂದ ಸುವ್ಯಕ್ತವಾಗಿ ಸಿದ್ಧವಾಗಿವೆ.* ಇಂತಹ ಮಹಾಮಹಿಮರಾದ ಮಂತ್ರಾಲಯ ಮುನೀಂದ್ರರ ಜೀವನ ಚರಿತೆಯನ್ನು ಸಾರಭೂತವಾಗಿ "ಈ ಶ್ರೀಮಂತ್ರಾಲಯ ಮುನೀಂದ್ರರು" ಎಂಬ ಸಣ್ಣ ಹೊತ್ತಿಗೆಯಲ್ಲಿ "ಶ್ರೀ ಬೃಂದಮಂದಿರ ಕಂದ" ಎಂಬ ಅಂಕಿತನಾಮದಿಂದ ಸರಸಸುಂದರ ಶೈಲಿಯಲ್ಲಿ ಭಕ್ತಜನರ ಮುಂದಿಟ್ಟಿದ್ದೇವೆ. ಇದರ ವಾಚನದಿಂದ ಗುರುಭಕ್ತರು ಶ್ರೀರಾಯರ ಅನುಗ್ರಹಕ್ಕೆ ಪಾತ್ರರಾದಲ್ಲಿ ಗ್ರಂಥ ರಚನೆಯಶ್ರಮ ಸಾರ್ಥಕವಾಗುವುದು.

ಈಗ ಬನ್ನಿ, ಶ್ರೀಮಂತ್ರಾಲಯದ ಮುನೀಂದ್ರ ಚರಿತಾಮೃತಪಾನ ಮಾಡಿ ಶ್ರೇಯಃಪ್ರೇಯಗಳಿಗೆ ಪಾತ್ರರಾಗೋಣ.

'ಶ್ರೀ ಮತ್ಸದುಗರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಳಮ್'

ಪುಷ್ಯ ಶುಕ್ಲಬಿದಿಗೆ — ಗುರುಪಾದಕಿಂಕರ,
ಬೆಂಗಳೂರು — ರಾಜಾ ಶ್ರೀ ಗುರುರಾಜಾಚಾರ್ಯ
19-12.1990 — ಶ್ರೀ ಪರಿಮಳ ವಿದ್ಯಾಮಂದಿರ

---

*ಶ್ರೀ ಗುರುರಾಜರ ಎಲ್ಲ ಅವತಾರಗಳು, ಆ ಅವತಾರಗಳ ಚರಿತ್ರೆ, ಅವರಿಂದ ನಾಡು, ನುಡಿ, ವಿದ್ಯೆ, ಸಂಸ್ಕೃತಿ, ಧರ್ಮ, ಜನತೆಗಾಗಿರುವ ಮಹೋಪಕಾರಗಳನ್ನು ವಿಸ್ತಾರವಾಗಿ ತಿಳಿಯಲಪೇಕ್ಷಿಸುವವರು ನಮ್ಮ ವಿದ್ಯಾಮಂದಿರವು ಪ್ರಕಟಿಸಿರುವ "ಶ್ರೀರಾಘವೇಂದ್ರ ಗುರುಸಾರ್ವಭೌಮರು" ಮತ್ತು "ಕಲಿಯುಗ-ಕಲ್ಪತರು" ಗ್ರಂಥಗಳನ್ನೋದಿ ತಿಳಿಯಬಹುದಾಗಿದೆ. – ಪ್ರಕಾಶಕರು

ಶ್ರೀ ಗುರುರಾಜೋವಿಜಯತೇ

ಶ್ರೀ ಮಂತ್ರಾಲಯದ ಮುನೀಂದ್ರರು

1. ಮೂಲರೂಪ ಮತ್ತು ಅವತಾರಗಳು

ಶ್ರೀ ರಾಘವೇಂದ್ರ ಸ್ವಾಮಿಗಳು ಶ್ರೇಷ್ಠದೇವತೆಗಳು. ಶ್ರೀಹರಿ-ಲಕ್ಷ್ಮೀ ದೇವಿಯರ ಅನುಗ್ರಹಕ್ಕೆ ಮುಖ್ಯಪಾತ್ರರು. ಅವರಲ್ಲಿ ಸರ್ವದಾ ಶ್ರೀ ವಾಯುದೇವರ ವಿಶೇಷ ಸನ್ನಿಧಾನ ಉಂಟು. ಶ್ರೀ ಬ್ರಹ್ಮದೇವರು-ಮುಖ್ಯ ಪ್ರಾಣದೇವರು (ವಾಯು ದೇವರು), ಸರಸ್ವತೀದೇವಿ, ಭಾರತೀದೇವಿಯರ ಪರಮಾನುಗ್ರಹಕ್ಕೆ ಪಾತ್ರರೆಂದು ಅನೇಕ ಪ್ರಮಾಣಗಳಿಂದ ವ್ಯಕ್ತವಾಗುವುದು. ಶ್ರೀ ನೃಸಿಂಹಪುರಾಣ, ಗುರುಸ್ತೋತ್ರ, ಮತ್ತು ಹೃದಯ ಗುಹೆಯಲ್ಲಿ ಭಗವಂತನ ಸಾಕ್ಷಾತ್ಕಾರ ಪಡೆದ (ಅಪರೋಕ್ಷಜ್ಞಾನಿಗಳಾದ) ಕನ್ನಡ ಹರಿದಾಸರ ವಚನಗಳು ಮೇಲಿನ ವಿಚಾರವನ್ನು ಪುಷ್ಟೀಕರಿಸುವವು.

"ಶಂಕುಕರ್ಣಾಖ್ಯದೇವಸ್ತು ಬ್ರಹ್ಮಶಾಪಾಚ್ಚ ಭೂತಲೇ।
ಪ್ರಹ್ಲಾದ ಇತಿ ವಿಖ್ಯಾತೋ ಭೂಭಾರಕ್ಷಪಣೇ ರತಃ॥
ಸ ಏವ ರಾಘುವೇಂದ್ರಾಖ್ಯ ಯತಿರೂಪೇಣ ಸರ್ವದಾ।
ಕಲೌಯುಗೇ ರಾಮಸೇವಾಂ ಕುರ್ವನ್ಮಂತ್ರಾಲಯೇ ಭವತ್॥"

– ಶ್ರೀನೃಸಿಂಹಪುರಾಣ

ಸತ್ಯಲೋಕದಲ್ಲಿ ಚತುರಾನನ-ಸರಸತಿಯರ ಪರಮವಾತ್ಸಲ್ಯಕ್ಕೆ ಪಾತ್ರನಾಗಿದ್ದ ಶಂಕುಕರ್ಣ ಎಂಬ ಶ್ರೇಷ್ಠ ಕರ್ಮಜದೇವತೆಯು, ದುಷ್ಟಶಿಕ್ಷಣ, ಶಿಷ್ಟಪರಿಪಾಲನ, ಲೋಕಕಲ್ಯಾಣಗಳಿಗಾಗಿ ಅವತರಿಸಬೇಕೆಂಬ ಪರಮಾತ್ಮನ ಸಂಕಲ್ಪದಂತೆ, ಬ್ರಹ್ಮದೇವರ ಶಾಪರೂಪವರದಿಂದ ಕೃತಯುಗದಲ್ಲಿ ದೈತ್ಯರಾಜ ಹಿರಣ್ಯಕಶ್ಯಪನ ಸುತನಾಗಿ ಅವತರಿಸಿ, ಕಂಬದಲ್ಲಿ ಶ್ರೀ ನರಹರಿಯನ್ನು ಪ್ರತ್ಯಕ್ಷೀಕರಿಸಿಕೊಂಡು ಶ್ರೀಹರಿಯು ಸರ್ವತ್ರವ್ಯಾಪ್ತ, ಸರ್ವೋತ್ತಮನೆಂಬುದನ್ನು ತೋರಿಕೊಟ್ಟು, ಶ್ರೀ ನೃಸಿಂಹದೇವರಿಂದ ಅನಿತರಸಾಧಾರಣ ವರಗಳನ್ನು ವಿಶೇಷಾನುಗ್ರಹವನ್ನೂ ಪಡೆದು ಪ್ರಹ್ಲಾದರಾಜನೆಂಬ ಹೆಸರಿನಿಂದ

ವಿಖ್ಯಾತನಾದನು. ಅದೇ ಪ್ರಹ್ಲಾದನು ಮುಂದೆ ದ್ವಾಪರಯುಗದಲ್ಲಿ ದುಷ್ಟಶಿಕ್ಷಣ ಶಿಷ್ಟಜನ ಪರಿಪಾಲನೆಗಾಗಿ ಅವತರಿಸಿದ ಶ್ರೀಕೃಷ್ಣಪರಮಾತ್ಮನಲ್ಲಿ ರತನಾಗಿ ಹೆಸರುಗಳಿಸಿ ಕಲಿಯುಗದಲ್ಲಿ ಶ್ರೀವ್ಯಾಸರಾಜತೀರ್ಥರೆಂಬ ಅಭಿಧಾನದಿಂದ ಶ್ರೀ ಮೂಲಗೋಪಾಲಕೃಷ್ಣದೇವರ ಉಪಾಸಕನಾಗಿ ಕನ್ನಡ ಸಾಮ್ರಾಜ್ಯದ ಆರು ಜನ ಚಕ್ರವರ್ತಿಗಳಿಗೆ ಗುರುವಾಗಿದ್ದು, ಪರವಾದಿ ದಿಗ್ವಿಜಯ ದ್ವೈತಸಿದ್ಧಾಂತ ಸ್ಥಾಪನೆ, ಅಪೂರ್ವಗ್ರಂಥರಚನೆ, ವಿವಿಧವಿದ್ಯೆ, ಕಲೆ, ಸಂಸ್ಕೃತಿಗಳ ಪ್ರಸಾರಕ್ಕಾಗಿ ಸ್ಥಾಪಿತವಾದ ವಿಜಯನಗರದ ವಿಶ್ವವಿದ್ಯಾನಿಲಯದ ಕುಲಪತಿಯಾಗಿ, ವ್ಯಾಸಪಂಥ–ದಾಸಪಂಥಗಳಿಗೆ ಪೋಷಕರಾಗಿ, ಶ್ರೀ ವಿಜಯೀಂದ್ರತೀರ್ಥರು, ಶ್ರೀವಾದಿರಾಜತೀರ್ಥರು, ಶ್ರೀಪುರಂದರದಾಸರು, ಶ್ರೀಕನಕದಾಸರಂಥ ಜ್ಞಾನಿ ನಾಯಕರನ್ನು ಕನ್ನಡ ನಾಡಿಗೆ ಕರುಣಿಸಿ, ಸಮಸ್ತ ಜನರ ಉದ್ಧಾರ, ಕಲ್ಯಾಣಗಳನ್ನೆಸಗಿ ಕೀರ್ತಿಗಳಿಸಿದನು. ಅದೇ ಪ್ರಹ್ಲಾದರಾಜನೇ ಪುನಃ ಹದಿನಾರನೆಯ ಶತಮಾನದಲ್ಲಿ ತನ್ನ ನಾಲ್ಕನೆಯ ಹಾಗೂ ಅಂತಿಮಾವತಾರವನ್ನೆತ್ತಿ ಶ್ರೀರಾಘವೇಂದ್ರತೀರ್ಥರೆಂಬ ಯತಿರೂಪದಿಂದ ಅವತರಿಸಿ ಚತುರ್ಯುಗ ಮೂರ್ತಿಯಾದ ಶ್ರೀ ಮೂಲರಾಮಚಂದ್ರದೇವರ ಪೂಜೆಯನ್ನು ಮಾಡುತ್ತಾ ಕಲಿಯುಗದಲ್ಲಿ ಕಲಿಕಲ್ಮಷವನ್ನು ಕಳೆಯಲು ಸಮರ್ಥವಾದ ''ಮಂತ್ರಸಿದ್ಧಿಕ್ಷೇತ್ರ''ವೆಂದು ಹೆಸರುಗಳಿಸಿದ ಶ್ರೀಮಂತ್ರಾಲಯ ಕ್ಷೇತ್ರದಲ್ಲಿ ಖ್ಯಾತನಾದನು. ಶ್ರೀ ನೃಸಿಂಹ ಪುರಾಣವಚನವು ಇದನ್ನು ಸುಸ್ಪಷ್ಟಗೊಳಿಸುವುದು.

2. ಗುರುಗಳ ವಂಶ

ಭಾರತಾವನಿಯಲ್ಲಿ ವಿವಿಧ ವಿದ್ಯೆಗಳು, ಸದ್ಗುಣಗಳಿಗೆ ಹೆಸರಾದುದು. ಷಾಷ್ಟಿಕವಂಶ. –ಅರವತ್ತೊಕ್ಕಲು ಮನೆತನವೆಂದು ಪ್ರಸಿದ್ಧವಾದ, ಹದಿನಾಲ್ಕು ಗೋತ್ರ ಸಂಜಾತರಾದ ಈ ಮನೆತನದ ಪೂರ್ವಜರು ಕದಂಬ, ರಾಷ್ಟ್ರಕೂಟ, ಚಾಲುಕ್ಯ, ದೇವಗಿರಿ, ವಿಜಯನಗರ, ಮಧುರೆ, ಕಂಚಿ, ತಂಜಾಪುರ, ಮೈಸೂರು ಮೊದಲಾದ ರಾಜಾಸ್ಥಾನಗಳಲ್ಲಿ ವಿವಿಧ ಉನ್ನತ ಅಧಿಕಾರಿಗಳಾಗಿದ್ದು ನಾಡು, ನುಡಿ, ಧರ್ಮ, ಸಂಸ್ಕೃತಿ ಕಲೆಗಳ ಸೇವೆಮಾಡಿ ಕೀರ್ತಿಗಳಿಸಿದ್ದರು.

ವಿಜಯನಗರದ ಕನ್ನಡ ಸಾಮ್ರಾಜ್ಯಾವು ಶ್ರೀವ್ಯಾಸರಾಜರ ನಿರ್ದೇಶನ,

ಉಪದೇಶಗಳಿಂದ ಭಾರತದಲ್ಲೇ ಏಕೆ ಪರದೇಶಗಳಲ್ಲೂ ವಿಖ್ಯಾತವಾಗಿದ್ದಿತು. ವ್ಯಾಸರಾಯರ ಪ್ರಿಯಶಿಷ್ಯ ಕೃಷ್ಣದೇವರಾಯ. ಅವನ ಕಾಲ ಕರ್ನಾಟಕ ಸಾಮ್ರಾಜ್ಯದ ಸುವರ್ಣ ಯುಗವಾಗಿತ್ತು. ಷಾಷ್ಟಿಕವಂಶದ, ಯಜುಶ್ಶಾಖೆಯ, ಗೌತಮಗೋತ್ರದ "ಬೀಗಮುದ್ರೆ" ಮನೆತನದಲ್ಲಿ ಖ್ಯಾತನಾಮರಾಗಿದ್ದ ಕೃಷ್ಣಭಟ್ಟರು ವಿಜಯನಗರದ ಆಸ್ಥಾನ ಮತ್ತು ವಿಶ್ವವಿದ್ಯಾಲಯಗಳಲ್ಲಿ ಮಹಾಪಂಡಿತ ಸ್ಥಾನದಲ್ಲಿ ಸೇವೆಸಲ್ಲಿಸುತ್ತಿದ್ದರು. ಶ್ರೀ ಶ್ರೀಪಾದರಾಜರಲ್ಲಿ ತರ್ಕ–ವೇದಾಂತಾದಿ ಶಾಸ್ತ್ರಗಳನ್ನೋದಿ ಪ್ರಕಾಂಡ ಪಂಡಿತರಾಗಿದ್ದರು, ಸಂಗೀತ, ಕಲೆ ಅವರಿಗೆ ಮನೆತನದ ಪರಂಪರೆಯಿಂದ ಒಲಿದು ಬಂದಿತ್ತು. ವೀಣಾವಾದನ ದಲ್ಲಿ ಪ್ರತಿಭಾನ್ವಿತ ಪ್ರಾವೀಣ್ಯಪೂರ್ಣರಾಗಿದ್ದ ಅವರ ವೀಣಾವಾದನ ಕೌಶಲದಿಂದ ಪ್ರಭಾವಿತನಾಗಿದ್ದ ಸಾಮ್ರಾಟ್ ಕೃಷ್ಣದೇವರಾಯ ಕೃಷ್ಣಭಟ್ಟರಿಂದ ವೀಣಾವಾದನ ಕಲೆಯನ್ನು ಅಭ್ಯಾಸಮಾಡಿ ಧನಕನಕ ವಸ್ತ್ರಾಭರಣ ಮುಕ್ತಾಮಾಲೆಗಳನ್ನು "ಗುರುದಕ್ಷಿಣೆ"ಯಾಗಿತ್ತು ಗೌರವಿಸಿದನು.*

ಕೃಷ್ಣಭಟ್ಟರಿಗೆ ಕನಕಾಚಲಭಟ್ಟರೆಂಬ ಪುತ್ರರಿದ್ದರು. ಅವರು ನ್ಯಾಯವೇದಾಂತಾದಿ ಶಾಸ್ತ್ರಗಳಲ್ಲಿ, ವೀಣಾವಾದನದಲ್ಲಿ ಶ್ರೇಷ್ಠ ಪಂಡಿತ ರಾಗಿದ್ದರು. ಅವರಿಗೆ ತಿಮ್ಮಣ್ಣಾಚಾರ್ಯರೆಂಬ ಸತ್ಪುತ್ರರಾದರು. ಅವರು ತಂದೆಯವರಲ್ಲಿ ಸಂಸ್ಕೃತ, ಕನ್ನಡಭಾಷೆ ಬಾಲ್ಯಪಾಠ, ವೀಣಾವಾದನಕಲೆಯನ್ನು ಶ್ರದ್ಧೆಯಿಂದ ಕಲಿಯುತ್ತಿದ್ದರು. ಇದೇ ಸಂದರ್ಭದಲ್ಲಿ ಕನ್ನಡಿಗರ ದೌರ್ಭಾಗ್ಯದಿಂದ ವಿಜಯನಗರದ ಪತನವಾಗಿ ನೂರಾರುಜನ ಪಂಡಿತರು ಪ್ರಾಣ ಉಳಿಸಿಕೊಂಡು ಹೇಗೋ ಪಾರಾಗಿ ಮಧುರೆ, ತಂಜಾಪುರಗಳಿಗೆ ಬಂದು ಅಲ್ಲಿನ ರಾಜಾಸ್ಥಾನಗಳಲ್ಲಿ ಆಶ್ರಯ ಪಡೆದರು. ಈ ಗುಂಪಿನಲ್ಲಿ ಶ್ರೀ ಕನಕಾಚಲ ಭಟ್ಟರೂ ಇದ್ದರು. ಕನಕಾಚಲಭಟ್ಟರು ಪತ್ನೀಪುತ್ರರೊಡನೆ ಕುಲಗುರುಗಳೂ, ವಂಶಬಂಧುಗಳೂ ಆದ ಶ್ರೀವಿಜಯಿಂದ್ರತೀರ್ಥರ ಸನ್ನಿಧಿಗೆ ಕುಂಭಕೋಣಕ್ಕೆ ಬಂದು ಗುರುಗಳ ಆಶ್ರಯ ಪಡೆದರು. ವಿಜಯೀಂದ್ರರು ಕನಕಾಚಲಭಟ್ಟರನ್ನು

---

* ಉಪದಿಶ್ಯ ಸ ಕೃಷ್ಣ ಭೂವರಾಲೇ ರ್ನಿಜಗಾಂಧರ್ವಕಲಾಂ ಕಲಾಮಗೃಣ್ಹಾತ್ ।
ಘನಮೌಕ್ತಿಕಗುಚ್ಛಹಾರಪೂರ್ವಾಂ ಬಿರುದಾಲೀಂ ಗುರುದಕ್ಷಿಣಾಪದೇಶಾತ್ ॥
– ಶ್ರೀ ರಾಘವೇಂದ್ರ ವಿಜಯ

ಕಾವೇರಿಪಟ್ಟಣಂನಲ್ಲಿದ್ದ ಶ್ರೀ ಮಠದ ವಿದ್ಯಾಪೀಠದ ಅಧ್ಯಕ್ಷರನ್ನಾಗಿ ಮಾಡಿ ಅಲ್ಲಿಗೆ ಕಳಿಸಿದರು. ಕನಕಾಚಲಭಟ್ಟರ ಪುತ್ರನಾದ 12-13ವಯಸ್ಸಿನ ತಿಮ್ಮಣ್ಣನ ಸೂಕ್ಷ್ಮಬುದ್ಧಿ, ಪ್ರತಿಭೆಗಳನ್ನು ಕಂಡು ಅವನನ್ನು ತಮ್ಮಲ್ಲೇ ಇಟ್ಟುಕೊಂಡು ಅವನಿಗೆ ನ್ಯಾಯ-ವೇದಾಂತಾದಿ ಶಾಸ್ತ್ರಪಾಠಗಳನ್ನು ಸ್ವತಃ ಹೇಳಿ ಶ್ರೇಷ್ಠ ಪಂಡಿತನನ್ನಾಗಿ ಮಾಡಿದರು. ಉತ್ತಮ ವೀಣಾವಾದಕನಾಗಿದ್ದ ತಿಮ್ಮಣ್ಣ; ಅರವತ್ತುನಾಲ್ಕು ಕಲೆಗಳಲ್ಲಿ ಅದ್ವಿತೀಯರಾಗಿದ್ದ ಶ್ರೀ ವಿಜಯಿಂದ್ರರಿಂದ ವೀಣಾವಾದನ ಕಲೆಯ ವೈಶಿಷ್ಟ್ಯಗಳನ್ನು ಕಲಿತು ಸತತ ಸಾಧನೆಯಿಂದ ಅಸಾಧಾರಣ ಪಾಂಡಿತ್ಯ ಸಂಪಾದಿಸಿದನು.

ಒಮ್ಮೆ ಉತ್ತರಾದಿ ವಾದ್ಯಪಂಡಿತರು ನಾಲ್ವರು ತಂಜಾವೂರಿಗೆ ಬಂದು ವೀಣಾವಾದ್ಯ ಕಲೆಯಲ್ಲಿ ಅಲ್ಲಿನ ಆಸ್ಥಾನಪಂಡಿತರನ್ನು ಸೋಲಿಸಿ ಜಯಪತ್ರ ಕೊಡಬೇಕೆಂದು ತಂಜಾಪುರಾಧೀಶ ಚವ್ವಪ್ಪ ನಾಯಕನಲ್ಲಿ ಕೇಳಿದರು. ರಾಜನು ಆಸ್ಥಾನದ ಗೌರವ ಉಳಿಸಿಕೊಳ್ಳಲು ಗುರುಗಳಾದ ವಿಜಯೀಂದ್ರರಿಗೆ ಶರಣಾದ. ಶ್ರೀಗಳವರು ತಿಮ್ಮಣ್ಣನೊಡನೆ ತಂಜಾಪುರಕ್ಕೆ ಬಂದರು. ಆಸ್ಥಾನದಲ್ಲಿ ತಿಮ್ಮಣ್ಣ ಗುರುಗಳ ಅಪ್ಪಣೆಯಂತೆ ಉತ್ತರಭಾರತದ ವೀಣಾವಾದಕರೊಡನೆ ಸ್ಪರ್ಧಿಸಿ ಸುಲಭವಾಗಿ ಅವರನ್ನು ಜಯಿಸಿ ತಂಜಾಪುರದ ಗೌರವವನ್ನು ಕಾಪಾಡಿದನು. ಇದರಿಂದ ಪ್ರೀತನಾದ ರಾಜ ತಿಮ್ಮಣ್ಣನಿಗೆ "ಬಾಲ ಸರಸ್ವತಿ" ಎಂದು ಪ್ರಶಸ್ತಿಯಿತ್ತು ಚೆನ್ನಾಗಿ ಸನ್ಮಾನಿಸಿದ. ತಿಮ್ಮಣ್ಣನ ಕೀರ್ತಿ ಎಲ್ಲೆಡೆ ಹರಡಿತು. ಅದೇ ಸಮಯದಲ್ಲಿ ಕನಕಾಚಲಭಟ್ಟರು ದಿವಂಗತರಾದರು. ಶ್ರೀಗಳವರು ತಿಮ್ಮಣ್ಣಾಚಾರ್ಯನಿಗೆ ಸಮಾಧಾನ ಹೇಳಿ ತಂದೆಯ ಸ್ಥಾನದಲ್ಲಿ ಕಾವೇರಿಪಟ್ಟಣದ ವಿದ್ಯಾಪೀಠದ ಅಧ್ಯಕ್ಷನನ್ನಾಗಿ ಮಾಡಿದ್ದಲ್ಲದೆ ತಮ್ಮ ಪೂರ್ವಾಶ್ರಮ ಬಂಧುಗಳ ಪುತ್ರಿ ಸೌ॥ ಗೋಪಿಕಾಂಬಾ ಎಂಬ ಕನ್ಯೆಯೊಡನೆ ವಿವಾಹಮಾಡಿಸಿದರು. ಗೋಪಿಕಾಂಬಾದೇವಿಯು ಸಂಗೀತ ಸಾಹಿತ್ಯ ವಿಶಾರದಳಾಗಿದ್ದುದಲ್ಲದೆ ಕವಿಯತ್ರಿಯೂ ಆಗಿದ್ದಳು. ಶೀಲಾದಿ ಸದ್ಗುಣಭರಿತಳಾದ ಗೋಪಿಕಾಂಬೆಯೊಡನೆ ತಿಮ್ಮಣ್ಣಾಚಾರ್ಯರು ಸಂತೋಷದಿಂದ ದಾಂಪತ್ಯಜೀವನ ನಡೆಸಹತ್ತಿದರು.

ಕ್ರಿ.ಶ. 1575ರಲ್ಲಿ ಶ್ರೀ ಸುರೇಂದ್ರತೀರ್ಥರು ಪಾಷ್ಟಿಕವಂಶದ ತಮ್ಮ ಶಿಷ್ಯರಾದ ಶ್ರೀ ವಿಜಯೀಂದ್ರತೀರ್ಥರ ವಂಶಬಂಧುಗಳಾದ ಶ್ರೀ

ನಾರಾರಾಯಣಚಾರ್ಯರಿಗೆ ಪರಮಹಂಸಾಶ್ರಮವಿತ್ತು, ಮಂತ್ರಮುದ್ರಾಧಾರಣ. ಗುರೂಪದೇಶ ಮಾಡಿ ವಿಜಯೀಂದ್ರರಿಂದಲೂ ಮಾಡಿಸಿ, ಶ್ರೀ ವಿಜಯೀಂದ್ರ ತೀರ್ಥರಿಂದ "ಶ್ರೀ ಸುಧೀಂದ್ರ ತೀರ್ಥರು" ಎಂಬ ಹೆಸರಿಡಿಸಿ ಶ್ರೀಮದಾಚಾರ್ಯರ ವಿದ್ಯಾಸಿಂಹಾಸನದಲ್ಲಿ ಮಂಡಿಸಿ ಸಾಮ್ರಾಜ್ಯಾಭಿಷೇಕಮಾಡಿಸಿ ವಿಜಯೀಂದ್ರರ ಶಿಷ್ಯರನ್ನಾಗಿ ಮಾಡಿ ಅನುಗ್ರಹಿಸಿದರು. ಶ್ರೀ ವಿಜಯೀಂದ್ರರು ಶಿಷ್ಯರಿಗೆ ಸಕಲ ಶಾಸ್ತ್ರಗಳ ಪಾಠಹೇಳಿ ಷಡ್ದರ್ಶನಗಳಲ್ಲಿ, ವಾದವಿದ್ಯೆಯಲ್ಲಿ ಪ್ರಚಂಡ ಪಂಡಿತರನ್ನಾಗಿ ಮಾಡಿದರು.

ಒಮ್ಮೆ ಶ್ರೀ ಸುಧೀಂದ್ರರು ತಿಮ್ಮಣ್ಣಾಚಾರ್ಯರೇ ಮೊದಲಾದ ಪಂಡಿತರೊಡನೆ ಕರ್ನಾಟಕ ಸಾಮ್ರಾಟ್ ಇಮ್ಮಡಿ ಶ್ರೀರಂಗರಾಜನು ಹಂಪಿಯಲ್ಲಿ ಏರ್ಪಡಿಸಿದ್ದ ವಿದ್ವತ್ಸಭೆಯ ಅಧ್ಯಕ್ಷತೆ ವಹಿಸಲು ಗುರುಗಳ ಆಜ್ಞೆಯಂತೆ ಹಂಪಿಗೆ ತೆರಳಿ ವಿದ್ವತ್ಸಭೆಯ ಅಧ್ಯಕ್ಷತೆವಹಿಸಿ, ಅನೇಕ ವಾಕ್ಯಾರ್ಥಗಳಲ್ಲಿ ವಾದಿಗಳೊಡನೆ ವಾದಮಾಡಿ ಜಯಗಳಿಸಿದರು. ತಿಮ್ಮಣ್ಣಾಚಾರ್ಯರು ಪರವಾದಿ ನಿಗ್ರಹ ಮಾಡಿ ಮಹಾ ಪ್ರತಿಭೆ ತೋರಿದರು. ಇದರಿಂದ ಪ್ರಭಾವಿತನಾದ ಶ್ರೀರಂಗರಾಜ ತಿಮ್ಮಣ್ಣಾಚಾರ್ಯರಿಗೆ ಪೀಠಾಧೀಶರಿಗೆ ಮಾತ್ರ ಸಲ್ಲುವ "ಹಗಲು ದೀವಟಿಕೆ" ಹಿಡಿಸಿಕೊಂಡು* ಮೆರೆಯುವ ಪ್ರಶಸ್ತಿ ಗೌರವ ನೀಡಿ ಸನ್ಮಾನಿಸಿದನು. ಸಭೆ ಮುಗಿಸಿಕೊಂಡು ಕುಂಭಕೋಣಕ್ಕೆ ಮರಳಿದ ಮೇಲೆ ಶ್ರೀ ಸುರೇಂದ್ರರ ಅಣತಿಯಂತೆ ಶ್ರೀ ವಿಜಯೀಂದ್ರರು ತಂಜಾಪುರದ ಚವ್ವಪ್ಪನಾಯಕನು ಅರ್ಪಿಸಿದ್ದ "ಅರವಿಲಿ ಮಂಗಲಂ" ಎಂಬ ಗ್ರಾಮದಲ್ಲಿ 30 ಜನ ಪಂಡಿತರಿಗೆ ವೃತ್ತಿಗಳನ್ನು ದಾನ ಮಾಡಿದರು. ಆ ಮೂವತ್ತು ಜನರಲ್ಲಿ ಶ್ರೀ ತಿಮ್ಮಣ್ಣಾಚಾರ್ಯರೂ ಒಬ್ಬರು.**

ತಿಮ್ಮಣ್ಣಾಚಾರ್ಯ ದಂಪತಿಗಳಿಗೆ ಶ್ರೀ ತಿರುಪತಿ ಶ್ರೀನಿವಾಸನ ಅನುಗ್ರಹ

---

* ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಷಹಾ-ಅಮಲ್, ಶ್ರೀ ರಾಘವೇಂದ್ರ ವಿಜಯ.

** ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಷಹಾ-ಅಮಲ್, ತಾಮ್ರಶಾಸನ, ಶ್ರೀ ರಾಘವೇಂದ್ರ ವಿಜಯ

ದಿಂದ ಓರ್ವ ಪುತ್ರಿ ಮತ್ತು ಮಗನು ಜನಿಸಿದರು. ಮಗಳಿಗೆ ವೆಂಕಟಾಂಬಾ ಎಂದೂ ಮಗನಿಗೆ ಗುರುರಾಜ ಎಂದೂ ತಿಮ್ಮಣ್ಣಾರ್ಯರು ನಾಮ ಕರಣಮಾಡಿದರು. ಪುತ್ರ-ಪುತ್ರಿಯರ ಬಾಲಲೀಲೆ ಕಂಡಾನಂದಿಸುತ್ತಾ ಆಚಾರ್ಯ ದಂಪತಿಗಳು ಸುಖವಾಗಿ ಜೀವನ ಸಾಗಿಸಿದರು.

3. ಗುರುಗಳ ಅವತಾರ

ಕಾವೇರಿ ಪಟ್ಟಣದಲ್ಲಿ ವಿದ್ಯಾಪೀಠದಲ್ಲಿ ಪಾಠ ಪ್ರವಚನಾಸಕ್ತರಾಗಿದ್ದ ತಿಮ್ಮಣ್ಣಾಚಾರ್ಯರಿಗೆ ಪುನಃ ಪುತ್ರರಾಗದಿದ್ದುದರಿಂದ ಅವರು ವಂಶದೀಪಕನೂ, ಶ್ರೇಷ್ಠ ಪಂಡಿತನೂ ಆದ ಓರ್ವ ಶ್ರೇಷ್ಠಪುತ್ರನು ತಮಗಾಗಬೇಕೆಂದು ಬಯಸಿದರು. ಆಚಾರ್ಯದಂಪತಿಗಳು ತಿರುಪತಿಯ ಶ್ರೀನಿವಾಸನಿಗೆ ಶರಣು ಹೋದರು. ಬೆಟ್ಟದಲ್ಲಿ ಕ್ಷೀರವ್ರತಾದಿಗಳಿಂದಲೂ. ಅನವರತ ಸೇವೆಯಿಂದಲೂ ತಿಮ್ಮಣ್ಣಾಚಾರ್ಯದಂಪತಿಗಳು ಕುಲದೇವನನ್ನು ಪ್ರತಿದಿನ ಆರಾಧಿಸಲಾರಂಭಿಸಿದರು. ಈ ದಂಪತಿಗಳ ಸೇವೆಯಿಂದ ಸುಪ್ರೀತನಾದ ಶ್ರೀನಿವಾಸನು ಸ್ವಪ್ನದಲ್ಲಿ ದರ್ಶನವಿತ್ತು "ಆಚಾರ್ಯ, ನಿಮ್ಮ ತಪಸ್ಸು ಸೇವೆಗಳಿಂದ ಪ್ರಸನ್ನನಾಗಿದ್ದೇನೆ. ನಿನ್ನ ಪ್ರಾರ್ಥನೆಯಂತೆ ನಿಮ್ಮ ವಂಶ ಮಾತ್ರವಲ್ಲ. ಹಂಸವಂಶವನ್ನೂ ಅಭಿವೃದ್ಧಿಗೊಳಿಸಿ ಅಖಂಡ ತತ್ವಶಾಸ್ತ್ರ ಪ್ರಪಂಚಕ್ಕೇ ಮಹೋಪಕಾರಮಾಡಿ ಜಗದ್ವಂದ್ಯನಾಗಿ ಕೀರ್ತಿಗಳಿಸಿ, ಲೋಕಕಲ್ಯಾಣಮಾಡುವ ನನ್ನ ಪರಮ ಭಕ್ತನನ್ನೇ ನಿನಗೆ ಪುತ್ರನನ್ನಾಗಿ ಕರುಣಿಸಿದ್ದೇನೆ. ಅವನಿಂದ ನಿಮ್ಮ ವಂಶದಕೀರ್ತಿ ಬೆಳಗುವುದು". ಎಂದು ವರವಿತ್ತು ಅದೃಶ್ಯನಾದನು. ಬೆಳಗಾದಮೇಲೆ ದೇವರ ಅನುಗ್ರಹವನ್ನು ಸ್ಮರಿಸಿ ಆನಂದಪುಳಕಿತರಾಗಿ ತಿಮ್ಮಣ್ಣಾಚಾರ್ಯದಂಪತಿಗಳು ದೇವರಿಗೆ ಸೇವೆಸಲ್ಲಿಸಿ ಕಾವೇರೀಪಟ್ಟಣಕ್ಕೆ ಮರಳಿಬಂದರು.

'ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ' ಶ್ರೀಹರಿಯು ಪ್ರಸನ್ನನಾದರೆ ಏನುತಾನೆ ಅಲಭ್ಯವಾದೀತು. ಶ್ರೀ ಗೋಪಿಕಾಂಬಾದೇವಿಯರು ಶ್ರೀನಿವಾಸನ ಅನುಗ್ರಹದಿಂದ ಗರ್ಭಧರಿಸಿದರು. ಎಲ್ಲರಿಗೂ ಆನಂದವಾಯಿತು. ಗೋಪಿಕಾಂಬಾದೇವಿ ಶಾಲೀವಾಹನ ಶಕೆ 1517ನೇ ಮನ್ಮಥಸಂ॥ ಫಾಲ್ಗುಣ ಶುಕ್ಲ ಸಪ್ತಮೀ ಗುರುವಾರ (ಮಾರ್ಚ್ - 1595) ಮೃಗಶಿರಾ ನಕ್ಷದಲ್ಲಿ

ಸಕಲಗ್ರಹಗಳೂ ಶುಭಸ್ಥಾನದಲ್ಲಿರುವಾಗ ಸರ್ವಲಕ್ಷಣ ಸಂಪನ್ನನಾದ ಪುತ್ರನನ್ನು ಪ್ರಸವಿಸಿದಳು. ಲೋಕಕಲ್ಯಾಣಕ್ಕೆ ಶ್ರೀ ಪ್ರಹ್ಲಾದರಾಜರು ಪುನಃ ಅವತರಿಸಿದರು. ತಿಮ್ಮಣ್ಣಾಚಾರ್ಯರು ವೇದೋಕ್ತರೀತಿಯಲ್ಲಿ ಮಗನ ಜಾತಕರ್ಮ ನಾಮಕರಣ ಮಹೋತ್ಸವಗಳನ್ನು ನೆರವೇರಿಸಿ ಶ್ರೀ ವೆಂಕಟೇಶನ ವರದಿಂದ ಜನಿಸಿದ ಪುತ್ರನು ಶ್ರೀ ವೆಂಕಟೇಶನಂತೆಯೇ ಲೋಕಪೂಜ್ಯನಾಗಲಿ ಎಂದು ಮಗನಿಗೆ ''ವೇಂಕಟನಾಥ'' ಎಂದು ಹೆಸರಿಟ್ಟರು. ಮಗುವಿನ ಜಾತಕವನ್ನು ಪರಿಶೀಲಿಸಿದ ಜ್ಯೋತಿಷಿಗಳು ಈ ಬಾಲಕನು ಲೋಕಕಲ್ಯಾಣಕಾರಕನಾಗಿ ಜಗನ್ಮಾನ್ಯನಾಗುವನು ಎಂದು ಭವಿಷ್ಯ ನುಡಿದರು. ಬಾಲಕ ವೆಂಕಟನಾಥನು ತನ್ನ ಅರ್ಥಪೂರ್ಣ ಬಾಲಲೀಲೆಗಳಿಂದ ತಂದೆ ತಾಯಿ ಬಾಂಧವರನ್ನು ಆನಂದಗೊಳಿಸುತ್ತಾ ಶುಕ್ಲ ಪಕ್ಷದ ಚಂದ್ರನಂತೆ ಅಭಿವೃದ್ಧಿಸಿದನು.

4. ಚೌಲ ಮತ್ತು ಅಕ್ಷರಾಭ್ಯಾಸ

ತಿಮ್ಮಣ್ಣಾಚಾರ್ಯರು ಮೂರನೇವಯಸ್ಸಿನಲ್ಲಿ ವೇಂಕಟನಾಥನಿಗೆ ಚೌಲ ಅಕ್ಷರಾಭ್ಯಾಸ ಸಂಸ್ಕಾರವನ್ನು ವೈಭವದಿಂದ ನೆರವೇರಿಸಿದರು. ಆಚಾರ್ಯರು ಮರಳಿನ ಮೇಲೆ ಓಂಕಾರವನ್ನು ಬರೆದು ಪೂಜಿಸಿ, ಮಗನಿಂದಲೂ ಪೂಜೆ ಮಾಡಿಸಿ ''ಮಗು! ಇದನ್ನು ಓಂ ಎಂದು ಹೇಳುತ್ತಾ ಬರೆಯಪ್ಪ'' ಎಂದರು. ಆಗ ಮೂರು ವರ್ಷದ ವೆಂಕಟನಾಥನು ''ತಂದೆಯೇ, ಈ ಸಣ್ಣ ರೇಖೆಯು ಸಕಲವೇದ ಪ್ರತಿಪಾದ್ಯನಾದ ಶ್ರೀವಿಷ್ಣುವಿನ ಗುಣಪೂರ್ಣತ್ವವನ್ನು ಹೇಗೆ ನಿರೂಪಿಸುವುದು? ಇದೆಂತು ಗುಣಪೂರ್ಣತ್ವ ಸಂಜ್ಞೆ ಎನಿಸುವುದು?'' ಎಂದು ಪ್ರಶ್ನಿಸಿ ತಂದೆ ಮತ್ತು ಅಲ್ಲಿ ಸೇರಿದ್ದ ಪಂಡಿತ ಮಂಡಲಿಯನ್ನು ವಿಸ್ಮಯಗೊಳಿಸಿದನು. ಮಾತ್ರವಲ್ಲ; ತಾನೇ ಓಂಕಾರಾರ್ಥವನ್ನು ಪ್ರತಿಪಾದಿಸಿದನು. ಸರ್ವರೂ ಈ ಬಾಲಕನು ಸಾಮಾನ್ಯನಲ್ಲ. ದೇವಾಂಶ ಸಂಭೂತನಾದ ಜ್ಞಾನಿಯು, ಮುಂದೆ ಇವನಿಂದ ತತ್ವಜ್ಞಾನ ಪ್ರಸಾರ, ಲೋಕ ಕಲ್ಯಾಣಗಳಾಗುವವೆಂದು ಹೊಗಳಿ, ಇಂತಹ ಪುತ್ರನನ್ನು ಪಡೆದ ಆಚಾರ್ಯರನ್ನು ಶ್ಲಾಘಿಸಿದರು. ತಿಮ್ಮಣಾಚಾರ್ಯರು ವೆಂಕಟನಾಥನಿಗೆ ನಾನಾಲಿಪಿ ಸಂಸ್ಕೃತ-ಕನ್ನಡ ಭಾಷಾ ಪರಿಚಯ ಮಾಡಿಸಿ ಪಾಠ ಹೇಳುತ್ತಿದ್ದರು ಮತ್ತು ವೀಣಾಭ್ಯಾಸವನ್ನು ಮಾಡಿಸುತ್ತಿದ್ದರು. ತೀಕ್ಷ್ಣ ಮತಿಯಾದ ವೆಂಕಟನಾಥನು ಶ್ರದ್ಧೆಯಿಂದ ಕಲಿಯಹತ್ತಿದನು.

ತಿಮ್ಮಣ್ಣಾಚಾರ್ಯರು ಪ್ರಾಪ್ತವಯಸ್ಕಳಾದ ಪುತ್ರಿ ವೆಂಕಟಾಂಬೆಯ ವಿವಾಹವನ್ನು ಮಧುರೆಯ ರಾಜಾಸ್ಥಾನ ಮಹಾಪಂಡಿತರಾದ ಶ್ರೀಲಕ್ಷ್ಮೀ ನರಸಿಂಹಾಚಾರ್ಯರೊಡನೆ ನೆರವೇರಿಸಿದರು. ಅದಾದ ಸ್ವಲ್ಪಕಾಲದಲ್ಲಿ ಜ್ಯೇಷ್ಠಪುತ್ರ ಗುರುರಾಜನಿಗೆ ಉಪನಯನವನ್ನೂ ಮಾಡಿ ಗುರುಕಲವಾಸಕ್ಕೆ ಅಧಿಕಾರಿಯನ್ನಾಗಿ ಮಾಡಿದರು. ಕೆಲವರ್ಷಗಳನಂತರ ಗುರುರಾಜನಿಗೆ ಶ್ರೀರಂಗದಲ್ಲಿರುವ ಅರವತ್ತೊಕ್ಕಲು ಮನೆತನದ ಕಮಲಾ ಎಂಬ ಕನ್ಯೆಯನ್ನು ತಂದುಕೊಂಡು ವಿವಾಹ ಮಾಡಿಸಿದರು. ಕೆಲಕಾಲಾನಂತರ ತಿಮ್ಮಣ್ಣಾಚಾರ್ಯರು ಸ್ವರ್ಗಸ್ಥರಾದರು. ವೆಂಕಟನಾಥ'ನ ರಕ್ಷಣೆಯ ಭಾರ ಅಣ್ಣ ಗುರುರಾಜಾಚಾರ್ಯರ ಮೇಲೆ ಬಿದ್ದಿತು. ಗುರುರಾಜಚಾರ್ಯರು ತಮ್ಮನಿಗೆ ಮಂತ್ರ, ಕಾವ್ಯ, ವೀಣಾದಿ ಪಾಠಗಳನ್ನು ಹೇಳಿಕೊಡುತ್ತಾ ಪ್ರೀತಿಯಿಂದ ಕಾಪಾಡುತ್ತಿದ್ದರು.

5. ಉಪನಯನ-ಗುರುಕುಲವಾಸ

ಕುಮಾರ ವೆಂಕಟನಾಥ ಅಣ್ಣ ಅತ್ತಿಗೆಯರ ಲಾಲನೆ ಪೋಷಣೆಯಲ್ಲಿ ಬೆಳೆಯಹತ್ತಿದನು. ಶಾಲೀವಾಹನ ಶಕೆ 1524ನೆಯ ಶುಭಕೃತು ಸಂ॥ ವೈಶಾಖ ಮಾಸದಲ್ಲಿ (ಕ್ರಿ.ಶ. 1602) ಗುರುರಾಜಾಚಾರ್ಯರು ಸಹೋದರ ವೆಂಕಟನಾಥನಿಗೆ ವಿಜೃಂಭಣೆಯಿಂದ ಉಪನಯವನ್ನು ನೆರವೇರಿಸಿ, ಉಪನಯನಕ್ಕೆ ಮದುರೆಯಿಂದ ಬಂದಿದ್ದ ಭಾವ ಲಕ್ಷ್ಮೀನರಸಿಂಹಾಚಾರ್ಯರಲ್ಲಿ ವಿದ್ಯಾಭ್ಯಾಸ-ಗುರುಕುಲವಾಸಕ್ಕಾಗಿ ವೆಂಕಟನಾಥನನ್ನು ಅಕ್ಕ ವೆಂಕಟಾಂಬಾದೇವಿ ಮತ್ತು ಲಕ್ಷ್ಮೀನರಸಿಂಹಾಚಾರ್ಯರ ಜೊತೆಗೆ ಮಧುರೆಗೆ ಕಳುಹಿಸಿದರು.

ವೆಂಕಟನಾಥನು ಅಕ್ಕ-ಭಾವಂದಿರ ಮನೆಯಲ್ಲಿದ್ದು ಮಧುರೆಯ ಸಂಸ್ಕೃತ ವಿದ್ಯಾಪೀಠದಲ್ಲಿ ಮತ್ತು ಮನೆಯಲ್ಲಿ ಭಾವ ಲಕ್ಷ್ಮೀನರಸಿಂಹಾಚಾರ್ಯರಲ್ಲಿಯೂ ವೇದ, ತರ್ಕ, ವ್ಯಾಕಾರಣ, ವೇದಾಂತ, ಮೀಮಾಂಸ ಸಾಹಿತ್ಯ, ಯೋಗಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಾ ಸುಮಾರು ಹತ್ತು ಹನ್ನೆರಡು ವರ್ಷಕಾಲ ಸತತ ಚಿಂತನ-ಅಭ್ಯಾಸಗಳಿಂದ ಮಹಾಪಂಡಿತನಾದನು. ಪ್ರತಿದಿನ ವೇದಾಧ್ಯನ, ಯೋಗಾಭ್ಯಾಸ, ವೀಣಾಭ್ಯಾಸ ಗಳನ್ನೂ, ಮಾಡುತ್ತಾ. ಸ್ನಾನ, ಸಂಧ್ಯಾ, ಅಗ್ನಿಕಾರ್ಯ, ದೇವಪೂಜಾ-ಜಪ

ಪಾರಾಯಣಾದಿಗಳನ್ನು ಶ್ರದ್ಧೆಯಿಂದಾಚರಿಸುತ್ತಾ ಸರ್ವರ ಗೌರವಕ್ಕೆ ಪಾತ್ರನಾದನು. ಮೃದುಭಾಷಣ, ಸರ್ವರೊಡನೆ ಸದ್ಭಾವನೆಗಳಿಂದ ಮಿತ್ರರು. ಗುರು ಹಿರಿಯರ ಪ್ರೀತಿಗೆ ಪಾತ್ರನಾದನು. ನೈಷ್ಠಿಕ ಬ್ರಹ್ಮಚರ್ಯ ಪರಿಪಾಲನೆ ಮಾಡುತ್ತಿದ್ದ ವೆಂಕಟನಾಥ ಅತ್ಯಂತ ತೇಜಸ್ವಿಯಾಗಿ ತಾರುಣ್ಯದಲ್ಲಿ ಪದಾರ್ಪಣ ಮಾಡಿದನು.

ರಾಘವೇಂದ್ರ ವಿಜಯ ಕಾವ್ಯದಲ್ಲಿ ವೇಂಕಟನಾಥನ ಸೌಂದರ್ಯವನ್ನು ಮನಮೋಹಕವಾಗಿ ವರ್ಣಿಸಿದ್ದಾರೆ. ಹದಿನೆಂಟರ ಹರಯದ ವೇಂಕಟನಾಥನಲ್ಲಿ ತಾರುಣ್ಯವು ತಾಂಡವಿಸುತ್ತಿತ್ತು. ಅವನ ರೂಪ ಅಲೌಕಿಕವಾಗಿತ್ತು. ತೇಜಃ ಪುಂಜ ಮುಖಕಮಲ, ತಾವರೆಯಂತೆ ಅರಳಿದ, ಮಿಂಚಿನಂತೆ ಹೊಳೆಯುವ ಕಣ್ಣುಗಳು, ಹವಳದ ಕುಡಿಯಂತೆ ಮಿರುಗುವ ಕೆಂದುಟಿಗಳು, ಬೆಳದಿಂಗಳನ್ನು ನಾಚಿಸುವ ದಂತಪಂಕ್ತಿ, ವಿಶಾಲವಾದ ಹಣೆ. ಗಿರಿಶಿಖರದಂತಿರುವ ಭುಜಪ್ರದೇಶ, ನೀಳು ತೋಳುಗಳು ವಿಸ್ತಾರವಾದ ವಕ್ಷಃಸ್ಥಳ, ನಿಮ್ನನಾಭಿ, ಸಿಂಹಕಟಿ, ಯೋಗಾಭ್ಯಾಸ ವ್ಯಾಯಮಗಳ ಸಾಧನೆಯಿಂದ ಹುರಿಗಟ್ಟಿದ ಪರಿಪುಷ್ಟವಾದ ದೇಹದ ಮಾಟ ಆಕರ್ಷಕವಾಗಿತ್ತು. ನೋಡಿದಷ್ಟೂ ಮತ್ತೆ ಮತ್ತೆ ನೋಡಬೇಕೆಂಬ ಹಂಬಲ ವೀಕ್ಷಕರ ಮನದಲ್ಲಿ ಮಿಡಿಯುವಂತಿರುವ, ಜಗದ ಸೌಂದರ್ಯ ಸಾರವನ್ನೆಲ್ಲಾ ಸೇರಿಸಿ ಬ್ರಹ್ಮ ದೇವರು ಸೃಜಿಸಿದಂತಿದ್ದರು ನಮ್ಮ ವೆಂಕಟನಾಥರು.

6. ವೈಣಿಕಚಕ್ರವರ್ತಿ

ಮಧುರೆಯ ಮಹಾರಾಜ ಕುಮಾರ ಕೃಷ್ಣಪ್ಪನಾಯಕ ದೀಪಾವಳಿ ಮಹಾಭಿಷೇಕವನ್ನು ವಿದ್ವತ್ಸಭೆಯನ್ನೂ ಮಧುರೆಯಲ್ಲಿ ನೆರವೇರಿಸಬೇಕೆಂದು ತನ್ನ ಗುರುಗಳಾದ ಶ್ರೀ ವಿಜಯೀಂದ್ರತೀರ್ಥರವನ್ನು ಪ್ರಾರ್ಥಿಸಿದ್ದರಿಂದ ಶ್ರೀಗಳವರು ಪ್ರಿಯ ಶಿಷ್ಯರಾದ ಶ್ರೀ ಸುಧೀಂದ್ರತೀರ್ಥರೊಡನೆ ಮಧುರೆಗಾಗಮಿಸಿ ರಾಜನಿಂದ ಮಾನಿತರಾಗಿ ಶ್ರೀಮೂಲರಾಮನ ಮಹಾಭಿಷೇಕವನ್ನು ವೈಭವದಿಂದ ನೆರವೇರಿಸಿದರು. ಶ್ರೀಗಳವರ ಅಧ್ಯಕ್ಷತೆಯಲ್ಲಿ ವಿಶೇಷ ವಿದ್ವತ್ಸಭೆಯು ಜರುಗಿತು. ಆ ಸಭೆಯಲ್ಲಿ ವೇಂಕಟನಾಥನು ನ್ಯಾಯವೇದಾಂತ ಶಾಸ್ತ್ರಗಳಲ್ಲಿ ವಿಶೇಷ ಪ್ರತಿಭೆಯನ್ನು ತೋರಿದ್ದಲ್ಲದೆ ವಿವಿಧ ಶಾಸ್ತ್ರಗಳಲ್ಲಿ ಅನೇಕ

ಪಂಡಿತರೊಡನೆ ವಿಶೇಷ ವಾದಮಾಡಿ ಜಯಗಳಿಸಿದನು. ಇದರಿಂದ ಪ್ರೀತರಾದ ಶ್ರೀ ಸುಧೀಂದ್ರತೀರ್ಥರು ತಮ್ಮ ಕೊರಳಲ್ಲಿದ್ದ ಮಣಿಮಯಸುವರ್ಣ ತುಳಸೀಮಾಲೆ, ಮತ್ತು ಜೋಡಿ ಶಾಲುಗಳನ್ನು ವೆಂಕಟನಾಥನಿಗೆ ನೀಡಿ "ಸಕಲಕಲಾವಲ್ಲಭ" ಎಂಬ ಶ್ರೇಷ್ಠ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಅದೇ ಸಮಯದಲ್ಲಿ ಶ್ರೀ ವಿಜಯಿಂದ್ರರ ಅಪ್ಪಣೆಯಂತೆ ವೆಂಕಟನಾಥನು ಸಂಗೀತಕಛೇರಿಮಾಡಿ ಅದ್ಭುತ ವೀಣಾವಾದನದಿಂದ ಸರ್ವರನ್ನೂ ಆನಂದಗೊಳಿಸಿದನು ಮಾತ್ರವಲ್ಲ; ದಕ್ಷಿಣಭಾರತದಲ್ಲೇ ತಾಳಬ್ರಹ್ಮನೆಂದು ವಿಖ್ಯಾತನಾದ ಮೃದಂಗವಾದಕ ಶಂಕರಾನಂದಪಿಳ್ಳೆಯು ತಾಳತಪ್ಪುವಂತೆ ಮಾಡಿದ್ದಲ್ಲದೆ ಭೂಲೋಕದಲ್ಲಿ ಪ್ರಚಾರದಲ್ಲಿಲ್ಲದ, ದೇವಲೋಕದಲ್ಲಿ ಮಾತ್ರ ಪ್ರಸಾರದಲ್ಲಿರುವ "ಗಾಂಧಾರಗ್ರಾಮ" ಕ್ರಮದಲ್ಲಿ ವೀಣೆಯನ್ನು ನುಡಿಸಿ ಸರ್ವರನ್ನೂ ಅಚ್ಚರಿಗೊಳಿಸಿ, ಸಕಲರ ಗೌರವಾದರಗಳಿಗೆ ಪಾತ್ರನಾದನು. ಇದರಿಂದ ಪರಮಸಂತುಷ್ಟನಾದ ಕೃಷ್ಣಪ್ಪ ನಾಯಕನು ಮಧುರಾ ಸಂಸ್ಥಾನದವತಿಯಿಂದ ವಿಜಯೀಂದ್ರಗುರುಗಳ ಹಸ್ತದಿಂದ ನಮ್ಮ ವೆಂಕಟನಾಥನಿಗೆ "ವೈಣಿಕಚಕ್ರವರ್ತಿ" ಎಂಬ ಬಿರುದು, ಸುವರ್ಣಾಭರಣ ಸುವರ್ಣ ಮುದ್ರಿಕೆಗಳು, ಶಾಲು ಜೋಡಿಗಳನ್ನು ಕೊಡಿಸಿ ಸನ್ಮಾನ ಮಾಡಿದನು. ಸಭೆಯಲ್ಲಿದ್ದ ಸಹಸ್ರಾರು ಜನರು ವೆಂಕಟನಾಥನಿಗೆ ಜಯಕಾರಮಾಡಿ ತಮ್ಮ ಸಂತಸವನ್ನು ಪ್ರದರ್ಶಿಸಿದರು.

ಶ್ರೀ ವಿಜಯೀಂದ್ರ-ಸುಧೀಂದ್ರಗುರುಗಳು ತಮ್ಮ ಪ್ರಿಯಶಿಷ್ಯ ತಿಮ್ಮಣ್ಣಾಚಾರ್ಯರು ಪುತ್ರನಾದ ವೆಂಕಟನಾಥನಲ್ಲಿ ವಿಶೇಷ ವಾತ್ಸಲ್ಯ, ಪ್ರೀತಿ ಮಾಡುತ್ತಿದ್ದರು. ಶ್ರೀ ಸುಧೀಂದ್ರರು ತಮ್ಮ ಪೂರ್ವಾಶ್ರಮ ಬಂಧುಗಳಾದ ಶ್ರೀ ವಾಸುದೇವಾಚಾರ್ಯರ ಪುತ್ರಿ ಸೌ॥ ಸರಸ್ವತೀದೇವಿಯನ್ನು ವೆಂಕಟನಾಥರಿಗೆ ಕೊಟ್ಟು ವಿವಾಹ ಮಾಡಿಸಲು ನಿಶ್ಚಯಿಸಿದರು.

7. ವಿವಾಹ-ಸಂಸಾರ ಜೀವನ

ರೂಪ-ಲಾವಣ್ಯ-ಶೀಲಾದಿ ಸದ್ಗುಣ ಮಂಡಿತಳಾಗಿ, ಸಂಗೀತ-ಸಾಹಿತ್ಯ ವಿಶಾರದಳಾಗಿ ಅಭಿನವ ಸರಸ್ವತಿಯಂತೆ ಬೆಳಗುತ್ತಿದ್ದ ಸೌ॥ ಸರಸ್ವತಿಯೊಡನೆ ವೆಂಕಟನಾಥರ ವಿವಾಹವು ಬಹು ಸಂಭ್ರಮ ವೈಭವಗಳಿಂದ ನೆರವೇರಿತು.

ನೂತನ ದಂಪತಿಗಳನ್ನು ಅಣ್ಣ ಗುರುರಾಜಾಚಾರ್ಯ, ತಾಯಿ ಗೋಪಿಕಾಂಬಾ ದೇವಿಯರು ಕುಂಭಕೋಣಕ್ಕೆ ಕರತಂದು ಶ್ರೀವಿಜಯೀಂದ್ರ ಸುಧೀಂದ್ರ ಗುರುಗಳಿಗೆ ದಂಪತಿಗಳಿಂದ ಪಾದಪೂಜೆಮಾಡಿಸಿ, ಮಂತ್ರಮುದ್ರಾಧಾರಣ ಮಾಡಿಸಿದರು. ಉಭಯ ಗುರುಗಳು ನೂತನ ದಂಪತಿಗಳನ್ನು ಆಶೀರ್ವದಿಸಿ ಫಲ ಮಂತ್ರಾಕ್ಷತೆ ಅನುಗ್ರಹಿಸಿದರು. ವೆಂಕಟನಾಥರು ಗುರುಗಳ ಅಪ್ಪಣೆಯಂತೆ ಕಾವೇರಿ ಪಟ್ಟಣಕ್ಕೆ ಬಂದು ಅಲ್ಲಿನ ವಿದ್ಯಾಪೀಠದ ಅಧ್ಯಕ್ಷರಾಗಿ ಪಾಠ ಪ್ರವಚನ ಮಾಡುತ್ತಾ ತಾಯಿ, ಪತ್ನಿಯರೊಡನೆ ಸಂತೋಷದಿಂದ ಗಾರ್ಹಸ್ಥ್ಯ ಧರ್ಮವನ್ನು ಪರಿಪಾಲಿಸಹತ್ತಿದರು.

ವೆಂಕಟನಾಥರ ಪಾಂಡಿತ್ಯ, ಪ್ರತಿಭೆ, ಪಾಠ ಹೇಳುವ ಚಾತುರ್ಯ, ಶಿಷ್ಯಪ್ರೇಮ, ಉದಾರಗುಣಗಳಿಂದ ಪ್ರಭಾವಿತರಾದ ಪುರನಿವಾಸಿಗಳು ಅವರನ್ನು ಅತಿ ಗೌರವದಿಂದ ಕಾಣುತ್ತಿದ್ದರು. ಆಚಾರ್ಯರ ಕೀರ್ತಿ ಎಲ್ಲೆಡೆ ಹರಡಿ ಅನೇಕ ವಿದ್ಯಾರ್ಥಿಗಳು ಬೇರೆ ಬೇರೆ ಗ್ರಾಮಗಳಿಂದ ಬಂದು ವಿದ್ಯಾಪೀಠದಲ್ಲಿ ನ್ಯಾಯ ವೇದಾಂತ, ಸಾಹಿತ್ಯ, ವೇದಾದಿ ಶಾಸ್ತ್ರಗಳನ್ನು ವ್ಯಾಂಸಗ ಮಾಡುತ್ತಿದ್ದರು.

ವೆಂಕಟನಾಥ-ಸರಸ್ವತಿಯರ ಸಾಂಸಾರಿಕ ಜೀವನ ಆದರ್ಶವಾಗಿತ್ತು. ಅವರದು ಅತಿಚೊಕ್ಕ ಸಂಸಾರ. ಸುಂದರನಾದ ಪತಿ, ಅಸಾಧಾರಣ ಪಂಡಿತ, ಸಂಗೀತ ಸಾಹಿತ್ಯ ವೀಣಾ ವಾದನಗಳಲ್ಲಿ ಪಾರಂಗತ, ಮೃದುಭಾಷಿ, ಪ್ರೇಮ ಮಯಿ, ಇಂತಹ ಪ್ರೇಮಲ ಸ್ವಭಾವದ ಪತಿಯನ್ನು ಪಡೆದ ಅದಾವ ಸತಿಯುತಾನೆ ಆನಂದ ನಿರ್ಭರಳಾಗದಿರುವಳು? ವೆಂಕಟನಾಥರೂ ಅಷ್ಟೇ, ಸುಶೀಲಳೂ ಪತಿಭಕ್ತಿ ಪರಾಯಣೆಯೂ, ಅತ್ತೆಯನ್ನು ತಾಯಿಯಂತೆ ಕಂಡುಭಕ್ತಿ-ಶ್ರದ್ಧೆಗಳಿಂದ ಸೇವಿಸುವವಳೂ, ಸಂಗೀತ-ಸಾಹಿತ್ಯ ಕಲಾ ಪ್ರಪೂರ್ಣಳೂ ಆದ ಸರಸ್ವತಿಯನ್ನು ಕಂಡು ಹಿಗ್ಗುತ್ತಿದ್ದರು. ಅವಳಲ್ಲಿ ಅಗಾಧ ಪ್ರೇಮವನ್ನಿಟ್ಟಿದ್ದರು. ಈ ದಂಪತಿಗಳ ಸಂಸಾರ ಹಾಲು ಸಕ್ಕರೆ ಬೆರತಂತೆ ಸುಮಧುರವಾಗಿದ್ದಿತು. ಆ ದಂಪತಿಗಳ ಪ್ರೇಮದ ಫಲವಾಗಿ ಅವರಿಗೆ ಓರ್ವ ಸತ್ಪುತ್ರನು ಜನಿಸಿದನು. ವೆಂಕಟನಾಥಾಚಾರ್ಯರು ತಮ್ಮ ಮಗನಿಗೆ ಜಾತ ಕರ್ಮನಾಮಕರಣಗಳನ್ನು ವೈಭವದಿಂದನೆರವೇರಿಸಿ ಮಗನಿಗೆ "ಲಕ್ಷ್ಮೀನಾರಾಯಣ" ಎಂದು ನಾಮಕರಣ ಮಾಡಿದರು. ಲಕ್ಷ್ಮೀನಾರಾಯಣ

ಲೋಕ ಮುದ್ದಿನ ಕೂಸಾಗಿದ್ದನು. ತಂದೆ, ತಾಯಿ, ಅಜ್ಜಿ ಗೋಪಿಕಾಂಬಾ ದೇವಿಯರು ಲಕ್ಷ್ಮೀನಾರಾಯಣನ ಬಾಲಲೀಲೆಗಳನ್ನು ಕಂಡು ಪರಮಾನಂದ ಪಡುತ್ತಿದ್ದರು.

☆ ☆ ☆ ☆ ☆ ☆

ಮಾವಂದಿರಾದ ವಾಸುದೇವಾಚಾರ್ಯರ ಪ್ರಾರ್ಥನೆಯಂತೆ ಸಂಸಾರ ಸಹಿತರಾಗಿ ವೆಂಕಟನಾಥರು ದೀಪಾವಳೀ ಹಬ್ಬಕ್ಕೆ ಮಾವನ ಮನೆಗೆ ಬಂದವರು ಅದನ್ನು ಮುಗಿಸಿಕೊಂಡು ರಾಮಚಂದ್ರ ಪುರಕ್ಕೆ ಅಣ್ಣ ಗುರುರಾಜಾಚಾರ್ಯರ ಮನೆಗೆ ಬಂದರು. ಅಲ್ಲಿ ಕೆಲದಿನ ವಾಸಮಾಡಿದರು. ಇದ್ದಕ್ಕಿದ್ದಂತೆ ಗೋಪಮ್ಮ ಕಾಯಿಲೆಬಿದ್ದರು. ಕೆಲಕಾಲ ನರಳಿ ಇಹಲೋಕ ವ್ಯಾಪಾರವನ್ನು ಮುಗಿಸಿ ದಿವಂಗತರಾದರು. ಅಣ್ಣ ತಮ್ಮಂದಿರು ತಾಯಿಯ ಅಂತ್ಯ ಕ್ರಿಯೆಯನ್ನು ಸಕ್ರಮವಾಗಿ ಜರುಗಿಸಿದರು. ಶುಭಸ್ವೀಕಾರವಾದ ಮೇಲೆ ಅಣ್ಣ-ಅತ್ತಿಗೆಯರ ಅಪ್ಪಣೆ ಪಡೆದು ವೆಂಕಟನಾಥರು ಊರಿಗೆ ಹೊರಟರು.

8. ಮಂತ್ರಸಿದ್ಧರು

ಅಣ್ಣನ ಮನೆಯಿಂದ ಹೊರಟ ಆಚಾರ್ಯರು ಮಾರ್ಗಮಧ್ಯದಲ್ಲಿ ಒಂದು ಬ್ರಾಹ್ಮಣರ ಅಗ್ರಹಾರಕ್ಕೆ ಬಂದರು. ಆಗ ಮಧ್ಯಾಹ್ನವಾಗಿತ್ತು. ಆ ಆಗ್ರಹಾರದ ಶ್ರೀಮಂತ ಮಾಧ್ವಬ್ರಾಹ್ಮಣರ ಮನೆಯಲ್ಲಿ ಅಂದು ಸೇತೂಸಮಾರಾಧನೆ ಇತ್ತು. ನೂರಾರು ಜನ ಬ್ರಾಹ್ಮಣರು ಸೇರಿದ್ದರು, ಮನೆಯ ಯಜಮಾನರು ತೇಜಸ್ವಿಗಳಾದ ಆಚಾರ್ಯರನ್ನು ಕಂಡು ನಮಸ್ಕರಿಸಿ "ಇಂದು ನಮ್ಮಲ್ಲಿ ಸೇತೂ ಸಮಾರಾಧನೆಯಿದೆ. ತಾವು ನಮ್ಮಲ್ಲಿ ತಂಗಿ, ಭೋಜನ ಮಾಡಿ ಹೋಗಬೇಕೆಂದು" ಪ್ರಾರ್ಥಿಸಿದ. ಅವರ ವಿನಯ ಗುಣದಿಂದ ಪ್ರೀತರಾಗಿ ವೆಂಕಡನಾಥರು ಅವರ ಮನೆಗೆ ಬಂದು ಸ್ನಾನ, ಆನ್ಹಿಕ ದೇವಪೂಜೆಗಳನ್ನು ಮುಗಿಸಿ ಸೂಕ್ತ ಪಾರಾಯಣ ಮಾಡುತ್ತಾ ಒಂದುಕಡೆ ಕುಳಿತರು. ಆ ಮನೆಯ ಪುರೋಹಿತರ ಮಗ ಆಚಾರ್ಯರ ಯೋಗ್ಯತೆಯನ್ನರಿಯದೆ ನೂರಾರು ಜನರಿಗೆ ಗಂಧ ಸಿದ್ಧಪಡಿಸಬೇಕೆಂದು ಹೇಳಿ ಸಾಣೇಕಲ್ಲು ಗಂಧದ ಚೆಕ್ಕೆಗಳನ್ನವರ ಮುಂದಿಟ್ಟು ಹೋದ, ಅವನ

ಉದ್ಧಟತನದಿಂದ ಆಚಾರ್ಯರಿಗೆ ಮನ ನೊಂದರೂ ಬ್ರಾಹ್ಮಣ ಸೇವೆ ಎಂದು ಭಾವಿಸಿ ಅಗ್ನಿಸೂಕ್ತ ಪಠಿಸುತ್ತಾ ಗಂಧವನ್ನು ಸಿದ್ಧಪಡಿಸಿದರು.

ಭೋಜನಕ್ಕೆ ಮುನ್ನ ಎಲ್ಲರಿಗೂ ತೀರ್ಥಪ್ರಸಾದ, ಗಂಧಾಕ್ಷತೆ ವಿನಿಯೋಗವಾಯಿತು. ಎಲ್ಲರೂ ಗಂಧ ಹಚ್ಚಿಕೊಂಡರು. ಏನಾಶ್ಚರ್ಯ! ಗಂಧ ಸ್ಪರ್ಶವಾದಕೂಡಲೇ ಎಲ್ಲರಿಗೂ ಮೈಗೆ ಬೆಂಕಿ ಬಿದ್ದಂತಾಗಿ ಹಾಹಾಕಾರ ಮಾಡಹತ್ತಿದರು. ಮನೆಯ ಯಜಮಾನ ಗಂಧತೆಗೆದವರ್ಯಾರೆಂದು ವಿಚಾರಿಸಿದ ಪುರೋಹಿತರ ಮಗ ವೆಂಕಟನಾಥರನ್ನು ತೋರಿಸಿದ. ''ಈ ತೇಜಸ್ವಿ ಬ್ರಾಹ್ಮಣರಿಂದ ಈ ಕಾರ್ಯ ಮಾಡಿಸಿದೆಯಾ?'' ಎಂದಾತನನ್ನು ನಿಂದಿಸಿ: ''ಸ್ವಾಮಿ, ಅಪರಾಧವಾಗಿದೆ. ಕ್ಷಮಿಸಿ. ಈ ಎಲ್ಲ ಬ್ರಾಹ್ಮಣರ ದುಃಖ ಪರಿಹಾರ ಮಾಡಿರಿ'' ಎಂದು ಆಚಾರ್ಯವನ್ನು ಪ್ರಾರ್ಥಿಸಿದ. ವೆಂಕಟನಾಥರು ಉಳಿದ ಗಂಧವನ್ನೂ ಶ್ರೀ ತೀರ್ಥವನ್ನೂ ಬೆರಸಿ ವರುಣ ಮಂತ್ರವನ್ನು ಜಪಿಸಿ ಎಲ್ಲರಿಗೂ ನೀಡಿದರು, ಆಶ್ಚರ್ಯ, ಪರಮಾಶ್ಚರ್ಯ! ಬೆಂಕಿ ಬಿದ್ದಂತಾಗಿ ಹಾಹಾಕಾರ ಮಾಡುತ್ತಿದ್ದ ಬ್ರಾಹ್ಮಣರಿಗೆ ಗಂಧಸ್ಪರ್ಶವಾದ ಕೂಡಲೇ ಬೆಂಕಿಯ ಉರಿಮಾಯವಾಗಿ ಅತಿ ಶೀತಲಸ್ಪರ್ಶವಾದಂತಾಗಿ ಎಲ್ಲರೂ ಪರಮಾನಂದದಿಂದ ಕುಣಿದಾಡಿ, ಮಂತ್ರಸಿದ್ಧರೆಂದು ಆಚಾರ್ಯರನ್ನು ಕೊಂಡಾಡಿದರು. ಆಚಾರ್ಯರು ''ಇದು ದೈವಲೀಲೆ, ನಾನೊಬ್ಬ ಸಾಮಾನ್ಯ ಮಾನವ. ನೀವು ಇದು ಶ್ರೀಹರಿಯ ಮಹಿಮೆಯೆಂದು ಭಾವಿಸಿ ಅವನನ್ನು ಸ್ತುತಿಸಿರಿ'' ಎಂದರು. ಆಚಾರ್ಯರ ವಿನಯ, ಸೌಜನ್ಯಗಳನ್ನು ಕಂಡು ಸರ್ವರೂ ಅವರನ್ನು ಮಹಾನುಭಾವರೆಂದು ಶ್ಲಾಘಿಸಿದರು. ಭೋಜನಾನಂತರ ಮನೆಯ ಯಜಮಾನನಿಂದ ಬೀಳ್ಕೊಂಡು ಪತ್ನೀಪುತ್ರ ಸಹಿತರಾಗಿ ಪ್ರಯಾಣ ಬೆಳೆಸಿ ಒಂದೆರಡು ದಿನಗಳಲ್ಲಿ ಕಾವೇರೀ ಪಟ್ಟಣಕ್ಕೆ ಬಂದು ಸೇರಿದು.

9. ದಾರಿದ್ರ್ಯಾನುಭವ

ಹೀಗೆ ವೆಂಕಟನಾಥರ ಪಾಂಡಿತ್ಯ, ಪ್ರತಿಭೆ, ಪಾಠಪ್ರವಚನ, ಸದಾಚಾರ, ಶೀಲಾದಿ ಸದ್ಗುಣಗಳ ಕೀರ್ತಿ ಎಲ್ಲಾ ಕಡೆ ಹರಡಿತ್ತು. ಆದರೆ ದೈವ ಸಂಕಲ್ಪ; ಅವರು ಪ್ರಾರಬ್ಧ ಕರ್ಮದ ಫಲವಾಗಿ ಅಪಾರ ದಾರಿದ್ರ್ಯವನ್ನು ಅನುಭವಿಸಬೇಕಾಗಿಬಂದಿತು! ''ಯಸ್ಯಾನುಗ್ರಹಮಿಚ್ಛಾಮಿ ತಸ್ಯ ವಿತ್ತಂ

ಪರಾಮ್ಯಹಂ'' ಎಂದರೆ, ''ಯಾರಲ್ಲಿ ನಾನು ವಿಶೇಷಾನುಗ್ರಹ ಮಾಡಬಯಸು ವೆನೋ, ಅಂತಹವರ ಸಿರಿಸಂಪತ್ತುಗಳನ್ನು ಕಸಿದುಕೊಳ್ಳುತ್ತೇನೆ'' ಎಂದು ಭಗವಂತ ಹೇಳಿದ್ದಾನೆ. ಬಹುಶಃ ಪರಮಾತ್ಮನು ವೆಂಕಟನಾಥರಲ್ಲಿ ಮುಂದೆ ಅನ್ಯಾದೃಶ ಅನುಗ್ರಹ ಮಾಡಬೇಕೆಂದೇ ಈಗವರ ಸಂಪತ್ತನ್ನು ಅಪಹರಿಸಿ ಕಡುದಾರಿದ್ರ್ಯವನ್ನು ಅನುಭವಿಸುವಂತೆ ಮಾಡಿದನೆಂದು ಹೇಳಬಹುದು.

ವೆಂಕಟನಾಥರು ಅನುಭವಿಸಿದ ಕಡುಬಡತನದ ಬೇಗೆಯನ್ನು ''ಶ್ರೀ ರಾಘವೇಂದ್ರ ವಿಜಯ''ದಲ್ಲಿ ಹೀಗೆ ವರ್ಣಿಸಿದ್ದಾರೆ.

ವೆಂಕಟನಾಥರ ಬಡತನ ವರ್ಣಿಸಲಸದಳ. ಅವರ ಮನೆಯಲ್ಲಿ ಒಂದು ದಿನಕ್ಕಾಗುವ ಪದಾರ್ಥವೂ ಇರುತ್ತಿರಲಿಲ್ಲ. ಊಟಕ್ಕೆ ಅನ್ನದ ಜೊತೆಗೆ ಬಾಡಿಸಿಕೊಳ್ಳುವ ಪದಾರ್ಥವಂತೂ ದೂರವೇ ಉಳಿಯಿತು. ದೀಪಾವಳಿಯಂಥ ಹಬ್ಬದಲ್ಲಿ ವರ್ಷಕ್ಕೆ ಒಂದು ಸಲ ಅಭ್ಯಂಜನಕ್ಕೆ ಎಣ್ಣೆ ಸಿಗದಿರುವಾಗ ಪ್ರತಿದಿನ ಭೋಜನಕ್ಕೆ ಹೆಚ್ಚಾದ ತುಪ್ಪವೆಲ್ಲಿಂದ ಬಂದೀತು? ಎಷ್ಟೋ ದಿನ ಊಟಕ್ಕೆ ಎಲೆಯಿಲ್ಲದೆ, ನೆಲವನ್ನೇ ಸಾರಿಸಿಕೊಂಡು ನೆಲದಮೇಲೆಯೇ ಊಟ ಮಾಡಬೇಕಾಗಿ ಬರುತ್ತಿತ್ತು. ಯುಗಾದಿಗೆ ಒಮ್ಮೆ ದಪ್ಪನಾದ ಹೊಸ ವಸ್ತ್ರವನ್ನು ಉಡಲೂ ಅವಕಾಶವಿಲ್ಲದಿರುವಾಗ, ಇನ್ನು ಬೆಲೆ ಬಾಳುವ ನಯವಾದ ರೇಶ್ಮೆ ವಸ್ತ್ರ, ಜರಿಮಡಿಗಳೆಲ್ಲಿಂದ ಬರಲು ಸಾಧ್ಯ? ಲೋಕದಲ್ಲಿ ಸಾಮಾನ್ಯವಾಗಿ ತಿಂಗಳಿಗೆ ಎರಡು ಉಪವಾಸಗಳು ಕ್ಲಿಪ್ತವಾಗಿದೆ. ಆಚಾರ್ಯರ ಮನೆಯಲ್ಲಾದರೋ ಒಂದು ಪಕ್ಷಕ್ಕೆ ನಾಲ್ಕಾರು ಉಪವಾಸಗಳು ಬರುತ್ತಿತ್ತು! ಬಾಲಕ ಲಕ್ಷ್ಮೀನಾರಾಯಣನಿಗೆ ಕುಡಿಯಲು ಹಾಲೂ ಸಹ ದೊರಕುತ್ತಿರಲಿಲ್ಲ. ಒಂದು ದಿನ ಕಳ್ಳರು ಆಚಾರ್ಯರ ಮನೆಯಲ್ಲಿದ್ದ ಅಲ್ಪಸ್ವಲ್ಪ ಪಾತ್ರೆ ಪದಾರ್ಥಗಳನ್ನೂ ತುಡುಗು ಮಾಡಿಬಿಟ್ಟರು. ಇದರಿಂದ ಮುಂದೆ ಸನ್ಯಾಸಿಗಳಾದಾಗ ಸನ್ಯಾಸಿಗಳಿಗೆ ಮುಖ್ಯವಾದ ಕೌಪೀನ ಮಾತ್ರ ಆಚಾರ್ಯರಿಗೆ ಉಳಿಯಿತಂತೆ.* ಇನ್ನು ಸರಸ್ವತಮ್ಮನ ಪರಿಸ್ಥಿತಿ ಹೇಗಿರಬೇಕು. ಅದನ್ನು ವರ್ಣಿಸಲು ಕೈಯೇ ಬಾರದು. ಇಷ್ಟಾದರೂ ಆಚಾರ್ಯರ ಸಂಸಾರದಲ್ಲಿ

---

* ಶ್ರೀ ರಾಘವೇಂದ್ರವಿಜಯ

ಛಿದ್ರವಿರಲಿಲ್ಲ. ಸರಸ್ವತಮ್ಮ ಗೊಣಗುತ್ತಿರಲಿಲ್ಲ. ಆಚಾರ್ಯರು ಸಿಡುಗುಟ್ಟುತ್ತಿರಲಿಲ್ಲ ಪಾಪ, ಬಾಲಕ ಲಕ್ಷ್ಮೀನಾರಾಯಣ ಅದುಬೇಕು, ಇದುಬೇಕೆಂದು ಹಟ ಮಾಡುತ್ತಿರಲಿಲ್ಲ. ಕಷ್ಟ ಹೆಚ್ಚಾದಂತೆ ಸರಸ್ವತಮ್ಮನಿಗೆ ಪತಿಭಕ್ತಿ ಹೆಚ್ಚುತ್ತಿತ್ತು. ಆಚಾರ್ಯರಿಗೆ ಶ್ರೀಹರಿಭಕ್ತಿ ಇಮ್ಮಡಿಸುತ್ತಿತ್ತು. ಪತಿಯ ರೂಪ, ಕರುಣಾರ್ದ್ರಹೃದಯ, ಪತಿಯ ಸಹವಾಸ, ಪ್ರೇಮಾಲಾಪಗಳಿಂದ ಮೈಮರೆಯುತ್ತಿದ್ದ ಸರಸ್ವತಮ್ಮನಿಗೆ ಬಡತನದ ಪರಿವೇ ಇರುತ್ತಿರಲಿಲ್ಲ. ಹೀಗೆ ಬಡನತದ ಬೇಗೆಯಲ್ಲಿ ಬೇಯುತ್ತಿದ್ದರೂ, ಶ್ರೀಹರಿಜಿತ್ತವೆಂದು ಹರಿಸಂಕಲ್ಪಕ್ಕೆ ತಲೆಬಾಗಿ ಬಡತನದಲ್ಲಿಯೂ ಭಗವಂತನ ಸ್ವರೂಪವನ್ನೇ ಕಂಡು, ಉಪವಾಸವಿದ್ದರೂ ಮೃಷ್ಟಾನ್ನ ಭೋಜನ ಮಾಡಿದವರಂತೆ ಗಂಧಾಕ್ಷತೆ ಹೆಚ್ಚಿಕೊಂಡು ನಗುನಗುತ್ತಾ ಸಂತೋಷದಿಂದಲೇ ಕಾಲಕಳೆಯುತ್ತಿದ್ದರು.

☆ ☆ ☆ ☆ ☆ ☆

ಇಲ್ಲಿ ಕೆಲವಿಚಾರ ವಿವೇಚಿಸಬೇಕಾಗಿದೆ. ಪರಮಾತ್ಮನ ಸೃಷ್ಟಿಗೆ ಬಂದ ಎಲ್ಲ ಜೀವರೂ ಅವರು ದೇವತೆಯಾಗಿರಲಿ, ಮಾನವರಾಗಿರಲಿ, ಪ್ರಾರಬ್ಧ ಕರ್ಮವನ್ನು ಅನುಭವಿಸಲೇಬೇಕು. ಅದು ಯಾರಿಗೂ ತಪ್ಪಿದ್ದಲ್ಲ. ಮುಂದೆ ಶ್ರೀ ರಾಘವೇಂದ್ರರಾಗಲಿರುವ ವೆಂಕಟನಾಥರ ಮೂಲರೂಪದ ಶಂಕುಕರ್ಣನಿಗೂ ಈ ಪ್ರಾರಬ್ಧವಿತ್ತು. ಆದರೆ ಸತ್ಯಲೋಕದಲ್ಲಿ ಶ್ರೀಬ್ರಹ್ಮದೇವರ ಕೃಪೆಗೆ ಪಾತ್ರನಾಗಿದ್ದ ಶಂಕುಕರ್ಣ ಈ ಪ್ರಾರಬ್ಧರೂಪ ದಾರಿದ್ರ್ಯವನ್ನು ಅನುಭವಿಸ ಲಾಗಲಿಲ್ಲ. ಮುಂದೆ ಪ್ರಹ್ಲಾದ -ಬಾಹ್ಲೀಕಾವತಾರಗಳಲ್ಲೂ ರಾಜಾಧಿರಾಜ ರಾಗಿದ್ದುದರಿಂದ ಬಡತನ ಅವರನ್ನು ಬಾಧಿಸಲಿಲ್ಲ. ಮತ್ತೆ ಕಲಿಯುಗ್ದಲ್ಲಿ ಶ್ರೀವ್ಯಾಸರಾಜರಾಗಿ ಅವತರಿಸಿದಾಗಲೂ ರಾಜಾಧಿರಾಜರಿಗೆ ಗುರುಗಳಾಗಿದ್ದುದ ರಿಂದ ದಾರಿದ್ರ್ಯಾನುಭವಕ್ಕೆ ಅವಕಾಶವಾಗಲಿಲ್ಲ. ಈಗಿನ ರಾಘವೇಂದ್ರಾವತಾರ ಶಂಕುಕರ್ಣ ದೇವತೆಯ ಕೊನೆಯ ಅವತಾರ. ಆದ್ದರಿಂದ ಪ್ರಾರಬ್ಧಕರ್ಮವನ್ನು ಈ ಜನ್ಮದಲ್ಲಿ ಅನುಭವಿಸಿದಿಲ್ಲದೇ ಮೋಕ್ಷವಿಲ್ಲ. ಮುಂದೆ ರಾಘವೇಂದ್ರರಾದ ಮೇಲೆ ದಾರಿದ್ರ್ಯಾನುಭವಕ್ಕೆ ಅವಕಾಶವಿಲ್ಲವಾದ್ದರಿಂದ ಸಂಸಾರಿಯಾಗಿರುವಾಗಲೇ ಬಡತನವನ್ನು ಅನುಭವಿಸಬೇಕೆಂದು ಶ್ರೀಹರಿಸಂಕಲ್ಪವಿದ್ದುದರಿಂದ ಜ್ಞಾನಿಗಳಾದ ವಂಕಟನಾಥಾಚಾರ್ಯರು ಅದು ಶ್ರೀ ಹರಿಚಿತ್ತವೆಂದು ಭಾವಿಸಿ ಅನುಭವಿಸಿದರೆಂದು ತಿಳಿಯಬೇಕು. ಶ್ರೀಹರಿಯು ದಾರಿದ್ರ್ಯಾನುಭವವೆಂಬ ಅಗ್ನಿದಿವ್ಯಕ್ಕೆ

ಆಚಾರ್ಯರನ್ನು ಗುರಿಪಡಿಸಿದನು. ಆದರೆ ನಮ್ಮ ವೆಂಕಟನಾಥರು ಅದಕ್ಕೆ ಹೆದರದೆ, ಧೈರ್ಯದಿಂದ ಅದನ್ನನುಭವಿಸಿ ಆ "ಅಗ್ನಿದಿವ್ಯ" ಪರೀಕ್ಷೆಯಲ್ಲಿ ಉತ್ತಮ ರೀತಿಯಿಂದ ಉತ್ತೀರ್ಣರಾಗಿ ಪುಟಕ್ಕಿಟ್ಟ ಚಿನ್ನದಂತೆ ನೂತನ ಕಾಂತಿಯಿಂದ ಬೆಳಗಿದರು.

ಶ್ರೀ ವೆಂಕಟನಾಥರು ಈಗ ಅನುಭವಿಸಿದ ಕಡುಬಡತನದ ಅನುಭವವೇ ಮುಂದುವರು ರಾಘವೇಂದ್ರಸ್ವಾಮಿಗಳಾದ ಮೇಲೆ ಐವತ್ತು ವರ್ಷ ಪೀಠಾಪತ್ಯಕಾಲದಲ್ಲಿ, ಆನಂತರ ಸಶರೀರವಾಗಿ ಬೃಂದಾವನ ಪ್ರವೇಶಮಾಡಿದಮೇಲೂ. ಇಂದಿಗೂ ಅವರಿಗೆ ತಮ್ಮ ದಾರಿದ್ರ್ಯಾನುಭವದ ಸ್ಮರಣೆ ಬರುವಂತಾಗಿ, ತಮ್ಮನ್ನು ಆಶ್ರಯಿಸಿಬಂದ, ಸೇವಿಸಿದ, ಲಕ್ಷ್ಯಾಂತರ ಭಕ್ತಜನರ ದಾರಿದ್ರ್ಯ ಪರಿಹಾರ ಮಾಡಿ. ಜನತೆಯ ಎಲ್ಲಾ ವಿಧ ದುಃಖ ಪರಿಹಾರ, ದಿನ ದಲಿತ ಜನರ ರೋಗಾದ್ಯುಪದ್ರವಪರಿಹಾರಮಾಡಿ, ಸಂತಾನ ವಿದ್ಯೆ. ಸಿರಿಸಂಪತ್ತು ಮುಂತಾಗಿ ಬೇಡಿ ಬೇಡಿದ ಇಷ್ಟಾರ್ಥಗಳನ್ನು ಕರುಣಿಸುತ್ತಾ ಲೋಕಕಲ್ಯಾಣ ಮಾಡಲು ಕಾರಣವಾಯಿತೆಂದರೆ ತಪ್ಪಾಗಲಾರದು.

ಶ್ರೀಹರಿಯು ಒಡ್ಡಿದ ಪರೀಕ್ಷೆಯಲ್ಲಿ ಆಚಾರ್ಯರು ಉತ್ತೀರ್ಣರಾದರೆಂದು ಸೂಚಿಸಿ, ಅವರ ದಾರಿದ್ರ್ಯ ಪರಿಹಾರಮಾಡಿಸಲೋ ಎಂಬಂತೆ ಶ್ರೀ ಸುಧೀಂದ್ರತೀರ್ಥರು ವೆಂಕಟನಾಥರು ತಮ್ಮಲ್ಲಿಗೆ ಬಂದು ಶ್ರೀಮಠದಲ್ಲಿ ಪಾಠ ಪ್ರವಚನಮಾಡಿಕೊಂಡಿರಬೇಕೆಂದು ಹೇಳಿ ಕಳುಹಿಸಿದರು. ವೆಂಕಟನಾಥರು ಗುರುಗಳ ಆಜ್ಞೆಯನ್ನು ಶಿರಸಾಧರಿಸಿ ಪತ್ನೀ ಪುತ್ರರೊಡನೆ ಕಂಭಕೋಣದ ವಿದ್ಯಾಮಠಕ್ಕೆ ಬಂದು ಸೇರಿದರು

10. ಸುಧೀಂದ್ರರ ಆಶ್ರಯದಲ್ಲಿ

ವಿದ್ಯಾಮಠಕ್ಕೆ ಬಂದ ವೆಂಕಟನಾಥಾಚಾರ್ಯರನ್ನು ಕಂಡು ಶ್ರೀಸುಧೀಂದ್ರತೀರ್ಥರಿಗೆ ಅತ್ಯಂತ ಹರ್ಷವಾಯಿತು. ಶ್ರೀಗಳವರು ಆಚಾರ್ಯರಿಗೆ ಇರಲು ಮನೆ, ಪಾತ್ರೆ ಪದಾರ್ಥ, ಜೀವನಕ್ಕೆ ಬೇಕಾದ ಸಮಸ್ತವನ್ನೂ ಶ್ರೀ ಮಠದಿಂದಲೇ ಕೊಡಿಸಿ, ಅವರು ನಿರಾಲೋಚನೆಯಿಂದ ಪಾಠಪ್ರವಚನಾಸ್ತಕರಾಗುವಂತೆ ಮಾಡಿದ್ದರಿಂದ ಆಚಾರ್ಯ ದಂಪತಿಗಳು ಕುಮಾರ ಲಕ್ಷ್ಮೀನಾರಾಯಣನೊಡನೆ ಸುಖವಾಗಿ ಬಾಳಹತ್ತಿದರು. ಅಂದು ಭಾರತದಲ್ಲಿ

ಷಡ್‌ದರ್ಶನಾಚಾರ್ಯರು, ವಿದ್ಯಾಚಕ್ರವರ್ತಿಗಳೆನಿಸಿ, ಶ್ರೀಮದಾಚಾರ್ಯ ಪರಂಪರಾಗತ ಪಾಠಪ್ರವಚನ ಸಂಪ್ರದಾಯ, ವಾದವಿದ್ಯೆಗಳಲ್ಲಿ ಶ್ರೀ ಸುಧೀಂದ್ರತೀರ್ಥರು ಅದ್ವಿತೀಯರಾಗಿದ್ದರು. ಅಂತೆಯೇ ವೆಂಕಟನಾಥರು ಮಹಾಪಂಡಿತರಾಗಿದ್ದರೂ ಸಕಲಶಾಸ್ತ್ರಗಳ ಪ್ರೌಢಗ್ರಂಥಗಳನ್ನು ಅವರಲ್ಲಿ ಅಧ್ಯಯನ ಮಾಡಲಾಶಿಸಿದರು. ಅದರಿಂದ ಶ್ರೀ ಸುಧೀಂದ್ರರಿಗೆ ಪರಮಾನಂದ ವಾಯಿತು. ಒಂದು ಶುಭದಿನ ಸಕಲಶಾಸ್ತ್ರಪಾರಂಗತರಾದ ವೆಂಕಟನಾಥಾ ಚಾರ್ಯರಿಗೆ ಉದ್ಗ್ರಂಥ ಪಾಠ ಹೇಳಲಾರಂಭಿಸಿದರು. ವೆಂಕಟನಾಥರು ಗುರುಗಳಲ್ಲಿ ವ್ಯಾಕರಣ ಮಹಾಭಾಷ್ಯ, ಜಯದೇವನ ಟೀಕಾ, ಭಟ್ಟ ಮತ್ತು ಪ್ರಭಾಕರರ ಮೀಮಾಂಸಾಶಾಸ್ತ್ರದ ಪ್ರೌಢಗ್ರಂಥಗಳು, ಭಾಮತಿ, ಮತ್ತು ದ್ವೈತಸಿದ್ಧಾಂತದ ಮೇರುಕೃತಿಗಳಾದ ಶ್ರೀಮನ್ನ್ಯಾಯ ಸುಧಾ, ಚಂದ್ರಿಕಾದಿಗ್ರಂಥ ಗಳನ್ನು ಅತ್ಯಲ್ಪ ಕಾಲದಲ್ಲಿಯೇ ಅಧ್ಯಯನಮಾಡಿ ಜಗಜ್ಜೇತಾರರಾದ ಪ್ರಕಾಂಡ ಪಂಡಿತರಾದರು.

ಇದರಂತೆ ವೆಂಕಟನಾಥರು ಪ್ರತಿದಿನ ಪಂಚಪಂಚ ಉಷಃಕಾಲಕ್ಕೆ ಎದ್ದು, ಸ್ನಾನ-ಸಂಧ್ಯಾ-ಜಪತಪ-ದೇವಪೂಜಾದಿಗಳನ್ನು ಮುಗಿಸಿ ಶ್ರೀಕುಂಭಕೋಣದ ವಿದ್ಯಾಮಠದಲ್ಲಿ ನೂರಾರುಜನ ವಿದ್ಯಾರ್ಥಿಗಳಿಗೆ ಪಾಠಹೇಳುತ್ತಿದ್ದರು. ವಿದ್ವತ್ಪೂರ್ಣವಾದ ಅವರ ಪಾಠವನ್ನು ಶ್ರವಣ ಮಾಡಲೆಂದೇ ನೂರಾರುಜನ ಧರ್ಮಾಭಿಮಾನಿಗಳು ದಿನಾ ಬರುತ್ತಿದ್ದರು. ಆಚಾರ್ಯರು ಮೊದಲಯಾಮ ದಲ್ಲಿ ವೇದಾಂತಶಾಸ್ತ್ರ, ಎರಡು ಮೂರನೆಯ ಯಾಮಗಳಲ್ಲಿ ವ್ಯಾಕರಣ ಮತ್ತು ತರ್ಕಶಾಸ್ತ್ರಗಳನ್ನೂ, ನಾಲ್ಕನೆಯ ಯಾಮದಲ್ಲಿ ಮೀಮಾಂಸಶಾಸ್ತ್ರವನ್ನೂ ವಿದ್ಯಾರ್ಥಿಗಳಿಗೆ ಪಾಠಹೇಳುತ್ತಿದ್ದರು. ಆಚಾರ್ಯರ ಪಾಂಡಿತ್ಯಾದಿ ಸದ್ಗುಣ ಗಳಿಂದ ತುಷ್ಟರಾದ ಶ್ರೀಸುಧೀಂದ್ರರು ಅವರಲ್ಲಿ ವಿಶೇಷ ಪ್ರೇಮಾದರ ಮಾಡುತ್ತಿದ್ದರು. ಆಚಾರ್ಯರೂ ಶ್ರೀಗಳವರನ್ನು ಉದ್ಧಾರಕ ಗುರುಗಳೆಂದು ನಂಬಿ ಅವರನ್ನು ಭಕ್ತಿ ಶ್ರದ್ಧೆಗಳಿಂದ ಸೇವಿಸುತ್ತಾ ಸರ್ವರಪ ಮನ್ನಣೆಗೆ ಪಾತ್ರರಾದರು.

11. ಸಂಚಾರ-ವಾದಿವಿಜಯ

ಒಮ್ಮೆ ಗುರು ಸುಧೀಂದ್ರರು ಶಿಷ್ಯೋದ್ಧಾರಾರ್ಥವಾಗಿ ಸಂಚಾರ

ಹೊರಟರು. ವೆಂಕಟನಾಥರೂ ಗುರುಗಳ ಜೊತೆಗಿದ್ದು ಅಲ್ಲಲ್ಲಿ ವಾದಕ್ಕೆ ಬರುವ ಪಂಡಿತರೊಡನೆ ವಾಕ್ಯಾರ್ಥಮಾಡಿ ಜಯಿಸಿ ಗುರುಗಳ ಹೆಚ್ಚಿನ ವಾತ್ಸಲ್ಯಕ್ಕೆ ಪಾತ್ರರಾದರು. ಶ್ರೀಯವರ ಸವಾರಿ ರಾಜಮನ್ನಾರು ಗುಡಿಗೆ ಚಿತ್ತೈಸಿತು. ದಕ್ಷಿಣದ್ವಾರಕಾ ಎನಿಸಿದ ಆ ಕ್ಷೇತ್ರದಲ್ಲಿ ಶ್ರೀಕೃಷ್ಣನ ದರ್ಶನಕ್ಕಾಗಿ ಹೋಗಿ ದೇವರದರ್ಶನಮಾಡಿ ಬರುವಾಗ ಮುಖಮಂಟಪದಲ್ಲಿ ಶೈವಸನ್ಯಾಸಿಗಳೊಬ್ಬರು ಅದ್ವೈತೋಪನ್ಯಾಸಮಗ್ನರಾಗಿರುವುದನ್ನು ಕಂಡು ವೆಂಕಟನಾಥರು ಅವರೊಡನೆ ವಾದಕ್ಕಿಳಿದರು. ಆಚಾರ್ಯರ ಪ್ರಖರ ಪಾಂಡಿತ್ಯದೆದುರು ನಿಲ್ಲಲಾಗದೆ ಸೋಲೊಪ್ಪಲೂ ಇಚ್ಛಿಸದೆ ಸನ್ಯಾಸಿಗಳು, ಅವರ ಶಿಷ್ಯರು ವ್ಯಾಕರಣ ಶಾಸ್ತ್ರದಲ್ಲಿ ವಾದಮಾಡಲಾರಂಭಿಸಿದಾಗ ಆಚಾರ್ಯರು ಮಹಾಭಾಷ್ಯವನ್ನೇ ಅನುವಾದಮಾಡಿ ಶೈವಸನ್ಯಾಸಿಗಳನ್ನು ಜಯಿಸಿದರು. ತಮ್ಮಲ್ಲೇ ಮಹಾಭಾಷ್ಯವನ್ನೊದಿದ್ದರೂ ಅಂದು ವೆಂಕಟನಾತರು ವ್ಯಾಕರಣಶಾಸ್ತ್ರದಲ್ಲಿ ತೋರಿದ ಅಪೂರ್ವ ಪಾಂಡಿತ್ಯಕಂಡು ಅಚ್ಚರಿಗೊಂಡು ಶ್ರೀಸುಧೀಂದ್ರತೀರ್ಥರು ಆಚಾರ್ಯರಿಗೆ ವಿದ್ವತ್ಸಭೆಯಲ್ಲಿ "ಮಹಾಭಾಷ್ಯಾಚಾರ್ಯ" ಎಂಬ ಶ್ರೇಷ್ಠ ಪ್ರಶಸ್ತಿಯನ್ನಿತ್ತು ಸನ್ಮಾನಿಸಿದರು. ಅಂದಿನಿಂದ ಆಚಾರ್ಯರು "ಮಹಾಭಾಷ್ಯ ವೆಂಕಟನಾಥಾರ್ಯ"ರೆಂದೇ ಪ್ರಖ್ಯಾತರಾದರು.

ಸಂಚಾರಕ್ರಮದಲ್ಲಿ ತಂಜಾವೂರಿಗೆ ಬಂದಾಗ ರಾಜಸಭೆಯಲ್ಲಿ ಅನೇಕ ಮೀಮಾಂಸಾಶಾಸ್ತ್ರಕೋವಿದರು ಆಚಾರ್ಯರೊಡನೆ ವಾದಮಾಡಿ ಪರಾಜಿತರಾದರು. ಆಗ "ಶುಲ್ಬಸೂತ್ರ"ಕ್ಕೆ ವ್ಯಾಖ್ಯಾನಮಾಡಿ ಪ್ರಸಿದ್ಧರಾಗಿದ್ದ ಪಂಡಿತರೊಬ್ಬರು* ರಾಜ್ಯದ ಮಹಾಪಂಡಿತರೂ ಖ್ಯಾತನಾಮರೂ ಆದ ಶ್ರೀಯಜ್ಞನಾರಾಯಣದೀಕ್ಷಿತರ ಮಧ್ಯಸ್ತಿಕೆಯಲ್ಲಿ ಆಚಾರ್ಯರೊಡನೆ ವಾದಮಾಡಿ ಪರಾಜಿತರಾದರು. ದೀಕ್ಷಿತರು ವೆಂಕಟನಾಥರನ್ನು ಬಹುವಾಗಿ ಗೌರವಿಸಿದರು. ಮುಂದೆ ಶ್ರೀಗಳವರು ಶ್ರೀರಂಗಕ್ಕೆ ದಯಮಾಡಿಸಿದರು. ಅಲ್ಲಿ ಶ್ರೀಯವರ ದರ್ಶನಕ್ಕೆ ಬಂದ ಪಕ್ಷಧರ ಮಿಶ್ರರ ಶಿಷ್ಯಪರಂಪರೆಗೆ ಸೇರಿದ ವಿಖ್ಯಾತ

---

* ವೆಂಕಟನಾಥರೊಡನೆ ವಾದಮಾಡಿದವರು ಶ್ರೀ ಯಜ್ಞನಾರಾಯಣ ದೀಕ್ಷಿತರ ಸಹೋದರರೆಂದು ತಿಳಿದುಬರುವುದು-ಗ್ರಂಥಕರ್ತಾ.

ನ್ಯಾಯಶಾಸ್ತ್ರ ವಿಶಾರದರಾದ ಪಂಡಿತರೊಡನೆ ಸಾಮಾನ್ಯ ನಿರುಕ್ತಿಮಹಾಗ್ರಂಥದ ಮೇಲೆ ವಾದಮಾಡಿ ಅಪೂರ್ವ ಕ್ರೋಢಪತ್ರಗಳನ್ನು ಅನುವಾದಿಸಿ ಆ ಪಂಡಿತರನ್ನು ನಿಬ್ಬೆರಗುಗೊಳಿಸಿ ಅವರಿಂದ ಮಾನಿತರಾದರು.

ಮತ್ತೊಮ್ಮೆ ಶ್ರೀ ಸುಧೀಂದ್ರತೀರ್ಥರ ಶಿಷ್ಯನಾದ ತಂಜಾಪುರದ ದೊರೆ ರಘುನಾಥಭೂಪಾಲನು ಶ್ರೀ ಸುಧೀಂದ್ರರ ಅಧ್ಯಕ್ಷತೆಯಲ್ಲಿ ದೊಡ್ಡವಿದ್ವತ್ಸಭೆಯನ್ನು ನೆರವೇರಿಸಿದನು. ಆಗ ಅನೇಕ ಪಂಡಿತರು ವೆಂಕಟನಾಥರೊಡನೆ ವಾದಕ್ಕಿಳಿದರು. ಅವರಲ್ಲಿ ಓರ್ವ ಅಲಂಕಾರಶಾಸ್ತ್ರಕೋವಿದರಾದ ಪಂಡಿತರು "ಕಾಕತಾಲೀಯ" ಎಂಬ ವಿಷಯದಮೇಲೆ ವಾಕ್ಯಾರ್ಥಮಾಡಿ ಪರಾಜಿತರಾದರು. ಮತ್ತೊಬ್ಬ ಪಂಡಿತರು ಮಂತ್ರಮುದ್ರಾಧಾರಣೆಯು ಅವೈದಿಕವೆಂದು ವಾದಿಸಿದಾಗ ಆಚಾರ್ಯರು ಶ್ರುತಿ. ಸ್ಮೃತ್ಯಾದಿ ಅನೇಕ ಪ್ರಮಾಣೋದಾಹರಣ ಪೂರ್ವಕವಾಗಿ ಅದ್ಭುತರೀತಿಯಿಂದ ವಾದಮಾಡಿ "ತಪ್ತಮುದ್ರಾಂಕನ"ವು ವೇದವಿಹಿತವಾದ ಅವಶ್ಯಕರ್ತವ್ಯವೆಂದು ಸಾಧಿಸಿದರು. ಇದರಿಂದ ಪ್ರಭಾವಿತರಾದ ಯಜ್ಞನಾರಾಯಣ ದೀಕ್ಷಿತರು ಆಚಾರ್ಯರನ್ನು ಮನಮುಟ್ಟಿ ಶ್ಲಾಘಿಸಿದರು. ರಘುನಾಥಭೂಪಾಲ ಹರ್ಷನಿಭರನಾಗಿ ವೆಂಕಟನಾಥಾಚಾರ್ಯರಿಗೆ "ಭಟ್ಟಾಚಾರ್ಯ" ಎಂಬ ಪ್ರಶಸ್ತಿಯನ್ನು ಸುವರ್ಣಾಭರಣ ಶಾಲು ಜೋಡಿಗಳೊಡನೆ ಅರ್ಪಿಸಿ ಅಸಾಧಾರಣ ರೀತಿಯಿಂದ ಸನ್ಮಾನಿಸಿದನು. ಆಚಾರ್ಯರ ಈ ದಿಗ್ವಿಜಯಗಳಿಂದ ತೃಪ್ತರಾದ ಶ್ರೀ ಸುಧೀಂದ್ರತೀರ್ಥರು ಅವರಲ್ಲಿ ಹೆಚ್ಚು ಪ್ರೇಮಾದರ ಮಾಡಹತ್ತಿದರು. ಹೀಗೆ ಗುರುಗಳು ಸಂಚಾರ ಮಾಡಿ ಆಚಾರ್ಯರೊಡನೆ ಕುಂಭಕೋಣಕ್ಕೆ ದಯಮಾಡಿಸಿದರು.

ಒಂದು ದಿನ ಶ್ರೀಗಳವರಲ್ಲಿಗೆ ಬಂದ ವೆಂಕಟನಾಥರು ತಾವು ಬರೆದ ಒಂದು ತಾಲಾಓಲೆಯ ಗ್ರಂಥವನ್ನು ಗುರುಗಳಿಗರ್ಪಿಸಿದರು. ಅದು ಶ್ರೀನಾರಾಯಣ ಪಂಡಿತಾಚಾರ್ಯರು ರಚಿಸಿದ "ಪ್ರಮೇಯನವಮಾಲಿಕಾ" (ಅಣುಮಧ್ವವಿಜಯ) ಗ್ರಂಥಕ್ಕೆ ಬರೆದ ವ್ಯಾಖ್ಯಾನವಾಗಿತ್ತು. ಅದನ್ನು ಆಮೂಲಾಗ್ರವಾಗಿ ಪರಿಶೀಲಿಸಿದ ಶ್ರೀಗಳವರು ಆಚಾರ್ಯರ ಗ್ರಂಥರಚನಾ ಕೌಶಲವನ್ನು ಕಂಡು ಬೆರಗಾಗಿ ಆಚಾರ್ಯರನ್ನು ಮುಕ್ತಕಂಠದಿಂದ ಶ್ಲಾಘಿಸಿ ಶ್ರೀ ಮಧ್ವನವರಾತ್ರ ಮಹೋತ್ಸವದಲ್ಲಿ ಈ ಗ್ರಂಥವನ್ನು ಅನುವಾದ ಮಾಡಬೇಕೆಂದು ಆಜ್ಞಾಪಿಸಿದರು. ಗುರುಗಳ ಅಪ್ಪಣೆಯಂತೆ

ಶ್ರೀಮಧ್ವನವರಾತ್ರೋತ್ಸವ ಸಂದರ್ಭದಲ್ಲಿ ಆ ಗ್ರಂಥವನ್ನು ವಿದ್ವತ್ಸಭೆಯಲ್ಲಿ ಅನುವಾದಮಾಡಿದರು. ಪಂಡಿತರು, ಸಭಾಸದರಾದ ಧಾರ್ಮಿಕ ವೃಂದವರು ಗ್ರಂಥಶ್ರವಣದಿಂದ ಪರಮಾನಂಧಭರಿತರಾಗಿ ವೆಂಕಟನಾಥರನ್ನು ಕೊಂಡಾಡಿದರು.

12. ಸನ್ಯಾಸಕ್ಕೆ ಕರೆ

ಮಧ್ವನವಮಿರಾತ್ರಿ ಶ್ರೀ ಸುಧೀಂದ್ರತೀರ್ಥರಿಗೆ ಒಂದು ಕನಸಾಯಿತು. ಸ್ವಪ್ನದಲ್ಲಿ ಶ್ರೀಮೂಲರಾಮ, ವೇದವಾಸದೇವರು ಮತ್ತು ಶ್ರೀಮಧ್ವಾಚಾರ್ಯರು ದರ್ಶನವಿತ್ತು ತತ್ವಜ್ಞಾನಪ್ರಸಾರ, ಗ್ರಂಥರಚನೆ, ಲೋಕಕಲ್ಯಾಣ ಮತ್ತು ಮೂಲರಾಮದೇವರಪೂಜೆ ಮಾಡುತ್ತಾ ಶ್ರೀಮಧ್ವಾಚಾರ್ಯರ ವೇದಾಂತ ಸಾಮ್ರಾಜ್ಯವನ್ನಾಳಲೆಂದೇ ವೆಂಕಟನಾಥರ ಅವತಾರವಾಗಿರುವುದಾಗಿಯೂ, ಅವರಿಗೆ ''ಶ್ರೀರಾಘವೇಂದ್ರತೀರ್ಥರು'' ಎಂಬ ಹೆಸರಿಟ್ಟು, ಸರ್ವಜ್ಞರ ವಿದ್ಯಾ ಸಾಮ್ರಾಜ್ಯ ದಿಗ್ವಿಜಯ ವಿದ್ಯಾಸಿಂಹಾಸನದಲ್ಲಿ ಮಂಡಿಸಿ ಪಟ್ಟಾಭಿಷೇಕವನ್ನು ನೆರವೇರಿಸಬೇಕು ಎಂದು ಆಜ್ಞಾಪಿಸಿದರು. ಬೆಳಗಾದಮೇಲೆ ಸುಧೀಂದ್ರರು ತಮಗಾದ ಸ್ವಪ್ನ, ಸ್ವಪ್ನಾರ್ಥವನ್ನು ಸ್ಮರಿಸಿ ಆನಂದತುಂದಿಲರಾದರು. ತಮ್ಮ ಮನಸ್ಸಿನಲ್ಲಿದ್ದುದನ್ನೇ ಶ್ರೀಮೂಲರಘುಪತಿವೇದವ್ಯಾಸರು ಮತ್ತು ಶ್ರೀಮಧ್ವಾಚಾರ್ಯರೂ ಆಜ್ಞಾಪಿಸಿದರೆಂದು ರೋಮಾಂಚಿತರಾದರು. ರಾತ್ರಿ ಮೂಲಕೀಮಂಗಳಾರತಿಯಾದಮೇಲೆ ಏಕಾಂತದಲ್ಲಿ ವೆಂಕಟನಾಥಾಚಾರ್ಯರನ್ನು ಹತ್ತಿರ ಕೂಡಿಸಿಕೊಂಡು ತಮಗಾದ ಸ್ವಪ್ನವನ್ನು ವಿವರಿಸಿ ಸನ್ಯಾಸವನ್ನು ಸ್ವೀಕರಿಸಲು ಸಿದ್ಧವಾಗಬೇಕೆಂದು ತಿಳಿಸಿದರು. ಗುರುಗಳವಚನವನ್ನಾಲಿಸಿ ವೆಂಕಟನಾಥರು ಬೆರಗಾದರು. ಮತ್ತು ''ಮಹಾಸ್ವಾಮಿ, ತಮ್ಮದು ವೇದಾಂತಸಾಮ್ರಾಜ್ಯ, ಈ ಮಹಾಪೀಠದಲ್ಲಿ ಶ್ರೀಜಯತೀರ್ಥ, ವಿಬುಧೇಂದ್ರ, ವಿಜಯಿಂದ್ರರಂಥ ಜ್ಞಾನಿಗಳು ಮಂಡಿಸಿದ್ದರು. ಈಗ ಮಹಾಜ್ಞಾನಿಗಳಾದ ನೀವು ವಿರಾಜಿಸಿದ್ದೀರಿ. ಇಂಥ ಪೀಠದಲ್ಲಿ ಕೂಡುವ ಯೋಗ್ಯತೆ ನನಗಿಲ್ಲ. ನನ್ನ ಪತ್ನಿ ಇನ್ನೂ 23 ವರ್ಷದ ಹುಡುಗಿ, ಮಗನಿಗೆ ಉಪನಯನವಾಗಿಲ್ಲ, ನಾನು ಸಹ ಇನ್ನೂ ಬಾಲಕ, ನನಗೆ ಸನ್ಯಾಸಬೇಡ, ನೀವು ಬಲಾತ್ಕರಿಸಿದರೆ, ಇನ್ನು ಮುಂದೆ ತಮ್ಮ ಸೇವೆ ಮಾಡಿಕೊಂಡಿರುವ ಭಾಗ್ಯ ನನಗಿಲ್ಲವೆಂದು ಭಾವಿಸಿ ಮಠಬಿಟ್ಟು ಹೋಗುತ್ತೇನೆ'' ಎಂದು ಹೇಳಲು ಸುಧೀಂದ್ರರು ಬಹುವಿಧವಾಗಿ

ಮತ್ತೆ ಉಪದೇಶಮಾಡಿದರೂ ಅದನ್ನು ಕೇಳಿಯೂ ಕೇಳದವರಂತೆ ಮನೆಗೆ ಹೊರಟುಹೋದರು.

13. ವಿದ್ಯಾದೇವಿಯದರ್ಶನ-ಉಪದೇಶ

ಗುರುಗಳ ಮಾತನ್ನು ಒಪ್ಪದೆ ಮನೆಗೆ ಬಂದ ವೆಂಕಟನಾಥರನ್ನು ಚಿಂತೆ ಆವರಿಸಿತು. ರಾತ್ರಿ ಬಹು ಹೊತ್ತಾದರೂ ಚಿಂತಾಕ್ರಾಂತರಾಗಿ ಕುಳಿತಿದ್ದಾರೆ ಆಚಾರ್ಯರು, ಗುರುಗಳ ಉಪದೇಶದಂತೆ ನಡೆದರೆ ಹೆಂಡತಿ ಮಕ್ಕಳನ್ನು ತೊರೆದು ಸನ್ಯಾಸಿಯಾಗಬೇಕಾಗುವುದು. ಅದು ತಮಗೆ ಇಷ್ಟವಿಲ್ಲ. ಗುರುಗಳ ಮಾತುಮೀರಿದಲ್ಲಿ ಅವರ ಶಾಪಕ್ಕೆ ಗುರಿಯಾಗಬೇಕಾಗುತ್ತದೆ. ಈಗೇನು ಮಾಡುವುದೆಂದು ಯೋಚಿಸುತ್ತಾ ಕುಳಿತರು. ಹೀಗೆ ಯೋಚನಾ ಪರರಾಗಿರುವಾಗ ರಾತ್ರಿ ಮೊದಲ ಯಾಮಕಳೆಯಿತು. ಎರಡು ಮೂರನೆಯ ಯಾಮವೂ ಗತಿಸಿ ನಾಲ್ಕನೆಯ ಯಾಮದಲ್ಲಿ ಅರ್ಧಭಾಗವೂ ಮುಗಿಯಿತು. ಆದರೂ ಅಚಾರ್ಯರ ಚಿಂತೆ ಬಗೆಹರಿಯಲಿಲ್ಲ. ಆಗ ಇದ್ದಕ್ಕಿದ್ದಂತೆ ಅನೇಕ ಮಿಂಚುಗಳು ಮಿನುಗಿದಂತಾಗಿ ಆ ದಿವ್ಯ ಪ್ರಕಾಶದಲ್ಲಿ ತಮ್ಮ ಬಳಿನಿಂತಿರುವ ಸರ್ವಾಭರಣ ಭರಿತಳಾಗಿ ವೀಣಾಪಾಣಿಯಾಗಿ ಕಂಗೋಳಿಸುವ ದೇವಿಯನ್ನು ಕಂಡು ಆಚಾರ್ಯರು ವಿಸ್ಮಿತರಾದರು. ಆಗ ನಸುನಗುತ್ತಾ ಆ ದೇವಿಯು ಮೃದು ಮಧುರ ನುಡಿಗಳಿಂದ ಇಂತೆಂದಳು-

''ಕುಮಾರ ವೆಂಕಟನಾಥ! ನಾನು ವಿದ್ಯಾದೇವಿಯಾದ ಸರಸ್ವತಿ! ವಿದ್ವತ್ಕುಲತಿಲಕ, ನನ್ನನ್ನು ಶ್ರೀಮಧ್ವ, ಜಯತೀರ್ಥ, ವ್ಯಾಸರಾಜ, ವಿಜಯೀಂದ್ರರುಗಳು ರಕ್ಷಿಸಿಕೊಂಡು ಬಂದರು. ನಾನು ಇನ್ನೆರಡು ವರ್ಷಗಳವರೆಗೆ ನಿನ್ನ ಗುರುಗಳ ಆಶ್ರಯದಲ್ಲಿದ್ದು ನಂತರ ಆಶ್ರಯಹೀನಳಾಗಲಿದ್ದೇನೆ. ಅಂತೆಯೇ ನಾನು ನಿನ್ನಲ್ಲಿ ಆಶ್ರಯಬೇಡಲು ಬಂದಿರುವೆ. ಶ್ರೀಮೂಲರಾಮ ಪೂಜೆಗೊಂಬಲ್ಲಿ ಚತುರ್ವಿಧ ಪುರಷಾರ್ಥಗಳೂ ರಾಜಿಸುವವು. ಶ್ರೀ ಮೂಲ ರಾಮನ ಪೂಜೆಯನ್ನು ಪರಮಹಂಸಾಶ್ರಮಿ (ಸನ್ಯಾಸಿ)ಗಳೇ ಮಾಡಬೇಕೆಂಬ ನಿಯಮವಿದೆ. ಆದ್ದರಿಂದ ನೀನು ಸನ್ಯಾಸಿಯಾಗಿ ನನಗೆ ಆಶ್ರಯನೀಡು. ಕುಮಾರ! ನಿನ್ನಿಂದ ವೈದಿಕ ವಾಙ್ಮಯಕ್ಕೆ ಅಪಾರಸೇವೆ ಸಲ್ಲಬೇಕಾಗಿದೆ. ಆ ಕಾರ್ಯ ನಿನ್ನ ವಿನಃ ಬೇರಾರೂ

ಮಾಡಲು ಶಕ್ತರಲ್ಲ. ನೀನು ಸನ್ಯಾಸಿಯಾಗಿ ಅಪೂರ್ವಗ್ರಂಥರಚನೆಯಿಂದ ದ್ವೈತಸಿದ್ಧಾಂತವನ್ನು ಸ್ಥಿರಗೊಳಿಸಬೇಕು. ವಿಷ್ಣುಸರ್ವೋತ್ತಮತ್ವವನ್ನು ಸ್ಥಾಪಿಸಬೇಕು. ಜಗತ್ಕಲ್ಯಾಣ ಮಾಡಬೇಕು. ಧರ್ಮಪ್ರತಿಸ್ಥಾಪನೆ, ಮಾಹಿಮಾಪ್ರದರ್ಶನಾದಿಗಳಿಂದ ಆಸ್ತಿಕಮತವನ್ನು ಪುನರುದ್ಧರಿಸಬೇಕು. ಈ ಮಹಾತ್ಕಾರ್ಯಕ್ಕಾಗಿಯೇ ನೀನು ಅವತರಿಸಿದ್ದೀಯೆ. ಸನ್ಯಾಸಿಯಾಗುವುದು ನಿನ್ನಹಣೆಯಲ್ಲಿ ಬರೆದಿದೆ, ನಿನ್ನ ವಶದಲ್ಲಿರುವುದು ನನ್ನ ಹಣೆಯಲ್ಲಿ ಬರೆದಿದೆ. ಅದನ್ನು ತಪ್ಪಿಸಲು ಸಾಧ್ಯವಿಲ್ಲ. ಅದು ಶ್ರೀಹರಿ ಸಂಕಲ್ಪ. ನಿನ್ನ ವಶಳಾದ ನಾನು ಸ್ವಪ್ನದಲ್ಲಿಯೂ ಬೇರೆ ಸನ್ಯಾಸಿಗಳನ್ನು ನೆನೆಯುವುದಿಲ್ಲ! ಆದ್ದರಿಂದ ನಿನ್ನ ಗುರುಗಳಿಂದ ಪರಮಹಂಸಾಶ್ರಮ ಸ್ವೀಕರಿಸಿ ವೇದಾಂತ ವಿದ್ಯಾರಾಜ್ಯ ಲಕ್ಷ್ಮಿಗೆ ಒಡೆಯನಾಗಿ ಲೋಕಕಲ್ಯಾಣಮಾಡು'' ಎಂದು ಹೇಳಿ ಸರಸ್ವತೀ ದೇವಿಯು ಸಾಷ್ಟಾಂಗವೆರಗಿ ವಿನೀತರಾಗಿನಿಂತ ವೆಂಕಟನಾಥರಿಗೆ ತನ್ನ ಮಂತ್ರ ವನ್ನು ಉಪದೇಶಿಸಿ ಅವರು ನೋಡುತ್ತಿರುವಂತೆಯೇ ಆ ದೇವಿ ಅದೃಶ್ಯಳಾದಳು.

ಸರಸ್ವತೀದೇವಿಯ ಅನುಗ್ರಹದಿಂದ ವೆಂಕಟನಾಥರಿಗೆ ತಮ್ಮ ಸ್ವರೂಪ ದರ್ಶನವಾಯಿತು. ಹಿಂದಿನ ತಮ್ಮ ಅವತಾರಗಳ ಸ್ಮರಣೆಯುಂಟಾಯಿತು. ಮುಂದೆ ತಾವು ಮಾಡಬೇಕಾದ ಕರ್ತವ್ಯದ ಅರಿವಾಯಿತು. ಆಚಾರ್ಯರು ದೇವಿಯ ಪ್ರತ್ಯಕ್ಷದರ್ಶನ- ಉಪದೇಶಗಳಿಂದ ಆನಂದಪುಳಕಿತರಾದರು. ಅವರ ಕಣ್ಣಿಂದ ಆನಂದಬಾಷ್ಪ ಹರಿಯಿತು. ದೇವಿಗೆ ಮಾನಸಾ ವಂದಿಸಿ, ಸರಸ್ವತೀ ದೇವಿಯ ಆಣತಿಯಂತೆ ನಡೆಯುವುದಾಗಿ ನಿರ್ಧರಿಸಿದರು. ಆ ಹೊತ್ತಿಗೆ ಸೂರ್ಯೋದಯವಾಯಿತು. ಸ್ನಾನ ಸಂಧ್ಯಾದಿಗಳನ್ನು ಮುಗಿಸಿ ಮಠಕ್ಕೆ ತೆರಳಿ ಶ್ರೀ ಸುಧೀಂದ್ರರಲ್ಲಿ ಎಲ್ಲ ಘಟನೆಗಳನ್ನು ನಿವೇದಿಸಿ, "ಗುರುವರ್ಯ! ತಮ್ಮ ಆಜ್ಞೆಯಂತೆ ನಡೆಯಲು ಸಿದ್ಧನಾಗಿದ್ದೇನೆ'' ಎಂದು ವಿಜ್ಞಾಪಿಸಿ ನಮಸ್ಕರಿಸಿದರು. ಶ್ರೀ ಸುಧೀಂದ್ರರಿಗಾದ ಆನಂದ. ಆಶ್ಚರ್ಯ ವರ್ಣಿಸಲಸದಳ-ಗುರುಗಳು ಸಾಕ್ಷಾತ್ ವಿದ್ಯಾದೇವಿಯ ದರ್ಶನ ಪಡೆದ ಆಚಾರ್ಯರನ್ನು ಕೊಂಡಾಡಿ, ಲಕ್ಷ್ಮೀನಾರಾಯಣನ ಉಪನಯನ ಮಾಡಲು ಸರ್ವಅನುಕೂಲಗಳನ್ನು ಏರ್ಪಡಿಸುವುದಾಗಿಯೂ, ತಂಜಾವೂರಿನ ರಾಜದರ್ಬಾರಿನಲ್ಲಿ ಆಶ್ರಮ ಪ್ರದಾನ ಮಾಡುವುದಾಗಿಯೂ, ಅವರೆಗೆ ವಿಷಯ ರಹಸ್ಯವಾಗಿರಲಿ ಎಂದು ಹೇಳಿ ಆಚಾರ್ಯರಿಗೆ ಫಲಮಂತ್ರಾಕ್ಷತೆ ನೀಡಿ ಕಳಿಸಿದರು.

☆ ☆ ☆ ☆ ☆ ☆

ವೆಂಕಟನಾಥರು ಅಣ್ಣ, ಅತ್ತಿಗೆ, ಅಕ್ಕ, ಭಾವ, ಬಂಧುಗಳನ್ನು ಕರೆಸಿಕೊಂಡು ಲಕ್ಷ್ಮೀನಾರಾಯಣನ ಉಪನಯನವನ್ನು ವಿಜೃಂಭಣೆಯಿಂದ ನೆರವೇರಿಸಿದರು. ನಾಲ್ಕಾರು ದಿನಗಳಾದಮೇಲೆ ಏಕಾಂತದಲ್ಲಿ ಪತ್ನಿಯೊಡನೆ ಮಾತನಾಡಿ ತಮ್ಮ ಸನ್ಯಾಸಸ್ವೀಕಾರದ ನಿರ್ಣಯವನ್ನು ಹೇಳಿದರು. ಸರಸ್ವತಮ್ಮನಿಗೆ ವಜ್ರಾಘಾತವಾದಂತಾಯಿತು. ಆ ಸಾಧ್ವಿ ಪತಿಯ ಚರಣಗಳನ್ನು ಹಿಡಿದು ನನ್ನನ್ನು ಅನಾಥಳನ್ನಾಗಿ ಮಾಡಬಾರದೆಂದು ವಿವಿಧ ರೀತಿಯಿಂದ ಪ್ರಾರ್ಥಿಸಿ ಗಳಗಳನೆ ಅತ್ತುಬಿಟ್ಟಳು. ಆದರೂ ಆಚಾರ್ಯರು ತಮ್ಮ ನಿರ್ಧಾರವನ್ನು ಬದಲಿಸದೆ ಪತ್ನಿಯಿಂದ ಬಲವಂತವಾಗಿ ಸನ್ಯಾಸಕ್ಕೆ ಒಪ್ಪಿಗೆ ಪಡೆದು ಪ್ರಿಯಸತಿಯನ್ನು ಸಾಂತ್ವನಗೊಳಿಸಿ, ಅಣ್ಣ ಗುರುರಾಜಾಚಾರ್ಯ, ಭಾವ ಲಕ್ಷ್ಮೀನರಸಿಂಹಾಚಾರ್ಯರಿಗೆ ಅಕ್ಕ ಅತ್ತಿಗೆಯರಿಗೆ ಶ್ರೀ ಸುಧೀಂದ್ರರು ತಮ್ಮಗೆ ಆಶ್ರಮ ಕೊಡಲಿರುವ ವಿಚಾರ ತಿಳಿಸಿ ಸರಸ್ವತೀ, ಲಕ್ಷ್ಮೀ ನಾರಾಯಣರ ರಕ್ಷಣೆಯ ಭಾರವನ್ನು ಅಣ್ಣ ಅತ್ತಿಗೆಯರಿಗೆ ಒಪ್ಪಿಸಿ ಶ್ರೀ ಸುಧೀಂದ್ರರೊಡನೆ, ಮಹಾಸಂಸ್ಥಾನದೊಡನೆ ತಂಜಾವೂರಿಗೆ ದಯಮಾಡಿಸಿದರು.

14. ಸನ್ಯಾಸ - ಸಾಮ್ರಾಜ್ಯಾಭಿಷೇಕ

ಶ್ರೀ ಸುಧೀಂದ್ರತೀರ್ಥರು ವೆಂಕಟನಾಥಾಚಾರ್ಯರಿಗೆ ಆಶ್ರಮ ಪ್ರದಾನ ಮಾಡವ ವಿಚಾರ ಎಲ್ಲ ಕಡೆ ಹರಡಿ ಎಲ್ಲ ಕಡೆಗಳಿಂದ ಆ ಮಹೋತ್ಸವ ನೋಡಲು ಸಹಸ್ರಾರುಜನ ತಂಜಾಪುರಕ್ಕೆ ಬಂದು ಸೇರಿದರು. ಶ್ರೀ ಸುಧಿಂದ್ರರ ಪ್ರಿಯಶಿಷ್ಯ-ಭಕ್ತನಾಗಿದ್ದ ತಂಜಾವೂರಿನ ಮಹಾರಾಜ ರಘುನಾಥಭೂಪಾಲ ವೇದಾಂತ ಸಾಮ್ರಾಜ್ಯಾಭಿಷೇಕಕ್ಕೆ ಸಮಸ್ತ ವ್ಯವಸ್ಥೆ ಮಾಡಿಸಿದ್ದ. ನಗರ-ಅರಮನೆಗಳನ್ನು ತಳಿರುತೋರಣ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಎಲ್ಲೆಡೆಲ್ಲಿಯೂ, ಸಡಗರ, ಸಂಭ್ರಮ. ಶ್ರೀ ಸುಧೀಂದ್ರರು ರಾಜನ ಅರಮನೆಯಲ್ಲಿ ವಿದ್ವಜ್ಜನ, ದರ್ಬಾರಿನ ಜನರ, ಧಾರ್ಮಿಕರ ಸಮಕ್ಷ ಶ್ರೀವೆಂಕಟನಾಥಾಚಾರ್ಯರು ತಮ್ಮ ಮುಂದಿನ ಪಟ್ಟಾಧಿಕಾರಿಗಳೆಂದು ಘೋಷಿಸಿ ಸನ್ಯಾಸ ಸ್ವೀಕಾರಕ್ಕೆ ಫಲಮಂತ್ರಾಕ್ಷತೆ ದಯಪಾಲಿಸಿದರು. ಸಕಲ ಸಭಾಸದರೂ ತಮ್ಮ ಆನಂದವನ್ನು ಜಯಕಾರಗಳಿಂದ ಸೂಚಿಸಿದರು.

ಶ್ರೀ ಶಾಲೀವಾಹನಶಕೆ 1543ನೇ ದುರ್ಮತಿ ಸಂವತ್ಸರದ ಫಾಲ್ಗುಣ ಶುಕ್ಲ

ಬಿದಿಗೆಯದಿನ (ಮಾರ್ಚಿ-1621) ಶ್ರೀ ವೆಂಕಟನಾಥಾಚಾರ್ಯರು ಶ್ರೀ ಮಧ್ವಾಚಾರ್ಯ ಮಹಾಸಂಸ್ಥಾನ ಪರಂಪರಾಪ್ರಾಪ್ತ ಸಂಪ್ರದಾಯ-ಪದ್ಧತಿಗಳಂತೆ ವೇದೋಕ್ತ ಕ್ರಮದಲ್ಲಿ ಪರಮಹಂಸಾಶ್ರಮವನ್ನು ಸ್ವೀಕರಿಸಿ ಅರಮನೆಗೆ ಬಂದು ಗುರು ಶ್ರೀ ಸುಧೀಂದ್ರರಿಗೆ ಪಾದಪೂಜೆಮಾಡಿ ನಮಸ್ಕರಿಸಿದರು. ಸುಧೀಂದ್ರರು ಪ್ರಿಯಶಿಷ್ಯರಿಗೆ ಮಂತ್ರಮುದ್ರಾಧಾರಣ, ಗುರೂಪದೇಶ, ಪ್ರಣವ, ಮತ್ತಿತರ ಮಹಾಮಂತ್ರಗಳನ್ನೂ, ಅರವತ್ನಾಲ್ಕು ಕಲೆಗಳನ್ನೂ ಉಪದೇಶಿಸಿ ಅವರನ್ನು ರಾಜದಾರ್ಬಾರಿಗೆ ಕರೆತಂದರು. ಅಲ್ಲಿ ಉಚ್ಚವೇದಿಕೆಯ ಮೇಲೆ ಸುವರ್ಣಮಯ ವಿದ್ಯಾಸಿಂಹಾಸನವು ಅಲಂಕೃತವಾಗಿತ್ತು. ಅರಮನೆಯಲ್ಲಿ ಪಂಡಿತರು, ಕವಿಗಳು, ಧಾರ್ಮಿಕರು, ರಾಜಕೀಯ ಅಧಿಕಾರಿಗಳು ಕಿಕ್ಕಿರಿದು ತುಂಬಿದ್ದರು. ಶ್ರೀ ಸುಧೀಂದ್ರರು ನೂತನಯತಿಗಳನ್ನು ವಿದ್ಯಾಸಿಂಹಾಸನದಲ್ಲಿ ಮಂಡಿಸಿ. ಶಿರದಮೇಲೆ ವೇದವ್ಯಾಸ, ಶ್ರೀಮಧ್ವಪ್ರತಿಮೆಗಳನಿಟ್ಟು ಶಂಖದಲ್ಲಿ ನವರತ್ನಗಳು, ಪವಿತ್ರನದೀಜಲ, ಪುಷ್ಪಗಳನ್ನು ತುಂಬಿ, ಮಂಗಳ ವಾದ್ಯಗಳು ಮೊಳಗುತ್ತಿರಲು, ವೇದಘೋಷವಾಗುತ್ತಿರಲು, ಕಲೆಗಾರರು ಸಂಗೀತ ಹಾಡುತ್ತಿರಲುಹರಿದಾಸರು ಕಾಲಿಗೆ ಗೆಜ್ಜೆಕಟ್ಟಿ ನರ್ತಿಸುತ್ತಿರಲು, ಪ್ರಜಾಜನರು ಜಯಘೋಷಮಾಡುತ್ತಿರಲು ಸಾಮ್ರಾಜ್ಯಾಭಿಷೇಕಮಾಡಿ ಶಿಷ್ಯರಿಗೆ "ಶ್ರೀ ರಾಘವೇಂದ್ರತೀರ್ಥರು" ಎಂದು ನಾಮಕರಣಮಾಡಿ ಹೀಗೆ ಆಶೀರ್ವದಿಸಿದರು-

ನಮ್ಮ ಪ್ರಿಯ ಶಿಷ್ಯರಾದ ನೂತನ ಜಗದ್ಗುರುಗಳಾದ ಇವರು ಕುಬೇರನಂತೆ ಮಹಾಸಂಪದ್ಭರಿತರಾಗಿ; ಶ್ರೀರಾಮಚಂದ್ರದೇವರಂತೆ ಮಂಗಳಕರರಾಗಿ, ಶ್ರೀರಾಮಭದ್ರನ ಕಾರುಣ್ಯದಂತೆ ಜಗತ್ತಿನ ಹಿತದಲ್ಲಿ ಆಸಕ್ತರಾಗಿ; ಶ್ರೀ ಸುರೇಂದ್ರತೀರ್ಥರಂತೆ ಮಹಾತಪಸ್ವಿಗಳಾಗಿ, ನಮ್ಮ ಗುರುಗಳಾದ ಶ್ರೀ ವಿಜಯೀಂದ್ರತೀರ್ಥರಂತೆ ಅಸದೃಶ ಕೀರ್ತಿಸಂಪನ್ನರಾಗಿ, ಲೋಕವಿಖ್ಯಾತ ವಾದವಿದ್ಯಾವಿಶಾರದರಾದ ನಮ್ಮಂತೆ (ಶ್ರೀಸುಧೀಂದ್ರಂತೆ) ವಾದಮಲ್ಲರಾಗಿ ಸಕಲಜನರ ಕಷ್ಟ, ದುಃಖ ಪರಿಹಾರ ಪೂರ್ವಕ ಸುಖಸಂತೋಷ ಇಷ್ಟಾರ್ಥಗಳನ್ನು ನೀಡುವವರು ಎಂಬರ್ಥದ ಶ್ರೀರಾಘವೇಂದ್ರತೀರ್ಥರೆಂಬ ಅನ್ವರ್ಥಕನಾಮದಿಂದ ಅಭಿವೃದ್ಧಿಸಲಿ" ಅದನ್ನಾಲಿಸಿದ ಸರ್ವರೂ "ಸಾಧು,ಸಾಧು" ಎಂದು ಘೋಷಿಸಿ ಕರತಾಡನ ಮಾಡಿದರು. ನಂತರ ಸುಧೀಂದ್ರರು ಶ್ರೀ ಮೂಲರಾಮ, ದಿಗ್ವಿಜಯರಾಮ, ಜಯರಾಮ

ವ್ಯಾಸಮುಷ್ಟಿಕೆಗಳು, ರತ್ನಗರ್ಭ ಶಾಲಿಗ್ರಾಮ, ರಾಮಟಂಕಿ ವರಹಾದಿ ಮಹಾಸಂಸ್ಥಾನ ಪ್ರತಿಮೆಗಳು, ಶಾಸ್ತ್ರಗ್ರಂಥಗಳು, ಶ್ವೇತಛತ್ರ, ಅಪ್ತಾಗಿರಿ, ಚಾಮರಗಳು, ಸುವರ್ಣಪಾಲಕಿ, ಸುವರ್ಣಅಂಬಾರಿ ಮುಂತಾದ ರಾಜಗೌರವಗಳನ್ನು ನೀಡಿ ಅನುಗ್ರಹಿಸಿದರು, ರಘುನಾಥಭೂಪಾಲ, ಸುವರ್ಣವ್ಯಾಸಪೀಠ, ಸ್ವರ್ಣಮುದ್ರಿಕೆಗಳು, ಮುಕ್ತಾಹಾರ, ಶಾಲು, ಪೀತಾಂಬರಗಳನ್ನರ್ಪಿಸಿ ನಮಸ್ಕರಿಸಿದನು. ಅನಂತರ ಪಂಡಿತ ಮಂಡಲಿ ಮುಂತಾದವರು ನೂತನ ಜಗ್ಗುರುಗಳಿಗೆ ಪಾದಕಾಣಿಕೆ ಅರ್ಪಿಸಿದರು. ತರವಾಯ ಮಹಾರಾಜನ ಕೋರಿಕೆಯಂತೆ ಆನೆಯಮೇಲೆ ಅಂಬಾರಿಯಲ್ಲಿ ಶ್ರೀರಾಘವೇಂದ್ರತೀರ್ಥರನ್ನು ಕೂಡಿಸಿ ಸಕಲ ಬಿರುದಾವಳಿ ವಾದ್ಯವೈಭವದೊಡನೆ ರಾಜಧಾನಿಯಲ್ಲಿ ಮೆರವಣಿಗೆ ನೆರವೇರಿತು. ಪ್ರಜಾಜನರು ಈ ಅಪೂರ್ವದೃಶ್ಯವನ್ನು ಕಂಡು ತಮ್ಮ ಜನ್ಮ ಸಾರ್ಥಕವಾಯಿತೆಂದು ಹರ್ಷಿಸಿದರು.

ಅಂದು ಶ್ರೀರಾಘವೇಂದ್ರ ಗುರುಗಳು ಶ್ರೀಮೂಲರಾಮದೇವರ ಪೂಜಾರಾಧನೆಯನ್ನು ವೈಭವದಿಂದ ನೆರವೇರಿಸಿ ಸರ್ವರಿಗೂ ತೀರ್ಥಪ್ರಸಾದ ಕರುಣಿಸಿದರು. ನಂತರ ಸಹಸ್ರಾರು ಜನರಿಗೆ ಮೃಷ್ಟಾನ್ನ ಭೋಜನ, ದಕ್ಷಿಣಾಪ್ರದಾನಗಳಾದವು. ರಾತ್ರಿ ಜರುಗಿದ ವಿದ್ವತ್ಸಭೆಯಲ್ಲಿ ಅನೇಕ ಪಂಡಿತರು ಶ್ರೀ ನೂತನ ಗುರುಗಳ ಪಾಂಡಿತ್ಯ ಪ್ರತಿಭೆ, ಸದ್ಗುಣಗಳನ್ನು ವರ್ಣಿಸಿ ಸ್ತುತಿಸಿ ಭಾಷಣ ಮಾಡಿದರು. ತರುವಾಯ ನೂತನ ಜಗದ್ಗುರುಗಳು ವಿದ್ವತ್ಪೂರ್ಣವಾಗಿ ಉಪದೇಶ ಮಾಡಿದರು. ತರುವಾಯ ಎಲ್ಲರಿಗೂ ಫಲಮಂತ್ರಾಕ್ಷತಾ ಪ್ರದಾನವಾದ ಮೇಲೆ ಸಮಾರಂಭವು ಯಶಸ್ವಿಯಾಗಿ ಮುಕ್ತಾಯವಾಯಿತು. ರಾಜನ ಪ್ರಾರ್ಥನೆಯಂತೆ ನಾಲ್ಕಾರು ದಿನ ತಂಜಾವೂರಿನಲ್ಲಿದ್ದು ನಂತರ ಶ್ರೀ ಸುಧೀಂದ್ರರು ಪ್ರಿಯಶಿಷ್ಯರೊಡನೆ ಕುಂಭಕೋಣಕ್ಕೆ ದಯಮಾಡಿಸಿದರು.

15. ಸರಸ್ವತಿಗೆ ಸದ್ಗತಿನೀಡಿದರು

ಪತಿಯಲ್ಲಿಯೇ ಪಂಚಪ್ರಾಣಗಳನ್ನಿಟ್ಟು ಒಂದು ಕ್ಷಣವೂ ಬಿಟ್ಟಿರಲಾಗದ, ಪತಿಪಾಯಣೆಯಾದ ಸರಸ್ವತಮ್ಮನವರು ವೆಂಕಟನಾಥಾಚಾರ್ಯರು ಸನ್ಯಾಸಿಗಳಾದ್ದರಿಂದ, ಅವರ ವಿಯೋಗ ದುಃಖವನ್ನು ಭರಿಸಲಾಗದೆ ಮನೆಯ

ಹಿಂಭಾಗದಲ್ಲಿದ್ದ ಭಾವಿಯಲ್ಲಿ ಬಿದ್ದು ಆತ್ಮಹತ್ಯೆಮಾಡಿಕೊಂಡರು. ಆದರಿಂದಾಗಿ ಅವರಿಗೆ ಪ್ರೇತಜನ್ಮ ಪ್ರಾಪ್ತವಾಯಿತು. ತಂಜಾಪುರದಿಂದ ಹಿಂದಿರುಗಿದ ಮೇಲೆ ಗುರು ಶಿಷ್ಯರಿಗೆ ಈ ವಿಚಾರ ತಿಳಿದು, ಆ ಸಾಧ್ವಿಯ ದುರ್ಮರಣಕ್ಕಾಗಿ ವಿಷಾದಿಸಿದರು. ಒಂದು ದಿನ ಶ್ರೀ ರಾಘವೇಂದ್ರಸ್ವಾಮಿಗಳು ಕಾವೇರಿ ತೀರದ "ಪುರಾಣ ಮಂಟಪ"ದಲ್ಲಿ ಅನ್ಹೀಕಮಾಡುತ್ತಾ ಭಾಗವತ ಶ್ರವಣಮಾಡುತ್ತಿದ್ದರು. ಆಗ ಪ್ರೇತ ಶರೀರಪಡೆದ ಸರಸ್ವತಮ್ಮನವರು ಅವರಿಗೆ ದೃಷ್ಟಿ ಗೋಚರರಾಗಿ ತಮಗೊದಗಿದ ದುಸ್ಥಿತಿಯನ್ನೂ ನಿವೇದಿಸಿ ಕಣ್ಣೀರಿಟ್ಟರು. ಕರುಣಾಳುಗಳಾದ ಶ್ರೀಗಳವರು ತಮ್ಮ ಪೂರ್ವಾಶ್ರಮ ಪತ್ನಿಗೊದಗಿದ ದುಸ್ಥಿತಿಗಾಗಿ ಮರುಗಿ ಕಮಂಡಲೋದಕ ಪ್ರೋಕ್ಷಣದಿಂದ ಪ್ರೇತಶರೀರವನ್ನು ಕಳೆದು ಸದ್ಗತಿ ನೀಡಿದರು. ಮತ್ತು ಸರಸ್ವತಮ್ಮನ ಸಂತೋಷಕ್ಕಾಗಿ ಇನ್ನು ಮುಂದೆ ತಮ್ಮ ಪೂರ್ವಾಸ್ರಮ ವಂಶೀಕರು, ಶುಭ-ಶೋಭನಾದಿ ಸಮಾರಂಭ ಕಾಲದಲ್ಲಿ ಹೂವೀಳ್ಯ ನೆರವೇರಿಸಬೇಕೆಂದಾಜ್ಞಾಪಿಸಿದರು. ಇಂದಿಗೂ ಶ್ರೀರಾಘವೇಂದ್ರರ ವಂಶದವರು ಹೂವಿಳ್ಯವನ್ನಾಚರಿಸುತ್ತಾಬಂದಿದ್ದಾರೆ. ರಾಘವೇಂದ್ರರು ಸರಸ್ವತಮ್ಮನ ಪ್ರೇತಶರೀರ ಕಳೆದು ಸದ್ಗತಿಯಿತ್ತುದನ್ನು ಕಣ್ಣಾರೆಕಂಡ ಜನರು ಗುರುಗಳು ಮಹಾತ್ಮರೆಂದು ಕೊಂಡಾಡಿದರು. ಹಿಂದೆ ಸ್ವಾಮಿಗಳು ಪೂರ್ವಾಶ್ರಮದಲ್ಲಿ ತಮ್ಮ ಮಂತ್ರಶಕ್ತಿಯ ಮಹಿಮೆಯನ್ನು ತೋರಿದ್ದರು. ಅದು ಶ್ರೀಗಳವರ ಮಹಿಮಾ ಪ್ರದರ್ಶನದ ಬೀಜಾಂಕುರವಾಗಿತ್ತು. ಈಗ ಸರಸ್ವತಮ್ಮನಿಗೆ ಸದ್ಗತಿ ಕರುಣಿಸಿದ್ದು ಗುರುಗಳ ಮಹಿಮೆಯ ಎರಡನೆಯ ಘಟ್ಟವೆಂದು ಹೇಳಬಹುದು. ಅಂದಿನಿಂದ ಗುರುರಾಜರ ಮಹಿಮೆ ಪದೇಪದೇ ವ್ಯಕ್ತವಾಗತೊಡಗಿತು.

★ ★ ★ ★ ★ ★

ಶ್ರೀ ರಾಘವೇಂದ್ರಸ್ವಾಮಿಗಳವರು ತಮ್ಮ ಪೂಜ್ಯಗುರುಗಳಾದ ಶ್ರೀ ಸುಧೀಂದ್ರತೀರ್ಥರನ್ನು ಭಕ್ತಿಯಿಂದ ಎಡಬಿಡದೆ ಸೇವಿಸುತ್ತಾ ಗುರುಪಾದರ ವಿಶೇಷಾನುಗ್ರಹಕ್ಕೆ ಪಾತ್ರರಾದರು. ಶ್ರೀಸುಧೀಂದ್ರರು ಶಿಷ್ಯರೊಡನೆ ಸಂಚಾರ ಹೊರಟು ಹಂಪಿಗೆ ಬಂದಾಗ ಅಲ್ಲಿ ನಿರ್ಯಾಣ ಹೊಂದಿದರು. ಶ್ರೀರಾಘವೇಂದ್ರರು ಇಂದು ನವವೃಂದಾವನಗಡ್ಡೆಯೆಂದು ಹೆಸರುಪಡೆದಿರುವ ಶ್ರೀ ಪದ್ಮನಾಭಾದಿಯತಿಗಳ ಬೃಂದಾವನವಿರುವಲ್ಲಿ ತಮ್ಮ ಗುರುಗಳ

ಬೃಂದಾವನ ಪ್ರತಿಷ್ಠೆ ಮಾಡಿಸಿ ಮಹಾಸಮಾರಾಧನೆಯನ್ನು ಭಕ್ತಿಯಿಂದಾಚರಿಸಿದರು. ಅದುವರೆಗೆ ಚಿಕ್ಕಪಟ್ಟದ ಅಧಿಪತಿಗಳಾಗಿದ್ದ ಶ್ರೀರಾಘವೇಂದ್ರಸ್ವಾಮಿಗಳು ಶಾಲೀವಾಹನಶಕೆ 1515ನೇ ರುಧಿರೋದ್ಗಾರಿ ಸಂವತ್ಸರದ ಫಾಲ್ಗುಣ ಬಹುಳ ಬಿದಿಗೆ (ಕ್ರಿ.ಶ. 1623) ಶ್ರೀ ಮಹಾಸಂಸ್ಥಾನಾಧಿಪತಿಗಳಾದರು. ಗುರುಗಳು ಸಂಚಾರ ಕ್ರಮದಿಂದ ಕುಂಭಕೋಣಕ್ಕೆ ಬಂದು ಅಲ್ಲಿ ವಿದ್ಯಾಮಠದಲ್ಲಿ ಪಾಠಪ್ರವಚನ, ಮೂಲರಾಮ ದೇವರಪೂಜಾ, ಧರ್ಮೋಪದೇಶ ಮಾಡುತ್ತಾ ಸುಜನವೃಂದವನ್ನು ಪೊರೆಯುತ್ತಾ ಸಕಲಜನರ ಗೌರವಾದರಗಳಿಗೆ ಪಾತ್ರರಾಗಿ ಕೀರ್ತಿಗಳಿಸಿದರು.

16. ಸ್ವಾಮಿಗಳವರ ದಿನಚರಿ

ಶ್ರೀ ರಾಘವೇಂದ್ರಗುರುಗಳ ಆಕಾರ, ಜ್ಞಾನ, ಮಾಡುವಕಾರ್ಯ, ಎಲ್ಲವೂ ಪವಿತ್ರವಾದುದು. ಅವರ ದೇಹಲಕ್ಷಣವು ದೇವಾಂಶಸಂಭೂತರೆಂದು ಸೂಚಿಸುತ್ತಿತ್ತು. ಭಂಗಾರವರ್ಣದ ಮೈಕಾಂತಿ, ನಿರ್ದುಷ್ಟವೂ, ಪರಮ ಶಾಂತವೂ ಆದ ಮುಖದಕಾಂತಿ, ಭಗವಂತನನ್ನು ಸಾಕ್ಷಾತ್ಕರಿಸಿಕೊಂಡಿದ್ದರಿಂದ ಅವರ ಮುಖದಲ್ಲಿ ಒಂದು ಬಗೆಯ ಅಲೌಕಿಕ ತೇಜಸ್ಸು ಹೊರಸೂಸತ್ತಿತ್ತು. ವಿಶಾಲವಾದ ನೇತ್ರಗಳು ಹೊಳೆಯುತ್ತಿದ್ದವು. ಕರ್ಣದಲ್ಲಿ ತುಳಸೀ ಗುಚ್ಛಗಳು ರಮ್ಯವಾಗಿದ್ದವು. ನೀಟಾದ ನಾಸಿಕದಿಂದಾರಂಭಿಸಿ ಫಾಲದೇಶದ ಮೇಲ್ಭಾಗದವರೆಗೆ ಊರ್ಧ್ವಪುಂಡ್ರ, ಗಂಧಾಕ್ಷತೆಗಳು ಶೋಭಿಸುತ್ತಿದ್ದವು. ತುಳಸೀಮಾಲೆ, ಕಾಷಾಯಾಂಬರ, ದಂಡ-ಕಮಂಡಲುಗಳನ್ನು ಧರಿಸಿ ಪಾದುಕೆಗಳನ್ನು ಮೆಟ್ಟಿ ಬರುವ ಗುರುಗಳ ಮುಖಾರವಿಂದ ವಾಗ್ದೇವಿಯ ನಾಟ್ಯ ಮಂದಿರದಂತೆ ರಾಜಿಸುತ್ತಿತ್ತು. ಶ್ರೀಯವರ ಪಾದಗಳು ತೀರ್ಥ-ಕ್ಷೇತ್ರಯಾತ್ರೆ ಗಳಿಂದ ಪಾವನವಾಗಿದ್ದವು. ಅವರದರ್ಶನವೇ ಜನರಲ್ಲಿ ಭಕ್ತಿಯನ್ನು ಹುಟ್ಟಿಸುತ್ತಿತ್ತು. ಗುರುಗಳ ಸೇವನದಿಂದ ತಮ್ಮ ಉದ್ಧಾರ-ಕಲ್ಯಾಣಗಳಾಗುವುವೆಂದು ನಂಬಿ ಸುಜನರು ಅವರನ್ನು ಸೇವಿಸುತ್ತಿದ್ದರು. ದೇವಸ್ವಭಾವರಾದ ಸ್ವಾಮಿಗಳ ದೈನಂದಿನ ಕಾರ್ಯಕ್ರಮಗಳೆಲ್ಲವೂ ಭಗವಂತನ ಸೇವಾರೂಪವಾಗಿದ್ದವು.

ಉಷಃ ಕಾಲದಲ್ಲಿ ತಾಳ-ಮೇಳ-ವಾದ್ಯಸಹಿತರಾಗಿ, ವಿವಿಧರಾಗಗಳಲ್ಲಿ

ತಾಳಸುತ್ತಿ ಪಾಠಕರು ಪರಮಾತ್ಮನ ಮಹಿಮಾವರ್ಣನಪರ ಗಾಯನದಿಂದ ಗುರುಗಳಿಗೆ ಸುಪ್ರಭಾತವನ್ನು ಹೇಳಿ ಎಚ್ಚರಗೊಳಿಸುತ್ತಿದ್ದರು. ಗುರುರಾಜರು ಹರಿಸ್ಮರಣಪೂರ್ವಕ ಎದ್ದು ಶ್ರೀಮೂಲರಘುಪತಿವೇದವ್ಯಾಸದೇವರಿಗೆ ನಮಸ್ಕರಿಸಿ, ತುಳಸೀ ಬೃಂದಾವನದ ಬಳಿಸಾರಿ ಅಲ್ಲಿ ಸನ್ನಿಹಿತಳಾದ ಶ್ರೀಲಕ್ಷ್ಮೀದೇವಿಗೆ ವಂದಿಸಿ ಬೃಂದಾವನ ಮಧ್ಯದಲ್ಲಿ ಪ್ರತಿಷ್ಠಿತರಾದ ಶ್ರೀಪ್ರಾಣದೇವರಿಗೆ ನಮಿಸಿ, ದಿವ್ಯ ಮೇನೆಯಲ್ಲಿ ಕುಳಿತು, ಗಜೇಂದ್ರಮೋಕ್ಷಾದಿ ಸ್ತುತಿಗಳನ್ನು ಪಠಿಸುತ್ತಾ ಕಾವೇರಿ ನದಿಗೆ ದಯಮಾಡಿಸಿ, ಸಂಕಲ್ಪ ಪೂರ್ವಕವಾಗಿ ಅವಗಾಹನ ಸ್ನಾನ ಮಾಡಿ, ಆ ಕಾಲದಲ್ಲಿ ಪಠಿಸಲು ಯೋಗ್ಯವಾದ ಸೂಕ್ತಗಳನ್ನು ಪಠಿಸುತ್ತಾ, ಮೃತ್ತಿಕಾಸ್ನಾನ, ಅಘಮರ್ಷಣ ಸ್ನಾನ, ಪ್ರೋಕ್ಷಣಾದಿಗಳನ್ನೂ, ದೇವತಾ ತರ್ಪಣಾಧಿಗಳನ್ನೂ, ಪೂರೈಸಿ, ಶ್ರೀವಿಷ್ಣುಪಾದೋದಕವನ್ನು ಸ್ವೀಕರಿಸಿ, ಕೌಪೀನ-ಶಾಟಿಗಳನ್ನೂ ದ್ವಾದಶನಾಮ ಮುದ್ರೆಗಳನ್ನು ಧರಿಸಿ, ಜಪತಪಾದಿಗಳಾದ ಮೇಲೆ ಶ್ರೀವೇದವ್ಯಾಸದೇವರಿಗೆ (ವ್ಯಾಸಮುಷ್ಟಿಕೆಗಳಿಗೆ) ಅಭಿಷೇಕ, ಅರ್ಚನೆ, ನೈವೇದ್ಯಗಳನ್ನು ನೆರವೇರಿಸಿ, ಮಂಗಳಾರತಿಮಾಡಿ, ರತ್ನಖಚಿತ ಪಾದುಕೆಗಳನ್ನು ಮೆಟ್ಟಿ, ದಂಡ-ಕಮಂಡಲುಗಳನ್ನು ಹಿಡಿದು, ವಿವಿಧವಾದ್ಯ, ಬಿರುದಾವಳೀ ಘೋಷವಾಗುತ್ತಿರಲು, ನದೀತೀರದಿಂದ ಹೊರಟು ಶ್ರೀವಿಜಯೀಂದ್ರಗುರುಗಳ ಆಲಯಕ್ಕೆ ಬಂದು ಬೃಂದಾವನ ದರ್ಶನ ನಮಸ್ಕಾರಗಳನ್ನು ಮಾಡಿ, ಆನಂತರ ಕಾಲುನಡಿಗೆಯಲ್ಲಿ ಹೊರಟು ಮಾರ್ಗಮಧ್ಯದಲ್ಲಿ ಶ್ರೀ ಕುಂಭೇಶ್ವರನಿಗೆ ಅಭಿನಮಿಸಿ, ವಿದ್ಯಾಮಠಕ್ಕೆ ಬಂದು ಆಸನಾಸೀನರಾಗಿ, ನೂರಾರುಜನ ಶಿಷ್ಯರಿಗೆ ಶಾಂತಿ ಪಾಠಪುರಸ್ಸರವಾಗಿ ಮಂಗಳಕರ ಸೂತ್ರಭಾಷ್ಯಾದಿಗಳನ್ನು ಪಾಠಹೇಳುತ್ತಿದ್ದರು.

ಪಾಠಕಾಲದಲ್ಲಿ ಮಧ್ಯೇ ಮಧ್ಯೇ ಅನೇಕ ಪಂಡಿತರು ಸಂದೇಹಗಳನ್ನು ಮುಂದೊಡ್ಡಿದಾಗ ಸಪ್ರಮಾಣವಾಗಿ ಅವರವರ ಸಂದೇಹ ಪರಿಹಾರಮಾಡಿ, ಶ್ರೀವಿಷ್ಣುವಿನ ಸರ್ವೋತ್ತಮತ್ವವನ್ನು ಸ್ಥಾಪಿಸುತ್ತಿದ್ದರು. ಪಾಠಮುಗಿದ ಮೇಲೆ ಪುನಃ ಸ್ನಾನಾಹ್ನಿಕ ಜಪತಪಾದಿಗಳನ್ನು ಮುಗಿಸಿ ಭಕ್ತಿಶ್ರದ್ಧೆಗಳಿಂದ ಶ್ರೀಮೂಲರಾಮದೇವರ ಪೂಜಾರಾಧನೆಮಾಡಿ, ಪ್ರದಕ್ಷಿಣೆ ನಮಸ್ಕಾರಗಳನ್ನೆಸಗಿ, ದಂಡೋದಕಪ್ರದಾನಮಾಡಿ, ತೀರ್ಥಸ್ವೀಕರಿಸಿ, ಸರ್ವರಿಗೂ ತೀರ್ಥ ಪ್ರಸಾದ ಗಳನ್ನು ಕರುಣಿಸಿ, ಆನಂತರ ಶ್ರೀಹರಿತತ್ವ ವಿಚಾರಮಾಡುತ್ತಾ ಪಂಡಿತರು,

ಧಾರ್ಮಿಕರೊಡನೆ ಕುಳಿತು ಭಿಕ್ಷಾಸ್ವೀಕಾರ ಮಾಡುತ್ತಿದ್ದರು. ತರುವಾಯ ಸಭಾಂಗಣಕ್ಕೆ ಬಂದು ಅಲ್ಲಿ ಅನೇಕ ವಿದ್ಯಾರ್ಥಿಗಳಿಗೆ ನ್ಯಾಯ ಮೀಮಾಂಸಾ ವ್ಯಾಕರಣಾದಿ ಶಾಸ್ತ್ರಗಳನ್ನು ಪಾಠಹೇಳುವರು. ಅನಂತರ ಶ್ರೀಯವರ ದರ್ಶನಕ್ಕಾಗಿ ದೇಶ-ದೇಶಗಳಿಂದ ಬಂದಿರುವ ಶಿಷ್ಯರು ಭಕ್ತರು, ಧಾರ್ಮಿಕರುಗಳೊಡನೆ ಕುಶಲ ಸಂಭಾಷಣೆಮಾಡಿ, ಅವರವರ ಸಮಸ್ಯೆಗಳಿಗೆ ಪರಿಹಾರಹೇಳಿ, ಹರಿತತ್ವೋಪದೇಶ ಮಾಡುವರು. ತರುವಾಯ ಪುಷ್ಕರಣಿಯಲ್ಲಿ ಸ್ನಾನಮಾಡಿ ಕಾಷಾಯವಸನಗಳನ್ನುಧರಿಸಿ, ಗಂಧಾಕ್ಷತೆಗಳಿಂದ ಭೂಷಿತರಾಗಿ, ಆನ್ಹೀಕವನ್ನು ನೆರವೇರಿಸಿ, ದೇವರಿಗೆ ಸಾಯಂದೀಪಾರಾಧನೆ ಮಾಡುವರು. ನಂತರ ಧ್ಯಾನಸ್ಥರಾಗಿ ಶ್ರೀಹರಿಯದಶಾವತಾರಗಳನ್ನು ಸ್ತುತಿಸಿ ನಮಸ್ಕರಿಸಿ ಪೀಠದಿಂದೆದ್ದು ಸಭೆಗೆಬಂದು ಮಣಿಮಯ ವಿದ್ಯಾಸಿಂಹಾಸನದಲ್ಲಿ ಮಂಡಿಸಿ ಸಕಲ ಸಜ್ಜನರಿಗೆ ವೇದೋಪನಿಷತ್ತತ್ವ ಧರ್ಮಗಳನ್ನು ಉಪದೇಶಿಸುವರು. ತರುವಾಯ ಕವಿಗಳು ಸಾಹಿತಿಗಳು ಗುರುವರರ ಪಾಂಡಿತ್ಯ ತಪಸ್ಸು ಮಹಿಮಾದಿಗಳನ್ನು ಕಾವ್ಯಶೈಲಿಯಲ್ಲಿ. ಆಶುಕವಿತೆಗಳಿಂದ ವರ್ಣಿಸಿ ಸ್ತುತಿಸುವರು. ಆನಂತರ ಮಾಲಕಿ ಮಂಗಳಾರತಿಯಾದಮೇಲೆ ಗುರುಪುಂಗವರು ಸಮಸ್ತ ಜನರಿಗೂ ಫಲಮಂತ್ರಾಕ್ಷತೆ ಕರುಣಿಸಿ ಆಶೀರ್ವದಿಸುವರು. ಆ ತರುವಾಯ ವಿಶ್ರಾಂತಿ ಪಡೆಯುವರು. ಹೀಗೆ ರಾಘವೇಂದ್ರ ಮುನಿಪುಂಗವರು ಬೆಳಗಿನಿಂದ ರಾತ್ರಿಯವರೆಗೆ ಸತ್ಕಾರ್ಯಾಸಕ್ತರಾಗಿ ಯತಿಧರ್ಮವನ್ನು ಸತ್ಕ್ರಮರವಾಗಿ ನೆರವೇರಿಸುತ್ತಾ ಜನತೆಯ ಭಕ್ತಿ ಶ್ರದ್ಧೆಗಳಿಗೆ ಪಾತ್ರರಾಗಿ ಕಂಗೊಳಿಸುತ್ತಿದ್ದರು.

17. ತೀರ್ಥಕ್ಷೇತ್ರಯಾತ್ರೆ

ಶ್ರೀ ರಾಘವೇಂದ್ರಯತೀಂದ್ರರು ಪುಣ್ಯತೀರ್ಥ-ಕ್ಷೇತ್ರದರ್ಶನ-ಸೇವನ, ಶಿಷ್ಯ-ಭಕ್ತಜನೋದ್ಧಾರ, ವಾದಿ ದಿಗ್ವಿಜಯ-ಲೋಕಕಲ್ಯಾಣಾರ್ಥವಾಗಿ ಸಂಚಾರಹೊರಟು, ಮೊದಲು ಪೂರ್ವದಿಕ್ಕಿನಕಡೆ ಬಿಜಯಂಗೈದು ಪರಿಪೂರ್ಣನಗರದಲ್ಲಿ ಭಗವಂತನಿಗೆ ವಂದಿಸಿ, ಕಮಲಾಲಯ ಎಂಬಲ್ಲಿಗೆ ತೆರಳಿ ಅಲ್ಲಿ ಶ್ರೀ ಮಹಾಲಕ್ಷ್ಮಿಯನ್ನು ಆರಾಧಿಸಿ, ಅಲ್ಲಿಂದ ಅರ್ಧನಾರೀಶ್ವರಕ್ಕೆ ಬಂದು ಮಹಾರುದ್ರದೇವರನ್ನು ಸೇವಿಸಿ-ವಂದಿಸಿ, ಮುಂದೆ ಕನ್ಯಾಕುಮಾರಿಗೆ ಬಂಧು ಸಮುದ್ರಸ್ನಾನಮಾಡಿ, ಅಲ್ಲಿಂದ ಪಂಚಕೇಶ್ವರ ಮಾರ್ಗವಾಗಿ ರಾಮೇಶ್ವರಕ್ಕೆ

ದಯಮಾಡಿದರು. ಅಲ್ಲಿ ಸೇತೂಸ್ನಾನ, ದರ್ಭಶಯನ ರಾಮ ಹಾಗೂ ಸೇತೂಮಾಧವ, ರಾಮೇಶ್ವರರ ದರ್ಶನ-ಸೇವನ-ನಮನಾದಿಗಳಿಂದ ಹರ್ಷಪುಲಕಿತರಾಗಿ, ಅಳಗಿರಿಗೆ ಬಂದು ಸುಂದರೇಶ್ವರರನನ್ನು ಆರಾಧಿಸಿ, ಅಲ್ಲಿಂದ ಅನಂತಶಯನಕ್ಕೆ ದಿಗ್ವಿಜಯಮಾಡಿ ಅಲ್ಲಿ ಕೆಲದಿನವಿದ್ದು ಶ್ರೀ ಅನಂತಪದ್ಮನಾಭನನ್ನು ಆರಾಧಿಸಿ-ನಮಸ್ಕರಿಸಿ, ಅಲ್ಲಿಂದ ಜನಾರ್ದನಕ್ಕಾಗಮಿಸಿ ಪರಮಾತ್ಮನ ದರ್ಶನ ಸೇವನಾದಿಗಳಿಂದ ಮುದಗೊಂಡು ತಾಮ್ರಪರ್ಣೀತೀರದ ತಿರುವಾನೆಲ್ಲೂರು ಪ್ರಾಂತ್ಯಕ್ಕೆ ದಯಮಾಡಿಸಿದರು. ಅಲ್ಲಿ ಶ್ರೀಮಹಾಸಂಸ್ಥಾನದ ಪೂರ್ವಾಚಾರ್ಯರಾದ ಶ್ರೀವಿಭುದೇಂದ್ರತೀರ್ಥರ ಬೃಂದಾವನ ಸನ್ನಿಧಿಯಲ್ಲಿ ಮೂಲರಾಮರ ಪೂಜಾಮಾಡಿ, ವಿಬುಧೇಂದ್ರತೀರ್ಥರ ಬೃಂದಾವನದ ಮೇಲೆ ಮೂಲರಾಮ-ದಿಗ್ವಿಜಯ ಜಯರಾಮರನ್ನಿಟ್ಟು ಕನಕಾಭಿಷೇಕಮಾಡಿ ಹಸ್ತೋದಕ ಸಮರ್ಪಿಸಿ "ವಾದಿದಿಗ್ವಿಜಯ-ಗ್ರಂಥರಚನೆ-ದ್ವೈತಸಿದ್ಧಾಂತಸ್ಥಾಪನೆ" ಗಳಿಗಾಗಿ ಪ್ರಾರ್ಥಿಸಿ ಮುಂದೆ ಸಂಚಾರಹೊರಟರು, ನದಿಯ ಸ್ವಲ್ಪ ದೂರದಲ್ಲಿ ಆ ಪ್ರಾಂತ್ಯದ ಬ್ರಾಹ್ಮಣ ಸಮಾಜದಿಂದ ಬಹಿಷ್ಕೃತನಾಗಿದ್ದ ಓರ್ವ ವಿಪ್ರನು ಗುರುಗಳಿಗೆ ಶರಣಾಗತನಾಗಿ ಉದ್ಧರಿಸಬೇಕೆಂದು ಪ್ರಾರ್ಥಿಸಿದನು. ಅತ್ಯಂತ ಕರಣಾಳುಗಳಾದ ಗುರುರಾಜರು ಆ ಬ್ರಾಹ್ಮಣನಿಗೆ ಪ್ರಾಯಶ್ಚಿತ್ತಮಾಡಿಸಿ ಶಂಖೋದಕ ಪ್ರೋಕ್ಷಣದಿಂದ ಅವನನ್ನು ಶುದ್ಧಗೊಳಿಸಿದರು. ಇದನ್ನು ಕಂಡು ಕೆಲಪಂಡಿತರು ಆಕ್ಷೇಪಿಸಿದರು. ಗುರುಗಳು ಅವರಿಗೆ ಶಂಖೋದಕದ ಮಹಿಮೆಯನ್ನು ಪ್ರತ್ಯಕ್ಷವಾಗಿ ತೋರಿಸಿದರು. ಅವರೆಲ್ಲರೂ ಗುರುಗಳು ಮಹಾಮಹಿಮರೆಂದು ಕೊಂಡಾಡಿದರು. ಅಲ್ಲಿಂದ ಶ್ರೀಪಾದಂಗಳವರು ಮಧುರಗೆ ದಿಗ್ವಿಜಯಮಾಡಿದರು.

18 ಮಧುರೆಯಲ್ಲಿ ದಿಗ್ವಿಜಯ

ಮಧುರೆಯಲ್ಲಿ ಈ ಕಥಾನಕವು ಜರುಗಿದಾಗ ತಿರುಮಲನಾಯಕನು (ಕ್ರಿ.ಶ. 1623-1639) ರಾಜ್ಯಭಾರ ಮಾಡುತ್ತಿದ್ದನು. ಶ್ರೀ ಅಪ್ಪಯ್ಯ ದೀಕ್ಷಿತರ ಪೌತ್ರರಾದ ಶ್ರೀನೀಲಕಂಠ ದೀಕ್ಷಿತರು ರಾಜ್ಯದ ಮಂತ್ರಿಗಳಾಗಿದ್ದರು. ಶ್ರೀ ರಾಘವೇಂದ್ರಸ್ವಾಮಿಗಳನ್ನು ರಾಜ ಸಮಸ್ತ ಬಿರುದಾವಳಿ ಪೂರ್ಣಕುಂಭದೊಡನೆ ಭಕ್ತಿಯಿಂದ ಸ್ವಾಗತಿಸಿದನು.

ರಾಜನ ದರ್ಬಾರಿನಲ್ಲಿ ಗುರುಗಳು ಅನೇಕ ಪಂಡಿತರನ್ನು ಜಯಿಸಿದರು. ಆಗ ನೀಲಕಂಠ ದೀಕ್ಷಿತರು ಶ್ರೀಯವರ ಮೀಮಾಂಸಾಶಾಸ್ತ್ರ ಕೌಶಲವನ್ನು ಪರೀಕ್ಷಿಸಲು ಮೀಮಾಂಸಾಶಾಸ್ತ್ರದಲ್ಲಿ ಅತಿ ಗಡುಚಾದ ಶಾಸ್ತ್ರಭಾಗದ ಮೇಲೆ ಪೂರ್ವಪಕ್ಷ ಮಾಡಿಸಿದರು. ಶ್ರೀಸ್ವಾಮಿಗಳು ಮಂದಹಾಸಬೀರಿ ಅವರ ಪೂರ್ವ ಪಕ್ಷಕ್ಕೆ ಸುಲಭವಾಗಿ ಉತ್ತರವಿತ್ತು ತಮ್ಮ ಪ್ರಕಾಂಡ ಪಾಂಡಿತ್ಯವನ್ನು ಪ್ರಕಟಿಸಿದರು. ಮತ್ತು ಮೀಮಾಂಸಾಶಾಸ್ತ್ರದ ಮೇಲೆ ತಾವು ರಚಿಸಿದ "ಭಾಟ್ಟಸಂಗ್ರಹ" ಗ್ರಂಥವನ್ನು ದೀಕ್ಷಿತರಿಗೆ ತೋರಿಸಿದರು. ನೀಲಕಂಠ ದೀಕ್ಷಿತರು "ಭಾಟ್ಟ ಸಂಗ್ರಹ"ವನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಮೀಮಾಂಸಾಶಾಸ್ತ್ರಕ್ಕೆ ಅಮೂಲ್ಯ ಕೊಡುಗೆಯೂ ಅತ್ಯಪೂರ್ವವೂ ಆದ ಗ್ರಂಥವೆಂದು ಅದರ ಮಹತ್ವವನ್ನು ಕೊಂಡಾಡಿ ಅದನ್ನು ರಚಿಸಿದ ಶ್ರೀಯವರನ್ನು ಮುಕ್ತಕಂಠದಿಂದ ಹೊಗಳಿದರು. ಮತ್ತು ತಿರಮಲ ನಾಯಕನ ಆದೇಶದಂತೆ ಆ ಅಪೂರ್ವ ಗ್ರಂಥವನ್ನು ಆನೆಯಮೇಲೆ ಅಂಬಾರಿಯಲ್ಲಿಟ್ಟು ಶ್ರೀಯವರನ್ನು ಮಂಡಿಸಿ ಸಕಲಬಿರುದಾವಳಿಯೊಡನೆ ರಾಜಧಾನಿಯಲ್ಲಿ ಮೆರಸಿ ಅಸಾಧಾರಣ ರೀತಿಯಿಂದ ಶ್ರೀರಾಘವೇಂದ್ರಸ್ವಾಮಿಗಳನ್ನು ಗೌರವಿಸಿದರು. ಇದು ದ್ವೈತಸಿದ್ಧಾಂತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದ ವಿಚಾರವಾಗಿದೆ. ಹಿಂದೆ ಶ್ರೀಜಯತೀರ್ಥರ ಗ್ರಂಥವನ್ನು ಶ್ರೀವಿದ್ಯಾರಣ್ಯರು ಆನೆಯಮೇಲೆ ರಾಜಧಾನಿಯಲ್ಲಿ ಮೆರೆಸಿದ್ದರು. ಈಗ ತಿರಮಲನಾಯಕ, ನೀಲಕಂಠ ದೀಕ್ಷಿತರು ಶ್ರೀಸ್ವಾಮಿಗಳ ಭಾಟ್ಟಸಂಗ್ರಹವನ್ನು ಮೆರೆಸಿದರು. ಇವೆರಡೂ ಪ್ರಸಂಗಗಳು ದ್ವೈತಸಿದ್ಧಾಂತದ ಕೀರ್ತಿದ್ಯೋತಕ ಐತಿಹಾಸಿಕ ಘಟನೆಯಾಗಿದೆ. ಮಹಾರಾಜ ಗುರುಗಳಿಗೆ ಗ್ರಾಮಭೂಮಿ ಸುವರ್ಣಾಭರಣಗಳನ್ನು ಸಮರ್ಪಿಸಿ ಗೌರವಿಸಿದನು. ಇದರಿಂದ ಗುರುಗಳ ಕೀರ್ತಿ ಜಗದ್ವಿಖ್ಯಾತವಾಯಿತು. ಶ್ರೀಗಳವರು ಮಧುರೆಯಲ್ಲಿ ಶ್ರೀಕಾಮಾಕ್ಷಿಯ ದರ್ಶನಮಾಡಿ ಸೇವೆಸಲ್ಲಿಸಿ ಶ್ರೀರಂಗಕ್ಕೆ ದಯಮಾಡಿಸಿದರು. ಶ್ರೀರಂಗದಲ್ಲಿ ಕೆಲಕಾಲ ವಾಸಮಾಡಿ ರಂಗನಾಥನನ್ನು ಸೇವಿಸಿ ಅಲ್ಲಿಂದ ಉತ್ತರದ ಕಡೆಗೆ ಸಂಚಾರ ಹೊರಟರು.

19. ವೆಲ್ಲೂರಿನಲ್ಲಿ ವಾದಿದಿಗ್ವಿಜಯ-ರಾಜಗೌರವ

ಶ್ರೀರಾಘವೇಂದ್ರಸ್ವಾಮಿಗಳು ಮೊದಲು ನಾಮಕಲ್ಲಿಗೆ ಹೋಗಿ ಶ್ರೀ ನೃಸಿಂಹದೇವರನ್ನು ಪೂಜಿಸಿ ಅಲ್ಲಿಂದ ವೆಲ್ಲೂರಿಗೆ ದಯಮಾಡಿಸಿದರು. ಅಲ್ಲಿ

ವಿಜಯನಗರದ ಅರಸನಾದ ನಾಲ್ಕನೆಯ ರಾಮದೇವರಾಯನು ರಾಜ್ಯವಾಳುತ್ತಿದ್ದನು. ರಾಜಗುರುಗಳನ್ನು ವೈಭವದಿಂದ ಸ್ವಾಗತಿಸಿ ಸತ್ಕರಿಸಿದ. ರಾಜದರ್ಬಾರಿನಲ್ಲಿ ಪ್ರಬಲಪಂಡಿತರೂ ವಾದಮಲ್ಲರೂ ಆದ ವೀರಭದ್ರ ಮತ್ತು ಭೈರವಭಟ್ಟರು ಸ್ವಾಮಿಗಳೊಡನೆ ವಾದಕ್ಕಿಳಿದರು. ನಾಲ್ಕಾರುದಿನ ಅವ್ಯಾಹತವಾಗಿ ವಾಕ್ಯಾರ್ಥಜರುಗಿತು. ಕೊನೆಗೆ ಶ್ರೀಗಳವರ ಪಾಂಡಿತ್ಯ, ಪ್ರತಿಭೆ, ವಾದಕೌಶಲಗಳ ಮುಂದೆ ನಿಂತು ವಾದಿಸಲಾಗದೆ ವೀರಭದ್ರ-ಭೈರವಭಟ್ಟರು "ಜಿತರಾದೆವು" ಎಂದು ಸೋಲೊಪ್ಪಿ ನಮಿಸಿದರು. ಗುರುಗಳ ಈ ವಾದ ವಿಜಯದಿಂದ ಪ್ರಭಾವಿತನಾದ ರಾಜ ರಾಮದೇವನು ಬಹುಭಕ್ತಿಯಿಂದ ಗುರುರಾಜನನ್ನು ಭದ್ರಾಸನದಲ್ಲಿ ಕೂಡಿಸಿ "ಕನಕಾಭಿಷೇಕ" ಮಾಡಿ, ಗ್ರಾಮಭೂಮಿ ರತ್ನಾಭರಣ ಸುವರ್ಣ ವಸ್ತ್ರಾದಿಗಳನ್ನು ಗುರಗಳಿಗರ್ಪಿಸಿ ಕೃತಾರ್ಥನಾದನು. ಈ ದಿಗ್ವಿಜಯ ಗುರುರಾಜರ ವಿಜಯ ಪರಂಪರೆಯಲ್ಲಿ ಅತಿಮಹತ್ವ ಪೂರ್ಣವಾದುದು. ಇಲ್ಲಿಗೆ ಶ್ರೀರಾಯರ ದಕ್ಷಿಣದೇಶದ ಸಂಚಾರ ಮುಗಿದು ಮುಂದೆ ಗುರುಗಳು ದಕ್ಷಿಣ ಕನ್ನಡ ಜಿಲ್ಲೆಯ ಕಡೆಗೆ ಸಂಚಾರ ಹೊರಟರು. ಸ್ವಾಮಿಗಳು ವಿಷ್ಣುಮಂಗಲಕ್ಕೆ ಬಂದು ಅಲ್ಲಿ ಪರಮಾತ್ಮನನ್ನು ಸೇವಿಸಿ, ಅಲ್ಲಿಂದ ಸುಬ್ರಹ್ಮಣ್ಯಕ್ಕೆ ಆಗಮಿಸಿ ದೇವರನ್ನು ಪೂಜಿಸಿ ಅಲ್ಲಿ ಕೆಲಕಾಲ ವಾಸಮಾಡಿದರು.

20. ಉಡುಪಿಯಲ್ಲಿ ಗ್ರಂಥರಚನೆ-ಭಗವತ್ಸಾಕ್ಷಾತ್ಕಾರ!

ಸುಬ್ರಹ್ಮಣ್ಯದಿಂದ ಸ್ವಾಮಿಗಳು ಉಡುಪಿಗೆ ದಯಮಾಡಿಸಿದರು. ಅಲ್ಲಿ ಶ್ರೀಪರ್ಯಾಯ ಪೀಠಾಧೀಶರು ಮತ್ತು ಇತರ ಮಠಾಧೀಶರು ಶ್ರೀಸರ್ವಜ್ಞ ಪೀಠಾಧಿಪತಿಗಳೂ ಜ್ಞಾನಿನಾಯಕರೂ ಆದ ಗುರುರಾಜರನ್ನು ವೈಭವಾದರಗಳಿಂದ ಸ್ವಾಗತಿಸಿ ಶ್ರೀಕೃಷ್ಣದರ್ಶನ ಮಾಡಿಸಿದರು. ಶ್ರೀಕೃಷ್ಣನ ದರ್ಶನದಿಂದ ಸ್ವಾಮಿಗಳು ಹರ್ಷ ಪುಳಕಿತರಾದರು. ಶ್ರೀದೇವರಿಗೆ ಅನೇಕ ವಿಧ ಸೇವೆ ಮಾಡಿಸಿ, ತಮ್ಮ ಮಠದಲ್ಲಿ ಬಿಡಾರ ಮಾಡಿದರು. ಶ್ರೀರಾಘವೇಂದ್ರಗುರುಗಳು ಶ್ರೀಕೃಷ್ಣಸನ್ನಿಧಿಯಲ್ಲಿ ಬ್ರಹ್ಮಸೂತ್ರಗಳಮೇಲೆ ಸ್ವತಂತ್ರವಾಗಿ "ತಂತ್ರ ದೀಪಿಕಾ" "ನ್ಯಾಯ ಮುಕ್ತಾವಳಿ" ಎಂಬೆರಡು ಗ್ರಂಥರತ್ನಗಳನ್ನು ರಚಿಸಿದರು. ಮತ್ತು "ಚಂದ್ರಿಕೆ'ಗೆ"ಪ್ರಕಾಶ" ಎಂಬ ಅಸಾಧಾರಣ ಟಿಪ್ಪಣಿಯನ್ನು ರಚಿಸಿದರು. ಇದರಂತೆ ದ್ವೈತಸಿದ್ಧಾಂತ

ವಾಙ್ಮಯದಲ್ಲಿ ಮೇರು ಕೃತಿಯೆನಿಸಿದ, ಶ್ರೀಮಧ್ವಾಚಾರ್ಯರ ಅನುವ್ಯಾಖ್ಯಾನಕ್ಕೆ ಟೀಕೆಯಾದ ಶ್ರೀಜಯತೀರ್ಥ ಪೂಜ್ಯಚರಣರ "ಶ್ರೀಮನ್ನ್ಯಾಯಸುಧಾ"ಕ್ಕೆ ಅದ್ವಿತೀಯವಾದ "ಪರಿಮಳ" ಎಂಬ ಟಿಪ್ಪಣಿಯನ್ನು ರಚಿಸಿ ಶ್ರೀಕೃಷ್ಣನಿಗೆ ಸಮರ್ಪಿಸಿದರು.

ರಾಘವೇಂದ್ರರ ಕುಲದೇವ ತಿರುಪತಿಯ ಶ್ರೀನಿವಾಸ, ಸಂಸ್ಥಾನದ ಪ್ರಧಾನ ದೇವ ಶ್ರೀಮೂಲರಾಮ. ಆದರೂ ಅವರಿಗೆ ಶ್ರೀ ಕೃಷ್ಣನಲ್ಲಿ ಅದೊಂದು ಬಗೆಯ ಹುಚ್ಚು. ಪ್ರಹ್ಲಾದರಾಜರಾಗಿದ್ದಾಗಿನಿಂದ ಎಲ್ಲ ಅವತಾರಗಳಲ್ಲಿಯೂಅವರು "ಕೃಷ್ಣಗ್ರಹಗೃಹೀತಾತ್ಮ"ರಲ್ಲವೇ! ಅಂತೆಯೇ ಅವರಿಗೆ ಶ್ರೀಕೃಷ್ಣನಲ್ಲಿ ಅಸಾಧಾರಣ ಭಕ್ತಿ! ಶ್ರೀಗಳವರು ಒಂದುದಿನ ಮಧ್ಯಾಹ್ನ ಗುಡಿಯಲ್ಲಿ ಕೃಷ್ಣಧ್ಯಾನಾಸಕ್ತರಾಗಿ ಕುಳಿತಿದ್ದಾರೆ. ಇದ್ದಕ್ಕಿದಂತೆ ಗರ್ಭಗುಡಿಯಲ್ಲಿ ಒಂದು ಅಪೂರ್ವಕಾಂತಿ ಗೆಜ್ಜೆಯ ಮಂಜುಳನಿನಾದ ಕೇಳಿಬಂದಿತು.! ಸ್ವಾಮಿಗಳು ಪರಮಾತ್ಮನು ತಮಗಿಂದು ದರ್ಶನವೀಯುನೆಂದು ನಂಬಿ, ಪಕ್ಕದಲ್ಲಿದ್ದ ವೀಣೆಯನ್ನು ನುಡಿಸಹತ್ತಿದರು. ಆಗ ಅದರ ಮುಖದಿಂದ ಕೃತಿಯೊಂದು ಹೊರಹೊಮ್ಮಿತು.

"ಇಂದು ಎನಗೆ ಗೋವಿಂದ ನಿನ್ನಯ ಪಾದಾರ
ವಿಂದವ ತೋರೋ ಮುಕುಂದ ಇಂದಿರೆ ರಮಣ"॥

ಗುರುಗಳು ಆನಂದದಿಂದ ಹಾಡುತ್ತಾ ವೀಣೆ ನುಡಿಸುತ್ತಿರುವಾಗ ಜಗನ್ಮೋಹನಾಕಾರನಾದ ಬಾಲಕೃಷ್ಣ ಗುರುಗಳಿಗೆ ತನ್ನ ಮಂಗಳಕರ ದರ್ಶನವಿತ್ತು, ತಾನೂ ವೇಣುನಾದ ಮಾಡುತ್ತಾ ನರ್ತಿಸಹತ್ತಿದ. ಆನಂತರ ಗುರುಗಳಿಗೆ ಅಭಯ ಪ್ರಧಾನಮಾಡಿ ಅದೃಶ್ಯನಾದ. ಭಗವದ್ದರ್ಶನದಿಂದ ಅಮಂದಾನಂದ ತುಂದಿಲರಾದ ಗುರುಗಳು ಆನಂದಬಾಷ್ಪಸುರಿಸುತ್ತಾ ಪರಮಾತ್ಮನನ್ನು ವಿವಿಧ ರೀತಿಯಿಂದ ಸ್ತುತಿಸಿ ಧನ್ಯತಾಭಾವದಿಂದ ಶ್ರೀಮಠಕ್ಕೆ ದಯಮಾಡಿಸಿದರು.

ಶ್ರೀಗಳವರು ಶ್ರೀರಾಮನವಮೀ ಮಹಾಭಿಷೇಕವನ್ನು ವೈಭವದಿಂದಾಚರಿಸಿ, ತಮಗೆ ಕೃಷ್ಣದರ್ಶನವಾದ ಜ್ಞಾಪಕಾರ್ಥವಾಗಿ ಸುವರ್ಣಮಯ ಮಂಥಾನದಾಮಕರ ಕೃಷ್ಣವಿಗ್ರಹವನ್ನು ತಾವೇ ನಿರ್ಮಿಸಿ ಕೃಷ್ಣನನ್ನು ಶ್ರೀ

ಮೂರಾಮನ ಪಕ್ಕದಲ್ಲಿಟ್ಟು ಪೂಜಿಸಿದರು. ಈ ಸಂತಾನಕೃಷ್ಣನ ಉಪಾಸನೆಯಿಂದ ಇಂದಿಗೂ ಪೀಠಾಧೀಶರು ಜನರಿಗೆ ಸಂತಾನ, ಭೀತಿ, ಸರ್ವಸಿದ್ಧಿ ಯಂತ್ರಗಳನ್ನು ಅನುಗ್ರಹಿಸುತ್ತಿರುವುದು ಪದ್ಧತಿಯಾಗಿದೆ. ಗುರುಗಳು ಉಡುಪಿಯಿಂದ ಹೊರಟು, ಮೈಸೂರು ದೇಶದಲ್ಲಿರುವ ತಮ್ಮ ಮಠದ ಮೂಲ ಸ್ಥಳವಾದ ನಂಜನಗೂಡಿಗೆ ಬಂದು ಬಿಡಾರಮಾಡಿದರು. ಶ್ರೀಕಂಠೇಶ್ವರ ಸ್ವಾಮಿಯ ದರ್ಶನ-ಸೇವಾದಿಗಳಿಂದ ಆನಂದಿಸಿದರು.

ಶ್ರೀರಂಗಪಟ್ಟಣದಲ್ಲಿ ಮೈಸೂರರಸರಾದ ದೊಡ್ಡದೇವರಾಜ ಒಡೆಯರು ರಾಜ್ಯಭಾರಮಾಡುತ್ತಿದ್ದರು. ಶ್ರೀರಾಘವೇಂದ್ರ ಗುರುಗಳ ಮಹಿಮೆಯನ್ನರಿತಿದ್ದ ಮಹಾರಾಜರು ಶ್ರೀಗಳವರನ್ನು ಶ್ರೀರಂಗಪಟ್ಟಣಕ್ಕೆ ಕರೆಯಿಸಿಕೊಂಡು ಅವರನ್ನು ಸ್ವಾಗತಿಸಿ ಆನೆಯಮೇಲೆ ಅಂಬಾರಿಯಲ್ಲಿ ಮಂಡಿಸಿ ಮೆರವಣಿಗೆಯಿಂದ ಕರತಂದು ಬಿಡಾರಮಾಡಿಸಿ, ಚಾತುರ್ಮಾಸ್ಯ ಸಂಕಲ್ಪ ವ್ರತವನ್ನು ರಾಜಧಾನಿಯಲ್ಲೇ ನೆರವೇರಿಸಬೇಕೆಂದು ಪ್ರಾರ್ಥಿಸಿದರು. ಶ್ರೀಗಳವರು ರಾಜರ ಭಕ್ತ್ಯಾದಿಳಿಂದ ತುಷ್ಟರಾಗಿ ರಾಜನ ಇಚ್ಛೆಯಂತೆ ಅಲ್ಲಿಯೇ ಚಾತುರ್ಮಾಸ್ಯ ವ್ರತ ಸಂಕಲ್ಪಕ್ಕೆ ಕುಳಿತರು. ಮಹಾರಾಜರು ನಾಲ್ಕುತಿಂಗಳೂ ಅರಮನೆಯಿಂದಲೇ ಗುರುಗಳ ಸತ್ಕಾರಮಾಡಿ ಶ್ರೀರಂಗನಾಥದೇವರ ಸನ್ನಿಧಿಯಲ್ಲಿ ಆಷಾಢ ಶುಕ್ಲ ಏಕಾದಶೀ (ಪ್ರಥಮೈಕಾದಶೀ) ದಿವಸ (6.7.1662) ದೊಡ್ಡದೇವರಾಜ ಒಡೆಯರು "ನಲ್ಲೂರು" ಅಥವಾ "ದೇವರಾಜಪುರ" ಎಂಬ ಸಮೃದ್ಧ ಗ್ರಾಮವನ್ನು ಗುರುಗಳಿಗೆ ದಾನಮಾಡಿ, ಧನಕನಕ ವಸ್ತ್ರಾಭರಣಗಳನ್ನು ಸಮರ್ಪಿಸಿ ಕೃತಾರ್ಥರಾದರು. ಅಂದು ಮತ್ತು ಮರುದಿನ ದ್ವಾದಶೀ ಶ್ರೀಯವರು ಅರಮನೆಯಲ್ಲಿ ಪೂಜಾರಾಧನೆಮಾಡಿ ಮಹಾರಾಜರನ್ನು ಅನುಗ್ರಹಿಸಿದರು. ಸಂಕಲ್ಪಮುಗಿದಮೇಲೆ ಶ್ರೀರಂಗನಾಥನಿಗೆ ಸೇವೆಸಲ್ಲಿಸಿ ಮಹಾರಾಜರಿಂದ ಬೀಳ್ಕೊಂಡು ತುಲಾಸ್ನಾನಕ್ಕಾಗಿ ರಾಮನಾಥಪುರಕ್ಕೆ ತೆರಳಿ ಅಲ್ಲಿ ಕಾವೇರಿಯಲ್ಲಿ ಸ್ನಾನಮಾಡಿ ಭಗವಂತನನ್ನು ಆರಾಧಿಸಿದರು.

21. ಮಹಿಮೆಗಳು

ರಾಮನಾಥಪುರದಿಂದ ಉತ್ತರದಕಡೆ ಸಂಚಾರಹೊರಟು ಶ್ರೀಗಳವರು ಚಿತ್ರದುರ್ಗಕ್ಕೆ ದಯಮಾಡಿಸಿದರು. ಅಲ್ಲಿ ತಮ್ಮ ಸೇವೆಮಾಡಿಕೊಂಡಿದ್ದ

ವೆಂಕಣ್ಣನು ಪದೇ ಪದೇ ನನಗೆ ಮೋಕ್ಷಕೊಡಿಸಿ ಎಂದು ಬೇಡುತ್ತಿದ್ದನು. ಒಂದು ಅವನ ಸೇವೆಯಿಂದ ತೃಪ್ತರಾದ ಶ್ರೀಗಳವರು ''ವೆಂಕಣ್ಣ, ನಿನಗೇನು ಬೇಕು'' ಎಂದು ಪ್ರಶ್ನಿಸಿದರು. ಎಂದಿನಂತೆ ವೆಂಕಣ್ಣ ''ಗುರುಗಳೇ, ನನಗೆ ಮೊಕ್ಷಕೊಡಿಸಿ'' ಎಂದು ಪ್ರಾರ್ಥಿಸಿದನು. ಜ್ಞಾನಿಗಳಾದ ಗುರುಗಳು ಮೋಕ್ಷಕ್ಕೆ ಅವನು ಅರ್ಹನೆಂದರಿತು ಅವನಿಂದ ಕೆಲಹೋಮಾದಿಗಳನ್ನು ನೆರವೇರಿಸಿ ಚಿತೆಯನ್ನು ಸಿದ್ಧಪಡಿಸಿ ವೆಂಕಣ್ಣನಿಗೆ ಮಂತ್ರೋಪದೇಶಮಾಡಿ ''ಈ ಮಂತ್ರವನ್ನು ಜಪಿಸುತ್ತಾ ಬೆಂಕಿಗೆ ಹಾರು'' ಎಂದರು. ವೆಂಕಣ್ಣ ಗುರುಗಳಿಗೆ ನಮಿಸಿ ಮಂತ್ರಜಪಮಾಡುತ್ತಾ ಧಗಧಗಿಸುವ ಚಿತೆಗೆ ಹಾರಿದನು. ಅಲ್ಲಿನೆರದ ಜನ ''ಅಯ್ಯೋ ಒಬ್ಬ ಬ್ರಾಹ್ಮಣನನ್ನು ಗುರುಗಳು ಅನ್ಯಾಯವಾಗಿ ಕೊಂದರು'' ಎಂದಾಡಿಕೊಳ್ಳುತ್ತಿರುವಾಗ ಆಕಾಶದಲ್ಲಿ ಘಂಟಾನಾದವಾಯಿತು. ಶ್ರೀಗಳ ಮೇಲೆ ಪುಷ್ಪವೃಷ್ಟಿಯಾಯಿತು. ಶ್ರೀಗಳವರು ''ಸಜ್ಜನರೇ ಮುಕ್ತಿಯೋಗ್ಯನಾದ ವೆಂಕಣ್ಣನಿಗೆ ಶ್ರೀಹರಿಯ ಆಜ್ಞೆಯಂತೆ ಮೋಕ್ಷಕೊಡಿಸಿದ್ದೇವೆ. ಅವನು ವಿಮಾನದಲ್ಲಿ ಮೋಕ್ಷಮಂದಿರಕ್ಕೆ ಹೊರಟಿದ್ದಾನೆ. ನೀವೂ ಕೇಳಿದಿರಲ್ಲವೇ ವಿಮಾನದ ಘಂಟನಾದ'' ಎಂದರು. ಘಂಟನಾದ, ಪುಷ್ಪವೃಷ್ಟಿಗಳನ್ನು ಪ್ರತ್ಯಕ್ಷಕೇಳಿ, ಕಂಡ ಜನರು ಗುರುಗಳ ಮಹಿಮೆಯನ್ನು ಕೊಂಡಾಡಿದರು. ಇಂದಿಗೂ ಚಿತ್ರದುರ್ಗದಲ್ಲಿ ಮೋಕ್ಷಕೊಡಿಸಿದ ಸ್ಥಳವನ್ನು ತೋರಿಸುತ್ತಾರೆ.

☆ ☆ ☆ ☆ ☆ ☆

ಶ್ರೀಗಳವರು ಹರಿಹರದಲ್ಲಿ ಭೋಜನ ಪ್ರಿಯರಿಗೆ ಅವರಿಗಿಷ್ಟವಾದ ಪದಾರ್ಥಗಳನ್ನು ಸಲ್ಲಿಸಿದರು. ಅವರಲ್ಲೊಬ್ಬ ಸಭ್ಯಬ್ರಾಹ್ಮಣನಿಗೆ ಮುಂದೆ ನಿಮ್ಮ ವಂಶೀಕರು ನಮ್ಮ ಪೂಜೆಮಾಡುವರೆಂದು ಆಶೀರ್ವದಿಸಿದರು. ಭೋಜನಕ್ಕೆ ಮೊದಲೇ ತಮ್ಮ ಶಾಟಿಯನ್ನು ಒಗೆಯುತ್ತಿದ್ದ ದ್ವಾರಪಾಲಕನಿಂದ ಅವರಿಗೆ ಇಷ್ಟವಾದ ಭಕ್ಷ್ಯಗಳನ್ನು ಶ್ರೀಗಳವರು ಕರುಣಿಸುತ್ತಾರೆಂದು ಹೇಳಿಸಿ ತಮ್ಮ ಮಹಿಮೆಯನ್ನು ಪ್ರಕಟಪಡಿಸಿದ್ದರು. ಇದನ್ನು ಶ್ರೀಗಳವರ ಶಾಟಿಯ ಮಹಿಮೆ ಎಂದು ಭಕ್ತರು ಕೊಂಡಾಡುತ್ತಾರೆ.

☆ ☆ ☆ ☆ ☆ ☆

ಹರಿಹರದಿಂದ ಗದುಗಿಗೆ ಆಗಮಿಸಿ ವೀರನಾರಾಯಣನದರ್ಶನ ಪೂಜಾದಿ

ಗಳನ್ನು ನೆರವೇರಿಸಿ ಮಠದ ಶ್ರೀಮಂತ ಶಿಷ್ಯನಾದ ವೆಂಕಟದೇಶಾಯಿ ಎಂಬುವವನ ಪ್ರಾರ್ಥನೆಯಂತೆ ಅವನ ಗ್ರಾಮವಾದ ಕಿರೀಟಗಿರಿಗೆ ಬಂದು ದೇಶಾಯಿಯ ಮನೆಯಲ್ಲಿ ದೇವರ ಪೂಜೆಮಾಡುತ್ತಿರುವಾಗ ಬ್ರಾಹ್ಮಣರ ಭೋಜನಕ್ಕೆಂದು ದೊಡ್ಡ ಪಂಚಪಾತ್ರೆಯ ತುಂಬಾ ದೇಶಾಯಿಯು ಮಾಡಿಸಿದ್ದ ಮಾವಿನಹಣ್ಣಿನ ರಸಾಯನದಲ್ಲಿ ದೇಶಾಯಿಯ ಸಣ್ಣ ಮಗ ಬಿದ್ದು ಮೃತನಾದಾಗ ಶ್ರೀಗಳವರು ಭಗವಧ್ಯಾನಪರರಾಗಿ, ಕಮಂಡಲೋದಕವನ್ನು ಅಭಿಮಂತ್ರಿಸಿ ಬಾಲಕನಮೇಲೆ ಪ್ರೋಕ್ಷಿಸಿ ಅವನನ್ನು ಉಜ್ಜೀವವಗೊಳಿಸಿ ಸರ್ವರಿಂದ ''ಮೃತಪೋತಪ್ರಾಣದಾತ''ರೆಂದು ಸ್ತುತ್ಯರಾದರು. ದೇಶಾಯಿ ತನ್ನ ಪುತ್ರನನ್ನು ಬದುಕಿಸಿಕೊಟ್ಟ ಗುರುಗಳಿಗೆ ತನ್ನ ಗ್ರಾಮವಾದ ''ಕಿರೀಟಗಿರಿ''ಯನ್ನೇ ದಾನಮಾಡಿ ಕೃತಾರ್ಥನಾದನು. ಆ ಗ್ರಾಮವು ಇಂದಿಗೂ ಶ್ರೀ ಮಠಕ್ಕೆ ನಡೆದುಬಂದಿದೆ.

☆ ☆ ☆ ☆ ☆ ☆

ಅಲ್ಲಿಂದ ಹುಬ್ಬಳ್ಳಿಯಕಡೆ ಹೊರಟಾಗ ಮಾರ್ಗಮಧ್ಯದಲ್ಲಿ ಹಾವು ಕಚ್ಚಿ ಮೃತನಾಗಿದ್ದ ಸವಣೂರಿನ ನವಾಬನ ಏಕೈಕಪುತ್ರನನ್ನು ಗರುಡಮಂತ್ರ ಜಪದಿಂದಲೂ, ಕಮಂಡಲೋದಕಪ್ರೋಕ್ಷಣದಿಂದಲೂ ಬದುಕಿಸಿದರು. ಗುರುಗಳು ತನ್ನ ವಂಶವನ್ನು ಉಳಿಸಿಕೊಟ್ಟರೆಂದು ನವಾಬನು ಗುರುಗಳಿಗೆ 'ಕೃಷ್ಣಾಪುರ'' ಎಂಬ ಗ್ರಾಮದಾನಮಾಡಿ, ಭಕ್ತಿಯಿಂದ ಸತ್ಕರಿಸಿ ಧನ್ಯನಾದನು. ಈ ಗ್ರಾಮವು ಅದ್ಯಾಪಿ ಶ್ರೀಮಠಕ್ಕೆ ನಡೆದುಬಂದಿದೆ.

☆ ☆ ☆ ☆ ☆ ☆

ಶ್ರೀರಾಘವೇಂದ್ರ ಸ್ವಾಮಿಗಳು ನವಲಗುಂದಗ್ರಾಮಕ್ಕೆ ದಯಮಾಡಿಸಿದ್ದಾಗ, ಅಲ್ಲಿನ ಅನೇಕ ಬ್ರಾಹ್ಮಣರು ಸಿರಸಂಗಿಯ ದೇಶಾಯಿಯು ಅವರ ಪೂರ್ವಿಕರು ತಮಗಿತ್ತ ಜಮಿನನ್ನು ಕಸಿದುಕೊಂಡಿರುವುದಾಯೂ, ಆತನಲ್ಲಿ ಜಮೀನ ಕೊಡೆಂದು ಕೇಳಿದರೆ ವೇದ ಮಂತ್ರ ಪಠನಕ್ಕಾಗಿ ನಿಮಗೀಭೂಮಿಗಳನ್ನು ಕೊಡಲಾಗಿದೆ. ನಿಮ್ಮ ವೇದ ಮಂತ್ರಗಳೆಲ್ಲವೂ ಸುಳ್ಳು, ಅದು ಸತ್ಯವೆಂದು ತೋರಿದರೆ ಜಮೀನನ್ನು ಪುನಃ ಕೊಡುವೆನೆನ್ನುತ್ತಾನೆ. ಅವನು ನಾಸ್ತಿಕ.

ಗುರುಗಳೇ, ಈಗ ನೀವೇ ನಮಗೆ ದಿಕ್ಕು'' ಎಂದು ನಮಸ್ಕರಿಸಿ ಕಣ್ಣೀರು ಸುರಿಸಿದರು. ಆಗ ದಯಾಘನರಾದ ಸ್ವಾಮಿಗಳು ಅವರಿಗೆ ಅಭಯವಿತ್ತು ಸಿರಸಂಗಿಯ ದೇಶಾಯಿಯನ್ನು ಕಂಡು ಮಾತಾನಾಡಿದರು. ಆಗ ದೇಶಾಯಿ ''ವೇದಮಂತ್ರ ಸತ್ಯವಾಗಿದ್ದರೆ, ಗುರುಗಳೇ, ಅದರ ಪ್ರಭಾವದಿಂದ ಈ ಒನಕೆಯನ್ನು ಚಿಗುರಿಸಿರಿ ನೋಡೋಣ! ನೀವು ಹಾಗೆ ಮಾಡಿದಲ್ಲಿ ಬ್ರಾಹ್ಮಣರ ಜಮೀನನ್ನು ಮತ್ತೇ ಅವರಿಗೆ ಕೊಡುತ್ತೇನೆ. ನಾನೂ ನಿಮ್ಮ ಶಿಷ್ಯನಾಗುತ್ತೇನೆ'' ಎಂದು ಹೇಳಿದನು. ಗುರುರಾಜರು ಆತನ ಸವಾಲಿಗೆ ಒಪ್ಪಿ ಮೂರುದಿನ ಕಾಲ ಮಂತ್ರೋದಕ ಪ್ರೋಕ್ಷಣದಿಂದ ಒನಕೆಯನ್ನು ಚಿಗುರಿಸಿ ತೋರಿದರು. ದೇಸಾಯಿ ಅದರಿಂದ ಪ್ರಭಾವಿತನಾಗಿ ಗುರುಗಳು ಮಹಾತ್ಮರು, ಮಂತ್ರಿಸಿದ್ಧರು ಎಂದರಿತು ಶ್ರೀಗಳವರಿಗೆ ನಮಿಸಿ ಕ್ಷಮೆಯಾಚಿಸಿ, ಎಲ್ಲ ಬ್ರಾಹ್ಮಣರ ಭೂಮಿಗಳನ್ನು ಅವರವರಿಗೆ ಕೊಟ್ಟು ಶ್ರೀಸ್ವಾಮಿಗಳನ್ನು ಭಕ್ತಿಯಿಂದ ಸತ್ಕರಿಸಿ ಗುರುಗಳ ಭಕ್ತನಾದನು. ಗುರುಗಳ ಮಹಿಮೆ ಎಲ್ಲೆಡೆ ಪ್ರಸಾರವಾಯಿತು.

☆ ☆ ☆ ☆ ☆ ☆

ಮುಂದೆ ಶ್ರೀರಾಘವೇಂದ್ರ ಸ್ವಾಮಿಗಳು ಪಂಢರಪುರದ ಕಡೆ ಸಂಚಾರ ಹೊರಟರು. ಮಾರ್ಗ ಮಧ್ಯ ನೀರುನೆರಳಿಲ್ಲದ ಒಂದು ಬೆಂಗಾಡಿನಲ್ಲಿ ಶ್ರೀಯವರ ಸೇವಕನ ಪತ್ನಿ ಪ್ರಸವಿಸಿದಾಗ ಕಮಂಡಲುವಿನಿಂದ ಜಲವನ್ನು, ತಮ್ಮ ಕರವಸ್ತ್ರವನ್ನು ಆಕಾಶಕ್ಕೆ ಚಿಮ್ಮಿ ವಿಸ್ತಾರವಾದ ನೆರಳನ್ನೂ, ಉಂಟುಮಾಡಿ ಸೇವಕನ ಪತ್ನೀ ಪುತ್ರರನ್ನು ರಕ್ಷಿಸಿದರು. ಜನರು ಗುರುಗಳನ್ನು ಭಕ್ತವತ್ಸಲರಾದ ಮಹಾಮಹಿಮರೆಂದು ಸ್ತುತಿಸಿದರು.

ಅಲ್ಲಿಂದ ಪಂಢರಾಪುರಕ್ಕೆ ಬಂದ ಗುರುಗಳು ಶ್ರೀಪಾಂಡುರಂಗನ ದರ್ಶನ ಸೇವಾದಿಗಳಿಂದ ಕೃತಾರ್ಥರಾದರು. ಅದೇ ಸಂದರ್ಭದಲ್ಲಿ ಶೇಷಮಹಾರಾಜ ರೆಂಬ ಪ್ರಬಲವಾದಿಗಳನ್ನು ವಾಕ್ಯಾರ್ಥದಲ್ಲಿ ಸೋಲಿಸಿ ತಮ್ಮ ಪಾಂಡಿತ್ಯ ಪ್ರಭಾವವನ್ನು ವ್ಯಕ್ತಗೊಳಿಸಿದರು. ಅಲ್ಲಿ ಕೆಲದಿನವಿದ್ದು ತತ್ವೋಪದೇಶದಿಂದ ಸಾವಿರಾರು ಜನರನ್ನು ಆಸಕ್ತಿರನ್ನಾಗಿಮಾಡಿ, ಅನೇಕ ರೋಗಾದ್ಯುಪದ್ರಗಳಿಂದ ಬಳಲುತ್ತಿದ್ದವರ ರೋಗ ಪರಿಹಾರಮಾಡಿ, ಮನೋಭೀಷ್ಟಗಳನ್ನು ದಯಪಾಲಿಸಿ ಸರ್ವವಂದ್ಯರಾದರು.

ಶ್ರೀಗಳವರು ಪಂಢರಪುರದಿಂದ ಕೊಲ್ಲಾಪುರಕ್ಕೆ ದಿಗ್ವಿಜಯಮಾಡಿ ಅಲ್ಲಿ ಬಹಕಾಲವಾಸಮಾಡಿ ಶ್ರೀಮಹಲಕ್ಷ್ಮೀಯ ದರ್ಶನ, ಪೂಜಾ, ಪುರಸ್ಕಾರಗಳಿಂದ ಸೇವಿಸಿ ದೇವಿಯ ಅನುಗ್ರಹಕ್ಕೆ ಪಾತ್ರರಾದರು. ಅಲ್ಲಿ ಷಹಜಿಯ ಬಲಗೈನಂತಿದ್ದ ನಾರೋಪಂತ ಹನುಮಂತೇ ಎಂಬ ಮಾಧ್ವಬ್ರಾಹ್ಮಣ, ಶ್ರೇಷ್ಠ ರಾಜಕಾರಣಿಯಾಗಿದ್ದು ಶಿವಾಜಿಮಹಾರಾಜರಿಗೆ ಸ್ವಾಂತತ್ರ್ಯಸಂಗ್ರಾಮ-ಹಿಂದೂಸಾಮ್ರಾಜ್ಯ ಸ್ಥಾಪನೆಯಲ್ಲಿ ಸಹಾಯಕನಾಗಿದ್ದನು. ಅವನು ಶ್ರೀಗಳವರಲ್ಲಿ ಅತಿಭಕ್ತಿಯುಕ್ತನಾಗಿ ಶ್ರೀಮಠದಖರ್ಚನೆಲ್ಲಾ ತಾನೇ ವಹಿಸಿಕೊಂಡಿದ್ದುದಲ್ಲದೆ. ಶ್ರೀ ಶಿವಾಜಿ ಮಹಾರಾಜರಿಗೆ ಶ್ರೀಸ್ವಾಮಿಗಳಿಂದ ವಿಜಯವಾಗುವಂತೆ. ಧರ್ಮೋಪದೇಶ ಪೂರ್ವಕ ಆಶೀರ್ವಾದಮಾಡಿಸಿದನು. ಶಿವಾಜಿ ಮಹಾರಾಜರು ಸ್ವಾಮಿಗಳ ತೇಜಸ್ಸು ಪಾಂಡಿತ್ಯಗಳಿಂದ ಪ್ರಭಾವಿತರಾಗಿ ಗುರುಗಳಿಗೆ ಪಾದಪೂಜೆಮಾಡಿ ಧನಕನಕಾದಿಗಳನ್ನು ಸಮರ್ಪಿಸಿ ಧನ್ಯರಾದರು.

ಸ್ವಾಮಿಗಳವರು ಅಲ್ಲಿಂದ ನಾಸಿಕದವರೆಗೂ ದಿಗ್ವಿಜಯಮಾಡಿ ಗೋದಾವರಿಯಲ್ಲಿ ಸ್ನಾನಮಾಡಿ ಹಿಂದಿರುಗುವಾಗ ಕರಾಡದಲ್ಲಿ ಮಠದಶಿಷ್ಯರಾದ ಸಹವಾಸಿ ಶ್ರೀಮಂತರ ಮನೆಯಲ್ಲಿ ಪೂಜಾರಾಧನೆ ನೆರವೇರಿಸಿದರು. ಶ್ರೀಮಂತರ ಸೋದರಳಿಯ ಶ್ರೇಷ್ಠಸಂಗೀತಗಾರನಾಗಿದ್ದನು. ದ್ವೇಷಿಗಳು ಅವನಿಗೆ ಆಭಿಚಾರಿಕ ಪ್ರಯೋಗಮಾಡಿಸಿ ಹಾಡಲು ಬರದಂತೆ, ಮಾತ್ರವಲ್ಲ; ಮಾತಾಡಲೂ ಆಗದಂತೆ ಮಾಡಿಸಿದ್ದರು. ಶ್ರೀಮಂತರಿಂದ ಆ ವಿಷಯವರಿತ ಗುರುಗಳು ವರ್ಧಿಷ್ಣುವಾದ ಶ್ರೀಮಂತರ ಸೋದರಳಿಯನಲ್ಲಿ ಅನುಗ್ರಹಮಾಡಿ. ನೇತ್ರ ವೀಕ್ಷಣಮಾತ್ರದಿಂದ ಅಭಿಚಾರಿಕ ಪ್ರಯೋಗದ ಶಕ್ತಿಯನ್ನು ಭಗ್ನಗೊಳಿಸಿ ಆತನು ಮೊದಲಿನಂತೆ ಮಾತನಾಡಲೂ, ಸಂಗೀತಹಾಡಲೂ ಆಗುವಂತೆ ಕರುಣೆದೋರಿದರು.

☆ ☆ ☆ ☆ ☆ ☆

ಅಲ್ಲಿಂದ ಹೊರಟ ಸ್ವಾಮಿಗಳು ಬಿಜಾಪುರ-ಚಿಕ್ಕೋಡಿಮಧ್ಯ ಕಾಡಿನಲ್ಲಿ ಬಿಸಿಲಿನ ತಾಪದಿಂದ ತೃಷಾರ್ತನಾಗಿ ನೀರಿಲ್ಲದೆ ಗತಪ್ರಾಣನಾಗಿ ಅನಾಥನಾಗಿ ಬಿದ್ದಿದ್ದ ಒಬ್ಬ ಭೂಸುರನನ್ನು, ತಮ್ಮ ದಂಡಾಘಾತದಿಂದ ಜಲನಿರ್ಮಾಣ ಮಾಡಿ ಉಜ್ಜೀವನಗೊಳಿಸಿ 'ಮಹಿಮೆತೋರಿ' 'ಅನಾಥ ರಕ್ಷಕ'ರೆಂದು ಸಕಲ ಜನರಿಂದ ಸ್ತುತರಾದರು.

22. ಜಗದ್ಗುರುಪ್ರಶಸ್ತಿ

ಶ್ರೀಗಳವರು ಬಿಜಾಪುರಕ್ಕೆ ಬಿಜಯಮಾಡಿಸಿದರು. ಅಂದು ಬಿಜಾಪುರವು ದೊಡ್ಡರಾಜ್ಯವಾಗಿತ್ತು. ಅಲ್ಲಿ ಇಮ್ಮಡಿ ಆಲೀ ಆದಿಲ್‌ಶಹನ ಆಳ್ವಿಕೆಯಲ್ಲಿ ಪ್ರಜರು ನೆಮ್ಮದಿಯಿಂದಿದ್ದರು. ಅವನು ಮುಸ್ಲಿಂ ದೊರೆಯಾದರೂ ಅವನಿಗೆ ಹಿಂದೂಧರ್ಮ, ಸಾಧುಸಂತರುಗಳಲ್ಲಿ ವಿಶೇಷಗೌರವವಿತ್ತು. ಅಂತೆಯೇ ಗುರುರಾಜರ ಮಹಿಮಾದಿಗಳನ್ನು ಕೇಳಿ ತಿಳಿದಿದ್ದ ಸುಲ್ತಾನನು ಶ್ರೀಗಳವರನ್ನು ರಾಜಯೋಗ್ಯವಾಗಿ ಸ್ವಾಗತಿಸಿ ಸತ್ಕರಿಸಿದನು. ಸ್ವಾಮಿಗಳು ರಾಜಾಸ್ಥಾನದ ಅನೇಕ ವಿದ್ವಾಂಸರನ್ನು ವಾದದಲ್ಲಿ ಸುಲಭವಾಗಿ ಜಯಿಸಿದರು. ಅದರಿಂದ ಮುದಗೊಂಡ ಸುಲ್ತಾನನು ಶ್ರೀರಾಘವೇಂದ್ರ ಸ್ವಾಮಿಗಳಿಗೆ 'ಜಗದ್ಗುರು' ಎಂಬ ಶ್ರೇಷ್ಠ ಪ್ರಶಸ್ತಿಯನ್ನೂ ''ಶ್ವೇತಛತ್ರ', ಒಂಟೆಯಮೇಲೆ ಹಸಿರುಛತ್ರಿ ಅಪ್ತಾಗಿರಿ ಹಿಡಿಸಿಕೊಂಡು ಮೆರವಣಿಗೆ ಹೋಗುವ ಬಿರುದಾವಲಿಗಳನ್ನೂ ಭೂಸ್ವಾಸ್ತಿ, ಧನಕನಕ ವಸ್ತ್ರಾಭರಣಗಳನ್ನೂ ಸಮರ್ಪಿಸಿ ಸನ್ಮಾನಿಸಿ ಗುರುಗಳ ಅನುಗ್ರಹಕ್ಕೆ ಪಾತ್ರನಾದನು.

ಸ್ವಾಮಿಗಳು ಅಲ್ಲಿಂದ ಹೊರಟು ಆಲೂರಿಗೆ ಬಂದು ಕೃಷ್ಣಾ ಸ್ನಾನ ಮಾಡಿ, ಅಲ್ಲಿ ಸ್ವಲ್ಪದಿನ ವಾಸಮಾಡಿ ಶ್ರೀಜಯತೀರ್ಥರ 'ತತ್ವಪ್ರಕಾಶಿಕಾ' ಗ್ರಂಥಕ್ಕೆ ವಿಸ್ತಾರವೂ ಅಸಾಧಾರಣವೂ ಆದ 'ಭಾವದೀಪ' ಎಂಬ ಟಿಪ್ಪಣಿ ಯನ್ನು, ಶ್ರೀಮಧ್ವಾಚಾರ್ಯರ 'ಅಣುಭಾಷ್ಯ'ಕ್ಕೆ 'ತತ್ವಮಂಜರೀ' ಎಂಬ ವಿಸ್ತೃತವಾದ ಟೀಕೆಯನ್ನೂ ರಚಿಸಿ ಶ್ರೀಮಾಧ್ವಾಚಾರ್ಯರು-ಶ್ರೀಟೀಕಾರಾಯರಿಗೆ ಸಮರ್ಪಿಸಿದರು.

23. ಅಂತ್ಯಜರಾಗಿದ್ದ ಕನಕದಾಸರಿಗೆ ಸದ್ಗತಿ

ಗುರುಗಳು ಮುಂದೆ ಪೂರ್ವಕ್ಕೆ ದಿಗ್ವಿಜಯಮಾಡಿ ರಾಯಚೂರು ಪ್ರಾಂತಕ್ಕೆ ಸೇರಿದ, ಮಾನವೀ ಸನಿಹದ ಶ್ರೀಪ್ರಾಣದೇವರ ಗುಡಿಯಲ್ಲಿ ಚಾತುಮಾಸ್ಯವ್ರತಕ್ಕೆ ಕುಳಿತರು. ಆಗೊಂದು ದಿನ ಧ್ವಜಸ್ತಂಭದಬಳಿ ಶ್ರೀಯವರ ದರ್ಶನಕ್ಕಾಗಿ ಕಾದುನಿಂತಿದ್ದ, ಹಿಂದೆ ಕನಕದಾಸರಾಗಿದ್ದು ಈಗ ಅಂತ್ಯಜರಾಗಿ ಜನಿಸಿದ್ದ ಮಹನೀಯರನ್ನು ಕಂಡು ಗುರುಗಳು 'ಏನೋ ಕನಕ! ನಿನ್ನಗತಿ ಹೀಗಾಯಿತೇ' ಎಂದನಲು ಅಂತ್ಯಜ ಗುರುಗಳಿಗೆ ನಮಿಸಿ 'ಶ್ರೀಹರಿಚಿತ್ತವ್ಯಾಸಪ್ಪ! ಜೀವನದ

ಜಂಜಾಟ ಸಾಕಿನ್ನು! ನೀನೇ ನನಗೆ ಗತಿತೋರಬೇಕು' ಎಂದು ವಿಜ್ಞಾಪಿಸಿದನು. ಅವನಲ್ಲಿ ಕರುಣೆದೋರಲು ಸಂಕಲ್ಪಿಸಿದ ಸ್ವಾಮಿಗಳು 'ಹಾಗೇ ಆಗಲಿ. ಶ್ರೀಮೂಲರಾಮನಿಗೆ ಏನಾದರೂ ಕಾಣಿಕೆ ಅರ್ಪಿಸು' ಎಂದರು. ಮರುದಿನ ಅಂತ್ಯಜನು ಸ್ವಲ್ಪ ಸಾಸುವೆಯನ್ನು ಅರ್ಪಿಸಿ ನಮಿಸಿದನು. ಸ್ವಾಮಿಗಳು ಅದನ್ನು ಹೋಮದ್ರವ್ಯವಾದ್ದರಿಂದ ವ್ರತಕಾಲವಾಗಿದ್ದರೂ ಸ್ವೀಕರಿಸಬಹುದೆಂದು ಅದನ್ನು ಅಂದಿನ ಅಡುಗೆಗೆ ಉಪಯೋಗಿಸಬೇಕೆಂದು ಮಠದವರಿಗೆ ಆಜ್ಞಾಪಿಸಿದರು. ಆ ದಿನ ಸಾಸುವೆ ಬಳಸಿದ ಅಡುಗೆಯನ್ನು ದೇವರಿಗರ್ಪಿಸಿ. ತಮ್ಮ ಭಿಕ್ಷಾಸ್ವೀಕಾರ ವಾದಮೇಲೆ ದ್ವಾರಪಾಲಕನ ದ್ವಾರಾ ಅಂತ್ಯಜನಿಗೆ ದೇವರ ತೀರ್ಥಪ್ರಸಾದ, ಮಂತ್ರಾಕ್ಷತೆ ಕಳಿಸಿದರು. ಅದನ್ನು ಭಕ್ತಿಯಿಂದ ಸ್ವೀಕರಿಸಿದ ಆ ಅಂತ್ಯಜನು ಹರಿಧ್ಯಾನಮಾಡತ್ತಾ ಅಸುನೀಗಿದನು. ಏನಾಶ್ಚರ್ಯ! ಅವನು ವಿಮಾನವೇರಿ ಆಕಾಶಮಾರ್ಗವಾಗಿ ಪ್ರಯಾಣ ಬೆಳೆಸಿದನು. ಅದನ್ನು ಕಂಡು ಅಚ್ಚರಿಗೊಂಡ ಜನರು ಗುರುಗಳ ಮಹಿಮೆಯನ್ನು ಭಕ್ತವಾತ್ಸಲ್ಯಗಳನ್ನು ಕೊಂಡಾಡಿದರು.

ಇದಾದ ಸ್ವಲ್ಪದಿನಗಳಲ್ಲಿ ತಾವು ಬರೆದ ಗ್ರಂಥವನ್ನು ಶ್ರೀರಾಯರಿಗೆ ತೋರಿಸಿ ಆಶೀರ್ವಾದ ಪಡೆಯಲು ಬಂದ ಬಿದರಹಳ್ಳಿ ಶ್ರೀನಿವಾಸಚಾರ್ಯರು ಸಾಸುವೆ ಬಳಸಿದ ಅಡುಗೆ ಎಂದು ಶಾಠ್ಯದಿಂದ ಭೋಜನಮಾಡದಿರಲು ಶ್ರೀಗಳು ಬೇರೆ ಅಡುಗೆಮಾಡಿಸಿ ಅವರಿಗೆ ಉಣಬಡಿಸಿ, ಮಂತ್ರಾಕ್ಷತೆಕೊಟ್ಟು ಕಳಿಸಿದರು. ಶ್ರೀ ಶ್ರೀನಿವಾಸಾಚಾರ್ಯರ ಅಣ್ಣಂದಿರಾದ ಶ್ರೀಯಾದವಾರ್ಯರು ಶ್ರೀ ರಾಯರಿತ್ತ ಮಂತ್ರಾಕ್ಷತೆ ಕೊಡು ಎಂದು ಕೇಳಿದಾಗ ಕೆಂಪಗಿದ್ದ ಅದು ಕಪ್ಪಾಗಿದ್ದನ್ನು ಕಂಡು ತಮ್ಮನು ಸ್ವೋತ್ತಮದ್ರೋಹಕ್ಕ ಪಾತ್ರನಾಗಿದ್ದಾನೆಂದು ಮನಗಂಡು, ಅವರಿಂದ ವಿಷಯವರಿತು ದೊಡ್ಡವರ ಸನ್ನಿಧಿಯಲ್ಲಿ ಶಾಠ್ಯಮಾಡ ಬಾರದೆಂದು ಬುದ್ಧಿಹೇಳಿ ಮತ್ತೆ ಶ್ರೀರಾಯರ ಅನುಗ್ರಹಪಡೆದು ಬರಲು ಕಳಿಸಿದರು. ಶ್ರೀನಿವಾಸಚಾರ್ಯರು ಶ್ರೀರಾಯರ ಅಪ್ಪಣೆಯಂತೆ ಶ್ರೀಮೂಲರಾಮನ ದರ್ಶನ, ತೀರ್ಥಪ್ರಸಾದ ಸ್ವೀಕರಿಸಿ ಸಾಸುವೆ ಬಳಸಿದ ಭೋಜನವನ್ನು ಮಾಡಿ ಗುರುರಾಜರ ಅನುಗ್ರಹ ಸಂಪಾದಿಸಿಕೊಂಡು ಹೋದರು.

24. ಅನಾಥ ವೆಂಕಣ್ಣ ದಿವಾನನಾದ

ಶ್ರೀಗಳವರು ಚಾತುರ್ಮಾಸ್ಯವ್ರತಮುಗಿದಮೇಲೆ ಸಂಚಾರಕ್ರಮದಿಂದ

ಕಂದನಾತಿ ಎಂಬಗ್ರಾಮಕ್ಕೆ ಬಂದರು. ಅಲ್ಲಿ ವೆಂಕಣ್ಣನೆಂಬ ದೇಶಾಯಿಮನೆ ತನಕ್ಕೆ ಸೇರಿದ ಅನಾಥಯುವಕನು ಗುರುರಾಜರ ಸೇವೆಮಾಡಿ ಅನುಗ್ರಹಿಸ ಬೇಕೆಂದು ಪ್ರಾರ್ಥಿಸಿದನು. ಗುರುಗಳು ಅವನಲ್ಲಿ ದಯೆಬೀರಿ 'ವೆಂಕಣ್ಣ! ನಿನ್ನ ಆಪತ್ಕಾಲದಲ್ಲಿ ನಮ್ಮನ್ನು ಸ್ಮರಿಸು. ನೀನು ಅಭಿವೃದ್ಧಿಗೆ ಬಂದು ಹೆಸರು ಗಳಿಸುವೆ'' ಎಂದಾಶೀರ್ವದಿಸಿ ಫಲಮಂತ್ರಾಕ್ಷತೆ ಅನುಗ್ರಹಿಸಿ ಮುಂದೆ ಪ್ರಯಾಣಬೆಳೆಸಿದರು.

ವೆಂಕಣ್ಣನು ಒಂದು ದಿನ ಅಡಿವಿಗೆ ಹೋದಾಗ ಆದವಾನಿಯ ನವಾಬನು ಸೈನ್ಯ ಸಹಿತನಾಗಿ ಆ ಮಾರ್ಗವಾಗಿ ಬಂದುದನ್ನು ಕಂಡು ವೆಂಕಣ್ಣನು ಒಂದು ಮರದ ಕೆಳಗೆ ನಿಂತನು. ಆಗ ಈರ್ವರು ಅಶ್ವಾರೋಹಿಗಳು ಬಂದು ನವಾಬನಿಗೆ ಎರಡು ಪತ್ರಗಳನ್ನು ಒಪ್ಪಿಸಿದರು. ಅದನ್ನೋದುವವರು ಜೊತೆಗಿಲ್ಲದ್ದರಿಂದ ನವಾಬ್ ಸಿದ್ದೀಮಸೂದ್ ಖಾನನು ಸುತ್ತ ದೃಷ್ಟಿ ಹರಿಸಿ, ವೆಂಕಣ್ಣನನ್ನು ಕಂಡು ಅವನನ್ನು ಕರೆಸಿ ಪತ್ರ ಓದುವಂತೆ ಹೇಳಿದನು. ವೆಂಕಣ್ಣನಿಗೆ ಓದಲು ಬರುತ್ತಿರಲಿಲ್ಲ. 'ಖಾವಂದ್, ನನಗೆ ಓದಲು ಬರುವುದಿಲ್ಲ' ಎಂದು ಹೇಳಲು 'ಬ್ರಾಹ್ಮಣನಂತಿರುವೆ ಓದಲು ಬರುವುದಿಲ್ಲವೆಂದು ಸುಳ್ಳು ಹೇಳುವೆಯಾ ನೀನೀಗ ಈ ಪತ್ರ ಓದದಿದ್ದರೆ ಆನೆಯಕಾಲಿಗೆ ಕಟ್ಟಿಸಿ ಎಳೆಸುತ್ತೇನೆ' ಎಂದು ನವಾಬ ಕೋಪದಿಂದ ಗರ್ಜಿಸಿದನು. ವೆಂಕಣ್ಣನಿಗೆ ಬಹಳ ಭಯವಾಯಿತು. ಕೈಕಾಲುಗಳು ನಡುಗಲಾರಂಭಿಸಿದವು. ಏನು ಮಾಡಲೂ ತಿಳಿಯದೆ ಸುಮ್ಮನೆ ನಿಂತನು. ಆದರಿಂದ ಮತ್ತಷ್ಟು ಕುಪಿತನಾದ ನವಾಬನು 'ಓದುವೆಯೋ ಅಥವಾ ಸಾಯುವೆಯೋ' ಎಂದು ಗದರಿಸಲು ವೆಂಕಣ್ಣನು ತಾನಿನ್ನು ಬದುಕುವುದಿಲ್ಲವೆಂದು ಭಯಗೊಂಡನು. ಆಗವನಿಗೆ ಶ್ರೀರಾಘವೇಂದ್ರ ಗುರುಗಳು ಹೇಳಿದ್ದ ಮಾತು ನೆನಪಾಯಿತು. ತನಗೆ ಆಪತ್ಕಾಲ ಬಂದಿದೆ ಶ್ರೀಗುರುಗಳೇ ಕಾಪಾಡಬೇಕೆಂದು ಮನದಲ್ಲಿ ಗುರುಗಳನ್ನು ಧ್ಯಾನಿಸಿ 'ರಾಘವೇಂದ್ರ ರಕ್ಷಿಸಿರಿ' ಎಂದು ಪ್ರಾರ್ಥಿಸಿದನು. ಆಗೊಂದು ಅದ್ಭುತವೇ ಜರುಗಿಹೋಯಿತು. ಆ ಎರಡೂ ಪತ್ರಗಳನ್ನು ಬಿಚ್ಚಿ ನೋಡಿದನು. ಅವನಿಗೇ ಅರಿವಾಗದಂತೆ ಆ ಪತ್ರಗಳನ್ನು ಗಡಗಡನೆ ಓದಿಬಿಟ್ಟನು! ಅವೆರಡೂ ಪತ್ರಗಳಲ್ಲಿ ನವಾಬನಿಗೆ ಪುತ್ರನುದಯಿಸಿದ ಮತ್ತು ಒಂದು ಯುದ್ಧದಲ್ಲಿ ಜಯವಾದ ಶುಭ ವಾರ್ತೆಗಳಿದ್ದವು. ನವಾಬನಿಗೆ ಪರಮಾನಂದವಾಯಿತು.

ಅವನು ವೆಂಕಣ್ಣನನ್ನು ತನ್ನ ಜೊತೆಗೆ ಆದವಾನಿಗೆ ಕರೆದೊಯ್ದನು. ಅಲ್ಲಿ ನವಾಬನ ಆಶ್ರಯದಲ್ಲಿದ್ದು ಸ್ವಲ್ಪ ಕಾಲದಲ್ಲಿಯೇ ವೆಂಕಣ್ಣನು ರಾಜಕೀಯ ಮುಂತಾಗಿ ಎಲ್ಲದರಲ್ಲಿಯೂ ಪ್ರವೀಣನಾಗಿ ನವಾಬನ ಪ್ರೇಮಾದರಗಳಿಗೆ ಪಾತ್ರನಾಗಿ ಕ್ರಮಕ್ರಮವಾಗಿ ಉನ್ನತಿ ಪಡೆದು ಒಂದು ದಿನ ಆದವಾನಿ ನವಾಬ ಸಿದ್ದೀಮಸೂದಖಾನನಿಗೆ ಆಪ್ತ ಸಚಿವನಾಗಿ ಕೀರ್ತಿ ಗಳಿಸಿದನು. ಅನಾಥನಾಗಿದ್ದ ವೆಂಕಣ್ಣ ಗುರುರಾಜರ ಅನುಗ್ರಹದಿಂದ ದಿವಾನ ಸರದೇಶಾಯಿ ವೆಂಕಣ್ಣ ಪಂತನಾಗಿ ಮೆರೆಯಹತ್ತಿದನು.

☆ ☆ ☆ ☆ ☆ ☆

ಇತ್ತ ಕಂದನಾತಿಯಿಂದ ವೆಂಕಣ್ಣನನ್ನು ಆಶೀರ್ವದಿಸಿ ಪ್ರಯಾಣ ಬೆಳೆಸಿದ ಗುರುರಾಜರು ಸಂಚಾರಕ್ರಮದಲ್ಲಿ ಹೋದ ಹೋದಲ್ಲಿ ದೀನ-ದಲಿತ, ಶಿಷ್ಯ-ಭಕ್ತಜನೋದ್ಧಾರ ಕಷ್ಟದಲ್ಲಿರುವವರ, ನೊಂದವರ ಅಧಿವ್ಯಾಧಿ, ಸಂಕಟಗಳ ಪರಿಹಾರ, ಜ್ಞಾನದಾನ, ಧರ್ಮಪ್ರಸಾರ, ಶರಣಾಗತರ ಮನೋರಥಪೂರಣ ಲೋಕಕಲ್ಯಾಣಗಳನ್ನೆಸಗುತ್ತಾ ಶ್ರೀಶೈಲಕ್ಕೆ ಬಂದು ರುದ್ರದೇವರ ದರ್ಶನಮಮಾಡಿ, ಅಲ್ಲಿಂದ ತಿರುಪತಿಗೆ ಬಂದು ಕುಲದೇವ ಶ್ರೀನಿವಾಸನ ದರ್ಶನಮಾಡಿ, ವಿಶೇಷರೀತಿಯಿಂದ, ಸೇವಿಸಿ, ದೇವರ ಅನುಗ್ರಹಪಡೆದು ಅಲ್ಲಿಂದ ಕಂಚಿ, ಅರುಣಾಚಲ, ವೃದ್ಧಾಚಲ ಶ್ರೀಮುಷ್ಣಕ್ಷೇತ್ರಗಳಿಗೆ ದಯಮಾಡಿಸಿ, ಅಲ್ಲಲ್ಲಿ ದೇವರದರ್ಶನ ಸೇವನಾದಿಗಳಿಂದ ಕೃತಾರ್ಥರಾಗಿ ಸಂಚಾರ ಕ್ರಮದಿಂದ ಮತ್ತೆ ಕುಂಭಕೋಣ ಕ್ಷೇತ್ರಕ್ಕೆ ದಯಮಾಡಿಸಿದರು. ಕುಂಭಕೋಣದ ನಾಗರಿಕರು, ಶಿಷ್ಯ, ಭಕ್ತಜನರು ವಿಶೇಷ ವಾದ್ಯವೈಭವ, ಪೂರ್ಣಕುಂಭಗಳೊಡನೆ ಸ್ವಾಮಿಗಳನ್ನು ಸ್ವಾಗತಿಸಿ ಜಯಘೋಷಮಾಡುತ್ತಾ ಮೆರವಣಿಗೆಯಿಂದ ಗುರುವರರನ್ನು ವಿದ್ಯಾಮಠಕ್ಕೆ ಕರತಂದರು. ಶ್ರೀಗಳವರು ಸಕಲರ ಕುಶಲಪ್ರಶ್ನೆಮಾಡಿ ಆನಂದದಿಂದ ಫಲಮಂತ್ರಾಕ್ಷತೆ ದಯಪಾಲಿಸಿ ಆಶೀರ್ವದಿಸಿದರು.

☆ ☆ ☆ ☆ ☆ ☆

ಕೆಲಕಾಲವಾದ ಮೇಲೆ ಸ್ವಾಮಿಗಳವರು ತಮ್ಮ ಅವತಾರಕಾರ್ಯವನ್ನು ಪರಿಸಮಾಪ್ತಿಗೊಳಿಸಲು ನಿಶ್ಚಯಿಸಿ, ಶ್ರೀಮಠಕ್ಕೆ ಕುಂಭಕೋಣದ ದೇವಾಲಯಗಳ

ಮೇಲಿದ್ದ ಅಧಿಕಾರವನ್ನು ಶ್ರೀಕಂಚಿ ಕಾಮಕೋಟ ಪೀಠಾಧೀಶರು ಮತ್ತು ಶ್ರೀರಾಮಾನುಜಯತೀಯಜೀಯರ್‌ಗಳಿಗೆ ವಹಿಸಿಕೊಟ್ಟು, ಸಂಸ್ಕೃತ ವಿದ್ಯಾಪೀಠ, ಶ್ರೀವಿಜಯೀಂದ್ರತೀರ್ಥರ ಬೃಂದಾವನ ಮೇಲ್ವಿಚಾರಣೆಗಳ ಜವಾಬ್ದಾರಿಯನ್ನು ತಮ್ಮ ಪೂರ್ವಾಶ್ರಮ ಬಂಧುಗಳೂ ಶ್ರೀಮಠದ ಆಪ್ತರೂ ಆದ ಅಧಿಕಾರಿಗಳಿಗೆ ವಹಿಸಿ ಎಲ್ಲಿರಿಂದ ಬಿಳ್ಕೊಂಡು ಕುಂಭಕೋಣದಿಂದ ಮಹಾಸಂಸ್ಥಾನದ ಸಮಸ್ತಬಿರುದಾವಲಿ, ಪಂಡಿತ ಮಂಡಲಿಯೊಡನೆ ಹೊರಟು ಹಂಪಿ ಕ್ಷೇತ್ರದಲ್ಲಿರುವ ನವಬೃಂದಾವನ ಗಡ್ಡೆಗೆ ಬಿಜಯಂಗೈದು ಅಲ್ಲಿರುವ ತಮ್ಮ ಮಹಾಸಂಸ್ಥಾನದ ಪೂರ್ವಾಚಾರ್ಯರುಗಳ ಮತ್ತು ಗುರುಗಳಾದ ಶ್ರೀಸುಧೀಂದ್ರತೀರ್ಥರ ಬೃಂದಾವನದರ್ಶನಮಾಡಿ, ಮೂಲರಾಮನ ಪೂಜೆಮಾಡಿ, ಹಸ್ತೋದಕ ಸಮರ್ಪಣೆಮಾಡಿ ಫಲಮಂತ್ರಾಕ್ಷತಾ ಸ್ವೀಕರಿಸಿ ಪರಮಾನಂದ ಭರಿತರಾಗಿ ಅಲ್ಲಿಂದ ಪ್ರಯಾಣ ಬೆಳೆಸಿ ಸಂಚಾರಕ್ರಮದಿಂದ ಆದವಾನಿಗೆ ದಿಗ್ವಿಜಯ ಮಾಡಿದರು.

25. ಮಂತ್ರಾಲಯ ಗ್ರಾಮ ಸಂಪಾದನೆ

ಶ್ರೀರಾಘವೇಂದ್ರ ಸ್ವಾಮಿಗಳು ರಾಜಧಾನಿಗೆ ಬರುವ ವಿಚಾರವರಿತು ದಿವಾನ್ ವೆಂಕಣ್ಣಪಂತ ಸರ್ ದೇಶಾಯಿಯು ಪರಮ ಸಂತೋಷಗೊಂಡು ಅವರನ್ನು ಸ್ವಾಗತಿಸಲು ರಾಜಧಾನಿಯನ್ನು ವೈಭವದಿಂದ ಶೃಂಗರಿಸಿ ಪೂರ್ಣ ಕುಂಭ ವಾದ್ಯ ವೈಭವದೊಡನೆ ಕಾದಿದ್ದು ಗುರುಗಳ ಸವಾರಿ ಚಿತ್ತೈಸಿದ ಕೂಡಲೆ ಸಡಗರ ಸಂಭ್ರಮದಿಂದ ಸ್ವಾಮಿಗಳಿಗೆ ಸಾಷ್ಟಾಂಗವೆರಗಿ ಸ್ವಾಗತಿಸಿ, ಅಲಂಕೃತ ಪಾಲಕಿಯಲ್ಲಿ ಉದ್ಧಾರಕಗುರುಗನ್ನು ಕೂಡಿಸಿ ವಿಜೃಂಭಣೆಯಿಂದ ರಾಜಧಾನಿಯ ನಾಲ್ಕು ಬೀದಿಗಳಲ್ಲಿ ಮೆರವಣಿಗೆಯಿಂದ ಕರತಂದು ತನ್ನ ಅರಮನೆಯಲ್ಲಿ ಬಿಡಾರಮಾಡಿಸಿದನು. ಶ್ರೀಗಳವರು ಕುಶಲಪ್ರಶ್ನೆ ಕಾಲದಲ್ಲಿ 'ದಿವಾನರೇ, ಆರೋಗ್ಯವೇ?' ಎಂದು ನಸುನಗುತ್ತಾ ಕೇಳಲು ವೆಂಕಣ್ಣಪಂತನು 'ಗುರುದೇವ! ತಮ್ಮ ಅನುಗ್ರಹದಿಂದ ಅನಾಥನಾಗಿದ್ದ ನಾನು ಇಂದು ಈ ರಾಜ್ಯದ ದಿವಾನನಾಗಿದ್ದೇನೆ' ಎಂದು ವಿಜ್ಞಾಪಿಸಿ ಪ್ರಾರಂಭದಿಂದ ಎಲ್ಲಾ ವಿಚಾರಗಳನ್ನು ಅರುಹಿದನು. ಶ್ರೀಯವರು ಅವನ ಗುರುಭಕ್ತಿಯಿಂದ ಹರ್ಷಿಸಿದರು. ಮರುದಿನ ವೆಂಕಣ್ಣ ಪಂತನು ಗುರುಗಳಿಗೆ ಪಾದಪೂಜೆ ಭಿಕ್ಷೆಗಳನ್ನೇರ್ಪಡಿಸಿ ಭಕ್ತಿಯಿಂದ ಸೇವಿಸಿದನು.

ನವಾಬ್ ಸಿದ್ದೀ ಮಸೂದ್ ಖಾನನು ತನ್ನ ಪ್ರೀತಿಯ ದಿವಾನನ ಗುರುಗಳು ಬಂದಿರುವುದನ್ನು ಅವನಿಂದ ಅರಿತು ಹರ್ಷಿಸಿ, ವೆಂಕಣ್ಣನಲ್ಲಿ ಅನುಗ್ರಹಮಾಡಿದ ಮಹಾತ್ಮರಾದ ಗುರುಗಳನ್ನು ಪರೀಕ್ಷಿಸಲು ಮದ್ಯಮಾಂಸಗಳನ್ನು ಒಂದು ರಜತತಾಂಬಾಣದಲ್ಲಿಡಿಸಿ ಮೇಲೆ ಕಿಂಕಾಪಿನ ವಸ್ತ್ರವನ್ನು ಹೊದ್ದಿಸಿ ಸೇವಕರಿಂದ ಹೊರಸಿಕೊಂಡು ದಿವಾನ್‌ಪಂತನ ಕೋರಿಕೆಯಂತೆ ಅವನ ಮನೆಗೆ ಗುರುಗಳ ದರ್ಶನಕ್ಕಾಗಿ ಬಂದನು. ಶ್ರೀಮಠದ ಪಂಡಿತರು ನವಾಬನನ್ನು ಗೌರವದಿಂದ ಸ್ವಾಗತಿಸಿ ಗುರುಗಳ ಬಳಿಗೆ ಕರತಂದರು. ಆಸನದಲ್ಲಿ ಮಂಡಿಸಿದ್ದ ತೇಜೋಮೂರ್ತಿಗಳಾದ ಗುರುವರ್ಯರಿಗೆ ನವಾಬ ತನ್ನ ಸಂಪ್ರದಾಯದಂತೆ ನಮಿಸಿ ತಾನು ತಂದಿದ್ದ ಮದ್ಯಮಾಂಸಗಳಿದ್ದ ತಟ್ಟೆಯನ್ನು ಅವರ ಮುಂದಿಡಿಸಿ 'ಗುರುಮಹಾರಾಜ್, ತಮ್ಮ ದೇವರಿಗೆ ನನ್ನ ಕಾಣಿಕೆ ತಂದಿದ್ದೇನೆ. ಸ್ವೀಕರಿಸಬೇಕು'. ಎಂದು ವಿಜ್ಞಾಪಿಸಿ ತನಗಾಗಿ ಸಿದ್ಧಪಡಿಸಿದ್ದ ರತ್ನಕಂಬಳಿಯಮೇಲೆ ಕುಳಿತು ಮುಂದೇನಾಗುವುದೋ ಎಂದು ಕುತೂಹಲದಿಂದ ನೀರೀಕ್ಷಿಸಲಾರಂಭಿಸಿದನು. ಜ್ಞಾನಿಗಳಾದ ಗುರುಗಳು ಅವನ ಅಂತರಂಗವನ್ನರಿತು ನಸುನಕ್ಕು ನವಾಬನ ಕುಶಲಪ್ರಶ್ನೆಮಾಡಿ. 'ನವಾಬರೇ, ನೀವು ಭಕ್ತಿಯಿಂದ ಅರ್ಪಿಸಿದ್ದನ್ನು ನಮ್ಮ ದೇವರು ಹೇಗೆ ಸ್ವೀಕರಿಸಬೇಕೋ ಹಾಗೆ ಸ್ವೀಕರಿಸುವನು' ಎಂದು ಹೇಳಿ ದ್ವಾರಪಾಲಕನಿಂದ ಕಮಂಡಲುವನ್ನು ಪಡೆದು ಆ ಮಂತ್ರೋದಕವನ್ನು ತಟ್ಟೆಯಮೇಲೆ ಪ್ರೋಕ್ಷಿಸಿ, ವಸ್ತ್ರವನ್ನು ತೆಗೆಯುವಂತೆ ಹೇಳಿದರು. ದ್ವಾರಪಾಲಕ ವಸ್ತ್ರವನ್ನು ತೆಗೆದನು. ಆಶ್ಚರ್ಯ! ಅದ್ಭುತ!! ನವಾಬ ತಂದಿದ್ದ ಮದ್ಯಮಾಂಸಗಳು ಹೂವು ಹಣ್ಣು ಹಾಲುಗಳಾಗಿದ್ದವು! ಅದನ್ನು ಕಂಡು ನವಾಬ ಆಶ್ಚರ್ಯ ಚಕಿತನಾದ, ಮನದಲ್ಲಿ ಮಹಾತ್ಮರನ್ನು ಪರೀಕ್ಷಿಸಲು ಸ್ವೀಕಾರಾರ್ಹವಲ್ಲದ್ದನ್ನು ಅರ್ಪಿಸಿ ಅಪರಾಧ ಮಾಡಿದೆನಲ್ಲ. ನನಗೇನು ಕೇಡಾಗುವುದೋ ಎಂದು ಹೆದರಿ ಪಶ್ಚಾತ್ತಪ್ತನಾಗಿ 'ಗುರು ಮಹಾರಾಜ್! ನೀವು ಮಹಾತ್ಮರು, ಜ್ಞಾನಿಗಳು. ನಿಮ್ಮನ್ನು ಪರೀಕ್ಷಿಸಿ ಅಪರಾಧಮಾಡಿದೆ. ಗುರೂಜಿ, ತಾವು ನನ್ನನ್ನು ಮಾಫ್ ಮಾಡಬೇಕು. ''ಎಂದು ವಂದಿಸಿದ, ಸ್ವಾಮಿಗಳು ಮಂದಹಾಸಬೀರಿ ''ನವಾಬರೇ! ನೀವು ಪರೀಕ್ಷಿಸಿದಿರಿ ಎಂದು ನಮಗೆ ಅಸಮಾಧಾನವಿಲ್ಲ. ನಿಮ್ಮಂಥವರು ಪರೀಕ್ಷಿಸಿದವರಲ್ಲವೇ ಹಿಂದೂಧರ್ಮದ, ದೇವರ, ಸಾಧು ಸಂತರ ಮಹಿಮೆ ಬೆಳಕಿಗೆ ಬರುವುದು. ನಮ್ಮ ದೇವರು ನಿಮ್ಮಲ್ಲಿ

ಪ್ರಸನ್ನನಾಗಿದ್ದಾನೆ. ನಿಮಗೆ ಮಂಗಳವಾಗುವುದು ಚಿಂತಿಸಬೇಡಿ' ಎಂದು ಹೇಳಿ ರಾಜಯೋಗ್ಯ ರೀತಿಯಿಂದ ನವಾಬನನ್ನು ಸನ್ಮಾನಿಸಿ ಫಲಮಂತ್ರಾಕ್ಷತೆ ಕರುಣಿಸಿ ಆಶೀರ್ವದಿಸಿದರು. ನವಾಬ ಮತ್ತೆ ಗುರುಗಳ ಕ್ಷಮೆಯಾಚಿಸಿ ಅಪ್ಪಣೆ ಪಡೆದು ಅರಮನೆಗೆ ತೆರಳಿದ.

ಅವನಿಗೆ ತನ್ನ ಕಾರ್ಯದಿಂದ ಮನಸ್ಸಿಗೆ ನೋವಾಗಿತ್ತು. ಪಶ್ಚಾತ್ತಪ್ತನಾದ ಅವನು ಗುರುಗಳು ಮಹಾಮಹಿಮರು. ಅವರ ಅನುಗ್ರಹ ತಾನೂ ಸಂಪಾದಿಸಬೇಕು ಎಂದಾಲೋಚಿಸಿ ವೆಂಕಣ್ಣಪಂತನನ್ನು ಕರೆಸಿಕೊಂಡು ತಾನು ಮಾಡಿದ ತಂತ್ರ, ಗುರುಗಳು ತೋರಿದ ಮಹಿಮೆ ಇತ್ಯಾದಿ ವಿಷಯಗಳನ್ನು ಹೇಳಿ, 'ದಿವಾನ್‌ಜೀ, ನಿಮ್ಮ ಗುರುಗಳು ನಿಜವಾಗಿ ಮಹಾತ್ಮರು! ಅವರನ್ನು ಸಂತೋಷಪಡಿಸಿದರೆ ನನಗೂ ಶ್ರೇಯಸ್ಸಾಗುವುದು. ನಾನು ಅವರಿಗೆ ಒಂದು ಗ್ರಾಮವನ್ನು ದಾನಮಾಡುತ್ತೇನೆ. ನೀವು ಅವರನ್ನು ಒಪ್ಪಿಸಿಕೊಂಡು ಬರಬೇಕು' ಎಂದನು. ವೆಂಕಣ್ಣ ಪಂತನಿಗೆ ಆಶ್ಚರ್ಯಾನಂದಗಳಾದವು. ಗುರುಗಳ ಬಳಿಗೆ ಬಂದು ಅವರಿಂದ ವಿಷಯವರಿತು, ನವಾಬನ ಆಶೆಯನ್ನು ಹೇಳಿದನು. ಗುರುಗಳು "ವೆಂಕಣ್ಣ! ನಮಗೆ ತುಂಗಭದ್ರಾ ತೀರದಲ್ಲಿರುವ ಮಂಚಾಲೆ ಗ್ರಾಮವನ್ನು ಕೊಡಿಸು. ಅದರ ಸಂಪಾದನೆಗಾಗಿಯೇ ನಾವಿಲ್ಲಿಗೆ ಬಂದಿದ್ದೇವೆ. ಅದರ ವಿಚಾರ ಮುಂದೆ ತಿಳಿಸುತ್ತೇವೆ". ಎಂದಾಜ್ಞಾಪಿಸಿದರು. ವೆಂಕಣ್ಣಪಂತ ನವಾಬರಲ್ಲಿಗೆ ಹೋಗಿ ಗುರುಗಳ ಆಶೆಯವನ್ನು ಅರುಹಿದನು. ನವಾಬನು ಈಗಾಗಲೇ ಮಂಚಾಲೆಯನ್ನು ಒಬ್ಬ ಖಾಜಿಗೆ ದಾನಮಾಡಿದ್ದನು. ಈಗೇನು ಮಾಡುವುದೆಂದು ಚಿಂತಿಸಿದನು. ವೆಂಕಣ್ಣಪಂತನು "ಸ್ವಾಮಿ, ಖಾಜಿಗೆ ಬೇರೆ ಎರಡು ಗ್ರಾಮ ಕೊಟ್ಟು ಮಂಚಾಲೆಯನ್ನು ನಮ್ಮ ಗುರುಗಳಿಗೆ ದಾನ ಮಾಡಿರಿ" ಎಂದು ಸಲಹೆ ನೀಡಿದನು. ನವಾಬನು ಖಾಜಿಯನ್ನು ಕರೆಸಿಕೊಂಡು ಅವನಿಗೆ "ವಗರೂರು, ತಿಮ್ಮಾಪುರ" ಎಂಬೆರಡು ಗ್ರಾಮಕೊಟ್ಟು ಒಪ್ಪಿಸಿದನು.

ಮರುದಿನ ನವಾಬನ ಪರವಾಗಿ ವೆಂಕಣ್ಣಪಂತನ ಮನೆಯಲ್ಲೇ ಗುರುಗಳಿಗೆ ಭಿಕ್ಷೆ ಏರ್ಪಾಟಾಯಿತು. ಗುರುಗಳು ಪೂಜಾರಾಧನೆಮಾಡಿ ಭಿಕ್ಷಾಸ್ವೀಕರಿಸಿದಮೇಲೆ ನವಾಬನು ಶ್ರೀರಾಘವೇಂದ್ರ ಗುರುಗಳಿಗೆ "ಮಂತ್ರಾಲಯ" ಗ್ರಾಮವನ್ನು ಸಂತೋಷದಿಂದ ದಾನಮಾಡಿ ಕಾಗದಪತ್ರ ಮಾಡಿಸಿಕೊಟ್ಟು ಧನಕನಕ ವಸ್ತ್ರಾಭರಣಗಳನ್ನು ಗುರುರಾಜರಿಗೆ ಸಮರ್ಪಿಸಿ

ಕೃತಾರ್ಥನಾದನು. ಸ್ವಾಮಿಗಳು ನವಾಬ, ಅವನ ಪರಿವಾರದವರಿಗೆ ಸೂಕ್ತರೀತಿಯಲ್ಲಿ ಗೌರವ ಮಾಡಿ ಫಲಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು. ನವಾಬನು ದಿವಾನ್ ವೆಂಕಣ್ಣಪಂತನನ್ನು ಗುರುಗಳ ಜೊತೆಗೆ ಮಂಚಾಲೆಗೆ ಹೋಗಿ ಗ್ರಾಮವನ್ನು ಅವರಿಗೆ ಸ್ವಾಧೀನಪಡಿಸಿಕೊಟ್ಟು, ಅವರಿಗೆ ಬೇಕಾದ ಅನುಕೂಲ, ಸಹಾಯಮಾಡುವಂತೆ ಆಜ್ಞಾಪಿಸಿದನು. ಮರುದಿನ ಗುರುಗಳು ಮಹಾಸಂಸ್ಥಾನ ದೊಡನೆ ವೆಂಕಣ್ಣಪಂತನನ್ನು ಕರೆದುಕೊಂಡು ಮಂಚಾಲೆಗೆ ದಯಮಾಡಿಸಿದರು. ವೆಂಕಣ್ಣಪಂತ ಗ್ರಾಮವನ್ನು ಗುರುಗಳಿಗೆ ಸ್ವಾಧೀನಪಡಿಸಿಕೊಟ್ಟು, ಗ್ರಾಮಸ್ಥರಿಗೆ, ಗೌಡ-ಶ್ಯಾನುಭೋಗರಿಗೆ ಇನ್ನು ಮುಂದೆ ಗುರುಗಳ ಅಪ್ಪಣೆಯಂತೆ ವರ್ತಿಸಬೇಕೆಂದು ತಾಕೀತು ಮಾಡಿದನು.

26. ಮಂತ್ರಾಲಯದ ಇತಿಹಾಸ

ಒಂದು ದಿನ ವೆಂಕಣ್ಣ ಪಂತ "ಗುರುಗಳೇ, ಬೇಚರಾಕ್ ಗ್ರಾಮವಾದ ಈ ಮಂಚಾಲೆಯನ್ನೇ ಏಕೆ ಅಪೇಕ್ಷಿಸಿದಿರಿ?' ಎಂದು ಕೇಳಿದನು. ಗುರುರಾಜರು ವೆಂಕಣ್ಣ ಪಂತನನ್ನು (ಇಂದು ಗುರುರಾಜರ ಬೃಂದಾವನವಿದ್ದ) ಒಂದು ಸ್ಥಳಕ್ಕೆ ಕರೆದುಕೊಂಡುಹೋಗಿ ನಸುನಗುತ್ತಾ 'ವೆಂಕಣ್ಣ ಇದು ಸಾಮಾನ್ಯ ಗ್ರಾಮವಲ್ಲಪ್ಪ. ಹಿಂದೆ ಇಲ್ಲಿ ಪ್ರಹ್ಲಾದ ರಾಜನು ಅನೇಕ ಯಜ್ಞ ಯಾಗಾದಿಗಳನ್ನು ಮಾಡಿರುವುದರಿಂದ ಇದು ಪಾವನವಾಗಿದೆ. ತ್ರೇತಾಯುಗದಲ್ಲಿ ಸೀತಾದೇವಿಯನ್ನು ಅರಸುತ್ತಾ ಬಂದ ಶ್ರೀರಾಮ-ಲಕ್ಷ್ಮಣರು ಇಲ್ಲಿ ಕೆಲಮುಹೂರ್ತಕಾಲ ವಿಶ್ರಮಿಸಿದರು. ರಾಮ-ಲಕ್ಷ್ಮಣರ ಪಾದಸ್ಪರ್ಶದಿಂದ ಇದು ಪವಿತ್ರವಾಗಿದೆ. ದ್ವಾಪರದಲ್ಲಿ ಇದೇಸ್ಥಳದಲ್ಲಿ (ಈಗ ಗುರುಗಳ ಬೃಂದಾವನ ವಿರುವ ಸ್ಥಳ-ಗ್ರಂಥಕರ್ತಾ) ಅರ್ಜುನ-ಅನುಸಾಲ್ವರಿಗೆ ಯುದ್ಧವಾಗಿ ಅನುಸಾಲ್ವನನ್ನು ಜಯಿಸಲಾಗದಿರಲು ಅರ್ಜುನ ದುಃಖಿತನಾಗಿ ಶ್ರೀಕೃಷ್ಣನನ್ನು ಸ್ಮರಿಸಿದ. ಕೃಷ್ಣ ಅಲ್ಲಿ ಪ್ರತ್ಯಕ್ಷನಾದಾಗ ಅರ್ಜುನ ತನ್ನ ಸಂಕಟ ಹೇಳಿಕೊಂಡನು. ಆಗ ಶ್ರೀಕೃಷ್ಣನು 'ಅರ್ಜುನ! ಅನುಸಾಲ್ವನು ತನ್ನ ಸಾಮರ್ಥ್ಯದಿಂದ ಅಜೇಯನಾಗಿಲ್ಲ. ಅವನ ರಥವು ನಿಂತಸ್ಥಳದಲ್ಲಿ ಹಿಂದೆ ಪ್ರಹ್ಲಾದನು ಅನೇಕ ಯಜ್ಞಗಳನ್ನಾಚರಿಸಿದ್ದ ಯಜ್ಞವೇದಿಕೆ ಇದೆ. ಅದರ ಪ್ರಭಾವದಿಂದ ನೀನವನನ್ನು ಸೋಲಿಸಲಾಗಲಿಲ್ಲ! ನೋಡೀಗ ನನ್ನ

ಯೋಗಮಾಯೆಯನ್ನು!' ಎಂದು ಹೇಳಿ ಕ್ಷಣಮಾತ್ರದಲ್ಲಿ ಅನುಸಾಲ್ವನ ರಥ ಹಿಂದೆ ಹೋಗುವಂತೆ ಮಾಡಿ ಆ ಪವಿತ್ರ ಸ್ಥಳದಲ್ಲಿ ಅರ್ಜುನನ ರಥನಿಲ್ಲಿಸಿ ಯುದ್ಧ ಮಾಡಲು ಹೇಳಿದನು. ಆಗ ಅರ್ಜುನನು ಅನುಸಾಲ್ವನನ್ನು ಸುಲಭವಾಗಿ ಜಯಿಸಿದನು. ಹೀಗೆ ನರ-ನಾರಾಯಣರೆನಿಸಿದ ಅರ್ಜುನ. ಭಗವಾನ್ ಶ್ರೀಕೃಷ್ಣರ ಪಾದರಜಸ್ಸಿನಿಂದ ಈ ಸ್ಥಲವು ಪರಮಪಾವನವಾಗಿದೆ. ಮುಂದೆ ಕರ್ನಾಟಕಸಾಮ್ರಾಜ್ಯಕ್ಕೆ ಸೇರಿದ್ದ ಈ ಗ್ರಾಮವನ್ನು ವಿಜಯನಗರದ ಅರಸರು ನಮ್ಮ ಪೂರ್ವಾಚಾರ್ಯರಾದ ಸ್ರೀವಿಬುಧೇಂದ್ರ ತೀರ್ಥರಿಗೆ ದಾನಮಾಡಿದ್ದರು. ಶ್ರೀವಿಭುಧೇಂದ್ರರು ಈ ಸ್ಥಳದಲ್ಲಿ ತಪಸ್ಸುಮಾಡಿ ಸಿದ್ಧಿಪಡೆದರು. ಶ್ರೀವಿಬುಧೇಂದ್ರರ ತಪಸ್ಸಿನಿಂದಲೂ ಈ ಜಾಗವು ಪವಿತ್ರವಾಗಿದೆ. ನಮ್ಮ ಪೀಠಕ್ಕೆ ನಡೆದುಬಂದ ಗ್ರಾಮವು ವಿಜಯನಗರದ ಪತನಾನಂತರ ಕೈ ತಪ್ಪಿಹೋಯಿತು. ನಮ್ಮದಾಗಿದ್ದ ಈ ಗ್ರಾಮವನ್ನು ಪಡೆಯಬೇಕೆಂದೇ ನಾವಿಲ್ಲಿಗೆ ಬಂದು ಈಗ ಪಡೆದಿದ್ದೇವೆ. ಮುಂದೆ ನಾವು ಯಜ್ಞಕುಂಡವಿರುವ ಈ ಪವಿತ್ರ ಸ್ಥಳದಲ್ಲಿಯೇ ಸಶರೀರರಾಗಿ ಬೃಂದಾವನ ಪ್ರದೇಶಮಾಡಿ ಅನೇಕ ಶತಮಾನಗಳವರೆಗೆ ಜಗತ್ಕಲ್ಯಾಣ, ಭಕ್ತಾನುಗ್ರಹ ಮಾಡಬೇಕೆಂಬುದು ಶ್ರೀ ಹರಿಯ ಸಂಕಲ್ಪವಾಗಿದೆ. ಈ ವಿಚಾರ ರಹಸ್ಯವಾಗಿರಲಿ. ಇಲ್ಲಿ ನಮ್ಮ ವೃಂದಾವನಕ್ಕೆ ಆಲಯವನ್ನು ನಿರ್ಮಿಸಬೇಕು. ನಾವು ಬೃಂದಾವನಸ್ಥರಾಗುತ್ತೇವೆಂದು ಚಿಂತಿಸಬೇಡ. ನಾವು ಜೀವಂತವಾಗಿಯೇ ಇದ್ದು ಅನೇಕ ಶತಮಾನಗಳಕಾಲ ಲೋಕೋದ್ಧಾರ ಮಾಡಬೇಕೆಂದು ಶ್ರೀಹರಿಯ ಆಜ್ಞೆ. ಆದ್ದರಿಂದ ಶ್ರೀ ಹರಿಯ ಆಜ್ಞೆಗೆ ವಿರೋಧಮಾಡಬಾರದು. ದುಃಖಿಸಬಾರದು' ಮುಂತಾಗಿ ಹೇಳಿ ವೆಂಕಣ್ಣ ಪಂತನನ್ನು ಸಮಾಧಾನ ಪಡಿಸಿದರು. ಮರುದಿನ, ಇಂದಿನ ಮಹಾದ್ವಾರದ ಹಳ್ಳದ ಸಮೀಪವಿರುವ ಜಮೀನಿಗೆ ವೆಂಕಣ್ಣನನ್ನು ಕರೆದೊಯ್ದು ಗುರುರಾಜರು ಅಲ್ಲಿರುವ ಒಂದು ಬಂಡೆಯನ್ನು ತೋರಿಸಿ 'ಈ ಬಂಡೆಯ ಮೇಲೆ ಶ್ರೀರಾಮ-ಲಕ್ಷ್ಮಣರು ಏಳು ಮುಹೂರ್ತಕಾಲ ವಿಶ್ರಮಿಸಿದ್ದರು. ಆದ್ದರಿಂದ ಇದು ಪರಮಪಾವನವಾದ ಕಲ್ಲು. ಶ್ರೀಹರಿಯ ಪಾದಸ್ಪರ್ಶ ಪೂತವಾದ ಈ ಬಂಡೆಯಿಂದಲೇ ನಮಗೆ ಬೃಂದಾವನವನ್ನು ಸಿದ್ಧಪಡಿಸಬೇಕೆಂದು' ಅಪ್ಪಣೆಮಾಡಿದರು. ಭೂತ ಭವಿಷ್ಯತ್ ಜ್ಞಾನಸಂಪನ್ನರಾದ ಗುರುಗಳು ಮಹಾಮಹಿಮರೆಂದು ಆನಂದ ತುಂದಿಲನಾದ

ವೆಂಕಣ್ಣಪಂತ ಗುರುಗಳಿಗೆ ಸಾಷ್ಟಾಂಗವೆರಗಿ ಭಕ್ತಿಪುಳಕಿತಗಾತ್ರನಾಗಿ 'ಗುರುದೇವರ ಆಜ್ಞೆಯೆಂತೆಯೇ ವರ್ತಿಸುತ್ತೇನೆ' ಎಂದು ವಿಜ್ಞಾನಿಸಿ ಗುರುಗಳೊಡನೆ ಮಂಚಾಲೆಗೆ ಬಂದು ಕಾರ್ಯ ತತ್ಪರನಾದನು.

ಶ್ರೀಗಳವರು ತಮ್ಮ ಕೊನೆಯ ಸಂಚಾರ ಕೈಗೊಂಡು ಹೊರಟರು. ಇತ್ತ ವೆಂಕಣ್ಣಪಂತನು ಶ್ರೀಯವರ ಅಪ್ಪಣೆಯಂತೆ ಶ್ರೀವೆಂಕಟೇಶ್ವರದೇವರಗುಡಿ, ಶ್ರೀಮಠದವರು, ಕರ್ಮಕಾರರು, ಪಂಡಿತರು, ವಿದ್ಯಾರ್ಥಿಗಳು ಇರಲು ಅನುಕೂಲವಾಗುವಂತೆ ಕಟ್ಟಡಗಳನ್ನು ನಿರ್ಮಾಣಾಡಿಸಿ, ಬೃಂದಾವನವನ್ನು ಸಿದ್ಧಪಡಿಸಿ ಶ್ರೀಗುರುರಾಜರ ಬೃಂದಾವನ ಸ್ಥಾಪಿಸಲು ಹನ್ನೆರಡು ಕಂಬಗಳಿಂದ ಕೂಡಿದ ಗರ್ಭಾಲಯ ಮುಂತಾದವುಗಳನ್ನು ಸಿದ್ಧಪಡಿಸಿ ಗುರುಗಳ ಆಗಮನವನ್ನು ನೀರಿಕ್ಷಿಸಹತ್ತಿದನು. ಶ್ರೀರಾಯರು ತಮ್ಮ ಸಂಚಾರವನ್ನು ಪೂರೈಸಿ ಮಂಚಾಲೆಗೆ ದಯಮಾಡಿಸಿದರು. ವೆಂಕಣ್ಣ ಪಂತಗುರುಗಳನ್ನು ಭಕ್ತಿಯಿಂದ ಸ್ವಾಗತಿಸಿ ತಾನು ನೆರವೇರಿಸಿರುವ ಕಟ್ಟಡ, ದೇವಾಲಯಾದಿ ನಿರ್ಮಾಣಗಳ ವಿಚಾರ ವಿಜ್ಞಾಪಿಸಿ ಗುರುಗಳಿಗೆ ಎಲ್ಲವನ್ನೂ ತೋರಿಸಿದ. ಶ್ರೀಯವರಿಗೆ ಸಂತೋಷವಾಯಿತು. ಗುರುಗಳು ಒಂದು ಶುಭಮೂರ್ಹತದಲ್ಲಿ ಕುಲದೇವನಾದ ಶ್ರೀವೆಂಕಟೇಶ್ವರನನ್ನು ಪ್ರತಿಷ್ಠಾಪಿಸಿ ಅಲ್ಲಿಯೇ ಬಿಡಾರ ಮಾಡಿದರು, ಮಠದ ಆತ್ಮೀಯರು, ಪಂಡಿತರು, ಕರ್ಮಕಾರಕರುಗಳಿಗೆ ಮನೆಗಳನ್ನು ಕೊಟ್ಟು, ಅಲ್ಲಿ ಅವರು ನಿರಾಲೋಚನೆಯಿಂದಿರುವಂತೆ ವ್ಯವಸ್ಥೆಮಾಡಿ, ತುಂಗಭದ್ರಾನದಿಯ ಉತ್ತರ ಭಾಗದಲ್ಲಿರುವ ಗಣಧಾಳು ಕ್ಷೇತ್ರಕ್ಕೆ ದಯಮಾಡಿಸಿ, ಶ್ರೀಪಂಚಮುಖಿ ಪ್ರಾಣದೇವರ ಸನ್ನಿದಿಯಲ್ಲಿ ಕೆಲಕಾಲ ತಪೋನಿರತರಾಗಿ ದೇವರ ಅನುಗ್ರಹ ಸಂಪಾದಿಸಿಕೊಂಡು ಮಂತ್ರಾಲಯಕ್ಕೆ ಆಗಮಿಸಿ ಪಾಠ ಪ್ರವಚನ, ದೇವಪೂಜಾರತರಾದರು.

27. ಸನ್ಯಾಸಪ್ರದಾನ–ಪಟ್ಟಾಭಿಷೇಕ

ಶ್ರೀರಾಘವೇಂದ್ರಗುರುಗಳು ಸಂಚಾರದಿಂದ ಮರಳಿಬಂದಮೇಲೆ ತಮ್ಮ ಪೂರ್ವಾಶ್ರಮದ ಅಣ್ಣಂದಿರಾದ ಶ್ರೀಗುರುರಾಜಾಚಾರ್ಯರ ಪೌತ್ರರಾದ, ತಮ್ಮಲ್ಲೇ ಸಕಲಶಾಸ್ತ್ರಗಳನ್ನು ಓದಿ ಶ್ರೇಷ್ಠ ಪಂಡಿತರಾದ ಶ್ರೀವೆಂಕಣ್ಣಾಚಾರ್ಯರಿಗೆ ಸಕಲಸಜ್ಜನರ, ಆಪ್ತೇಷ್ಟರ ಬಂಧುಗಳ ಪಂಡಿತಮಂಡಲಿಯ ಮತ್ತು ದಿವಾನ್

ವೆಂಕಣ್ಣಪಂತರ ಸಮಕ್ಷ 'ತಮ್ಮ ಉತ್ತರಾಧಿಕಾರಿ'ಗಳೆಂದು ಘೋಷಣಪೂರ್ವಕ ತುರೀಯಾಶ್ರಮ ಸ್ವೀಕಾರಕ್ಕೆ ಫಲಮಂತ್ರಾಕ್ಷತೆ ಅನುಗ್ರಹಿಸಿದರು. ಮರುದಿನ ಶ್ರೀವೆಂಕಣ್ಣಾಚಾರ್ಯರು ಮಹಾಸಂಸ್ಥಾನಪದ್ಧತಿ, ವೈದಿಕವಿಧಿ ಪೂರ್ವಕ ಸನ್ಯಾಸಸ್ವೀಕರಿಸಿ ಬಂದು ಶ್ರೀರಾಘವೇಂದ್ರ ಗುರುಗಳಿಗೆ ಪಾದಪೂಜೆಮಾಡಿ ನಮಿಸಿದರು. ಶ್ರೀಗುರುರಾಜರು ಅವರಿಗೆ ಮಂತ್ರಗಳನ್ನು ಉಪದೇಶಿಸಿ ವೇದಘೋಷ ವಾದ್ಯಘೋಷಗಳಾಗುತ್ತಿರಲು ಅವರನ್ನು ಶ್ರೀಮಧ್ವಾಚಾರ್ಯರ ವಿದ್ಯಾಸಾಮ್ರಾಜ್ಯ ಸಿಂಹಾಸನದಲ್ಲಿ ಕೂಡಿಸಿ "ಶ್ರೀಯೋಗೀಂದ್ರತೀರ್ಥರು" ಎಂಬ ಆಶ್ರಮ ನಾಮಕರಣ ಪೂರ್ವಕವಾಗಿ ಸಾಮ್ರಾಜ್ಯ ಪಟ್ಟಾಭಿಷೇಕಮಾಡಿ ಅನುಗ್ರಹಾಶೀರ್ವಾದಮಾಡಿದರು. ನೂತನ ಗುರುಗಳಾದ ಶ್ರೀಯೋಗಿಂದ್ರತೀರ್ಥರು ಪೂಜ್ಯಗುರುಗಳಾದ ಶ್ರೀರಾಘವೇಂದ್ರ ತೀರ್ಥರಿಂದ ಮಹಾಸಂಸ್ಥಾನದ ಇತಿಹಾಸ, ಪರಂಪರೆ, ಸಂಪ್ರದಾಯಾದಿಗಳನ್ನು ಉಪದೇಶಪಡೆದು ಗುರುಗಳ ಸೇವೆ ಮಾಡುತ್ತಾ ಅವರ ಪ್ರೀತಿ, ವಾತ್ಸಲ್ಯ, ಪೂರ್ಣಾನುಗ್ರಹಗಳಿಗೆ ಪಾತ್ರರಾದರು.

28. ಶ್ರೀಮಂತ್ರಾಲಯಾಂಬಿಕೆಯದರ್ಶನ ವರಪ್ರಾಪ್ತಿ

ಶಾಲೀವಾಹನ ಶಕೆ 1593ನೆಯ ವಿರೋಧಿಕೃತ್ ಸಂವತ್ಸರವು (1671) ಬಂದಿತು. ಶ್ರೀಮಂತ್ರಾಲಯ ಮುನೀಂದ್ರರು ವರಕುಮಾರಕರಾದ ಶ್ರೀ ಯೊಗೀಂದ್ರ ತೀರ್ಥರ ಜೊತೆ ಮಂತ್ರಾಲಯದಲ್ಲಿ ಚಾತುರ್ಮಾಸ್ಯ ವ್ರತಕ್ಕೆ ಕುಳಿತರು.

ಒಂದು ದಿನ ಒಬ್ಬ ದ್ವಾರಪಾಲಕನೊಡನೆ ತಾವೊಬ್ಬರೇ ಯಜ್ಞಕುಂಡದ ಸನಿಹಕ್ಕೆ ಬಂದು ದ್ವಾಪಾಲಕನನ್ನು ದೂರಕಳಿಸಿ, ಅಲ್ಲಿ ಸನ್ನಿಹಿತಳಾಗಿದ್ದ ಶ್ರೀದುರ್ಗಾದೇವಿ (ಮಂತ್ರಾಲಯಾಂಬಿಕೆ)ಯನ್ನು ವಿವಿಧ ವೇದಮಂತ್ರಗಳಿಂದ ಸ್ತುತಿಸಿದರು. ಗುರುರಾಜರ ಭಕ್ತಿ-ಸ್ತುತಿಗೆ ಸಂತುಷ್ಟಳಾಗಿ, ಸರ್ವಾಲಂಕಾರ ಭೂಷಿತಳಾದ ದೇವಿಯಲ್ಲಿ ತಾವು ಯಜ್ಞಕುಂಡವಿರುವ ಸ್ಥಳದಲ್ಲಿ ನಿರ್ಮಿತವಾಗಿರುವ ಬೃಂದಾವನದಲ್ಲಿ ಸಶರೀರರಾಗಿ ಪ್ರವೇಶಮಾಡಿ, ಏಳುನೂರು ವರ್ಷಗಳ ಕಾಲ ಜಗತ್ಕಲ್ಯಾಣ, ಭಕ್ತಜನರ ಉದ್ಧಾರ, ಮನೋಭೀಷ್ಟಪೂರಣ, ವೈದಿಕ ಸತ್ತತ್ವ ಸ್ಥಾಪನ ಮಾಡಲು ಆಶಿಸಿರುವುದಾಗಿಯೂ, ಅದಕ್ಕಾಗಿ ಶ್ರೀಹರಿಯನ್ನು ಕುರಿತು ತಪಸ್ಸು ಮಾಡುವುದಾಗಿಯೂ, ವಿಜ್ಞಾಪಿಸಿ "ದೇವಿ,

ಶ್ರೀ ಮಾಧವಮನೋಹಾರಿಣಿ! ನೀನು ಸರ್ವದಾ ನನ್ನನ್ನು ರಕ್ಷಿಸುತ್ತಾ ನಾನು ಕೈ ಗೊಂಡಿರುವ ಲೋಕಹಿತಕಾರ್ಯವು ಯಶಸ್ವಿಯಾಗುವಂತೆಮಾಡಿ, ನನ್ನಿಂದ ಜಗತ್ಕಲ್ಯಾಣ ಮಾಡಿಸಿ ಪೊರೆಯಬೇಕಮ್ಮ!' ಎಂದು ಪ್ರಾರ್ಥಿಸಿದರು. ದೇವಿಯು ಮಂದಹಾಸಬೀರಿ 'ವತ್ಸ! ನನ್ನ ಪತಿಯೇ ಸರ್ವದಾ ನಿನ್ನಲ್ಲಿ ಪಂಚರೂಪಗಳಿಂದಿದ್ದು ಪೊರೆಯಲು ಟೊಂಕಕಟ್ಟಿ ನಿಂತಿರುವಾಗ ನಿನಗೆ ಚಿಂತೆಯೇಕೆ? ನಾನು ನಿನ್ನ ಎಲ್ಲ ಅಭಿಷ್ಟಗಳನ್ನು ಪೂರ್ಣಗೊಳಿಸುತ್ತೇನೆ. ನನ್ನ ಗುರುತಾಗಿ ನಿನ್ನಾಲಯದ (ಬೃಂದಾವನ) ಎದುರು ಮೇಷಮಸ್ತಕ ಚಿನ್ಹೆಯನ್ನು ಸ್ಥಾಪಿಸು. ನಾನು ಯಾವ ಕ್ಷುದ್ರ ಶಕ್ತಿಗಳೂ ಇಲ್ಲಿ ಬರದಂತೆ ಹೊಡೆದೋಡಿಸಿ ನಿನ್ನನ್ನು ರಕ್ಷಿಸುವೆನು'. ಎಂದು ಅಭಯ-ವರದಾನಮಾಡಿ ಈಗಿರುವ ಮಂತ್ರಾಲಯಮ್ಮನ ಗುಡಿಯ ಸ್ಥಳಕ್ಕಾಗಮಿಸಿ ಶಿಲಾರೂಪತಾಳಿ ಅದೃಶ್ಯಳಾದಳು. ದೇವಿಯ ದರ್ಶನ-ವರಗಳಿಂದ ಧನ್ಯರಾದ ಗುರುಗಳು ಶ್ರೀ ಮಠಕ್ಕೆ ದಯಮಾಡಿದರು.

29. ಸಶರೀರ ಬೃಂದಾವನ ಪ್ರವೇಶ

ಶ್ರೀ ಶಾಲೀವಾಹನ ಶಕೆ 1593ನೆಯ ವಿರೋಧಿಕೃನ್ನಾಮ ಸಂವತ್ಸರದ (ಕ್ರಿ.ಶ. 1671ನೇ ಆಗಸ್ಟ್ ಮಾಹೆ) ಶ್ರಾವಣ ಕೃಷ್ಣ ಬಿದಿಗೆ ಶುಕ್ರವಾರ ಶ್ರೀ ಮಂತ್ರಾಲಯದಲ್ಲಿ ಅಪೂರ್ವಜನಸಂದಣಿ. ತುಂಗಭದ್ರಾನದಿಯ ದಡದಲ್ಲಿರುವ ವಿಶಾಲವಾದ ಬಯಲು ಪ್ರದೇಶದಲ್ಲಿ ನಿರ್ಮಿತವಾದ ಹನ್ನೆರಡು ಸ್ತಂಭಗಳ ದಿವ್ಯ ಶಿಲಾಮಂಟಪವು (ಗರ್ಭಾಲಯ) ದ್ವಾದಶಾಕ್ಷರ ಮಂತ್ರ ಪ್ರತಿಪಾದ್ಯನಾದ ಶ್ರೀವಾಸುದೇವನ ವಿಜಯಸ್ತಂಭದಂತೆ ಶೋಭಿಸುತ್ತಿದೆ. ಗರ್ಭಾಲಯದ ನಾಲ್ಕೂ ಪಾರ್ಶ್ವಗಳಲ್ಲಿ ಹಾಕಿರುವ ವಿಸ್ತಾರವಾದ ಚಪ್ಪರವು ತಳಿರು--ತೋರಣ ಪುಷ್ಪಗುಚ್ಛಗಳಿಂದ ಅಲಂಕೃತವಾಗಿದೆ. ಸಹಸ್ರಾರು ಜನರು ಶ್ರೀಗುರುರಾಜರು ಸಶರೀರವಾಗಿ ಬೃಂದಾವನವನ್ನು ಪ್ರವೇಶಿಸುವ ಅದ್ಭುತ ಮಂಗಳ ಸಮಾರಂಭವನ್ನು ನೋಡಿ ಧನ್ಯರಾಗಲು ಆತುರ-ಕಾತುರಗಳಿಂದ ಕಾದು ನಿಂತಿದ್ದಾರೆ. ಸಕಲಬಿರುದುಬಾವಲಿ, ವೇದಪಾರಾಯಣ, ವಾದ್ಯಗೋಷ ಗಳೊಡನೆ ಶ್ರೀರಾಘವೇಂದ್ರತೀರ್ಥ ಗುರುಸಾರ್ವಭೌಮರು ದೇವರನ್ನು (ಮೂಲರಾಮ ದೇವರಪೆಟ್ಟಿಗೆಯನ್ನು) ಮುಂದೆ ಮಾಡಿಕೊಂಡು ಬಂದು ದೇವರಪೆಟ್ಟಿಗೆಯನ್ನು ಉಚ್ಚಪೀಠದಲ್ಲಿಮಂಡಿಸಿ, ವಿದ್ಯಾಸಿಂಹಾಸನದಲ್ಲಿ ಕುಳಿತು,

ಶ್ರೀಯೋಗೀಂದ್ರತೀರ್ಥರಿಗೆ ಮಹಾಸಂಸ್ಥಾನವನ್ನು ಒಪ್ಪಿಸಿಕೊಟ್ಟು, ಸೂಕ್ತ ರೀತಿಯಲ್ಲಿ ಉಪದೇಶಿಸಿದರು. ಪುರೋಹಿತರು ಶ್ರೀಗಳವರಿಗೆ ನಮಸ್ಕರಿಸಿ ಮುಹೂರ್ತವು ಸಮಿಪಿಸಿತೆಂದು ವಿಜ್ಞಾಪಿಸಿದರು. ಶ್ರೀಗುರುರಾಜರು ಆಲಯವನ್ನು ಪ್ರದಕ್ಷಿಣಾಕಾರವಾಗಿ ಬಳಸಿಬಂದು ಬೃಂದಾವನವಾಗಲಿರುವ ಸ್ಥಳದ ಮೆಟ್ಟಲುಗಳನ್ನೇರಿ ನಿಂತು ಶ್ರೀಯೋಗೀಂದ್ರತೀರ್ಥರಿಗೆ ತಾವು ಮೆಟ್ಟಿದ್ದ ಪರಮಪಾವನ ಪಾದುಕೆಗಳನ್ನು ಅನುಗ್ರಹಿಸಿ, 'ಪ್ರತಿದಿನ ತಮ್ಮ ಪಾದುಕಾಪೂಜೆಮಾಡುತ್ತಾ ಮಹಾಸಂಸ್ಥಾನವನ್ನಾಳಬೇಕೆಂದು ಆಜ್ಞಾಪಿಸಿ, ಅಲ್ಲಿ ನೆರೆದಿದ್ದ ಸಹಸ್ರಾರು ಜನರಿಗೆ ಶ್ರೀವಿಷ್ಣು ಸರ್ವೋತ್ತಮತ್ವಾದಿ ಸತ್ತತ್ವ, ಧರ್ಮ, ಸದಾಚಾರ, ಭಾಗವತಧರ್ಮ ರಹಸ್ಯಗಳನ್ನು ಬೋಧಿಸಿದರು. ಸಮಸ್ತಜನರು ಜಯಘೋಷಮಾಡುತ್ತಾ 'ಜಗದ್ವಂದ್ಯ ಜಗದ್ಗುರುಗಳು, ಭಕ್ತವತ್ಸಲರು ಬೃಂದಾವನ ಪ್ರವೇಶಮಾಡುವರಲ್ಲಾ, ನಮಗಿನ್ನ್ಯಾರು ಗತಿ' ಎಂದು ದುಃಖಿಸುತ್ತಿರಲು, ಶ್ರೀಗುರುರಾಜರು ಮಂದಹಾಸ ಬೀರಿ ''ಧರ್ಮಾಭಿಮಾನಿಗಳಾದ ಗುರುಭಕ್ತರೇ! ನೀವು ದುಃಖಿಸಬಾರದು. ನಾವು ಈ ಬೃಂದಾವನದಲ್ಲಿ ಏಳುನೂರು ವರ್ಷಗಳಕಾಲ ಜೀವಂತವಾಗಿದ್ದು, ಲೋಕಕಲ್ಯಾಣಕ್ಕಾಗಿ ಶ್ರೀಕಮಲಾಪತಿಯ ತಪಸ್ಸಿನಲ್ಲಿ ನಿರತರಾಗಿರುತ್ತೇವೆ. ಮತ್ತು ನಮ್ಮನ್ನಾಶ್ರಯಿಸಿ ಬಂದ ಭಕ್ತರ ಕಷ್ಟಗಳನ್ನು ಕಳೆದು ಮನೋಭೀಷ್ಟಗಳನ್ನು ಶ್ರೀಹರಿವಾಯುಗಳ ದಯದಿಂದ ಕರುಣಿಸುತ್ತೇವೆ. ನಿಮಗೆ ಮಂಗಳವಾಗಲಿ' ಎಂದಾಶೀರ್ವದಿಸಿ ಶ್ರೀಗುರುಸಾರ್ವಭೌಮರು ಬೃಂದಾವನವನ್ನು ಪ್ರವೇಶಿಸಿ ಯೋಗಾಸನಸ್ಥರಾಗಿ ಪ್ರಣವ ಜಪಮಾಡುತ್ತಾ ಕುಳಿತರು. ವಾದ್ಯಗಳು ಮೊಳಗಿದವು, ಜನರು ಜಯ ಜಯಕಾರ ಮಾಡುತ್ತಿರಲು ಶ್ರೀ ಗುರುಗಳು ಕುಳಿತ ಭಾಗವನ್ನು ಮೇಲೆ ರಜತ ಫಲಕದಿಂದ ಮುಚ್ಚಿ ಅದರ ಮೇಲೆ ಏಳುನೂರು ಶಾಲಿಗ್ರಾಮಗಳನ್ನಿರಿಸಿ ಬೃಂದಾವನವನ್ನು ಜೋಡಿಸಲಾಯಿತು. ಶ್ರೀಗುರುಸಾರ್ವಭೌಮರು ಜನರ ದೃಷ್ಟಿಗೆ ಅಗೋಚರರಾದರು. ಶ್ರೀಯೋಗೀಂದ್ರತೀರ್ಥರು ಅಂದೇ ಗುರುಗಳ ಅಪ್ಪಣೆಯಂತೆ ಶ್ರೀಮಂತ್ರಾಲಯಮುನೀಂದ್ರರ ಮಹಾಸಮಾರಾಧನೆಯನ್ನು ಭಕ್ತಿಶ್ರದ್ಧಾರಗಳಿಂದ ನೆರವೇರಿಸಿ ಶ್ರೀಮೂಲರಾಮ-ದಿಗ್ವಿಜಯರಾಮ-ಜಯರಾಮದೇವರುಗಳನ್ನು ಬೃಂದಾವನದ ಮೇಲಿಟ್ಟು ಕನಕಾಭಿಷೇಕಮಾಡಿ ಮಹಾಮಂಗಳಾರತಿಮಾಡಿ ಗುರುಗಳ ಮೇಲೆ ಚರಮಶ್ಲೋಕವನ್ನು ರಚಿಸಿ ಪಠಿಸಿ ಸಮರ್ಪಿಸಿದರು.

"ದುರ್ವಾದಿಧ್ವಾಂತರವಯೇ ವೈಷ್ಣವೇಂದೀವರೆಂದವೇ।
ಶ್ರೀರಾಘವೇಂದ್ರಗುರವೇ ನಮೋಽತ್ಯಂತದಯಾಲವೇ॥ "

ಇಂತು ಜಗನ್ಮಾನ್ಯ ಜಗದ್ಗುರುಗಳಾದ ಶ್ರೀ ರಾಘವೇಂದ್ರತೀರ್ಥ ಗುರು ಸಾರ್ವಭೌಮರು ಕ್ರಿ.ಶ. 1621 ರಿಂದ 1671ರ ವರೆಗೆ ಐವತ್ತು ವರ್ಷಗಳ ಕಾಲ ಶ್ರೀಹಂಸನಾಮಕ ಪರಮಾತ್ಮ ಪ್ರವರ್ತಿತ ಪರಮಹಂಸವಂಶಭೂಷಣರಾಗಿ, ಜಗದ್ಗುರು ಶ್ರೀಮಧ್ವಾಚಾರ್ಯರ ವೇದಾಂತಸಾಮ್ರಾಜ್ಯದಿಗ್ವಿಜಯ ವಿದ್ಯಾಸಿಂಹಾಸನದಲ್ಲಿ ವಿರಾಜಿಸಿ, ಪಾಠ ಪ್ರವಚನ, ವಾದಿದಿಗ್ವಿಜಯ, ದ್ವೈತ ಸಿದ್ಧಾಂತಸ್ಥಾಪನೆ, ಅಪೂರ್ವಗ್ರಂಥರಚನೆ, ತೀರ್ಥ-ಕ್ಷೇತ್ರ ಸಂಚಾರ, ಶಿಷ್ಯ ಭಕ್ತಜನೋದ್ಧಾರ, ಲೋಕಕಲ್ಯಾಣಾಸಕ್ತರಾಗಿ, ರಾಜಾಧಿರಾಜರಿಂದ ಮಾನಿತರಾಗಿ ಜಗದ್ವಂದ್ಯರಾಗಿ, ತಮ್ಮ ಅವತಾರ ಕಾರ್ಯವನ್ನು ಪರಿಸಮಾಪ್ತಿಗೊಳಿಸಿ, ಸಶರೀರವಾಗಿ ಬೃಂದಾವನಪ್ರದೇಶಮಾಡಿ, ಲೋಕದಜನರ ದೃಷ್ಟಿಗೆ ಅಗೋಚರರಾಗಿ ಅಮರರಾದರು.

ಶ್ರೀಮಂತ್ರಾಲಯ ಮುನೀಂದ್ರರು ಸರ್ವರಿಗೂ ಮಂಗಳಗಳನ್ನು ಕರುಣಿಸಿ ಕಾಪಾಡಲಿ.

॥ ತಥಾಸ್ತು ॥

30. ಶ್ರೀಗುರುರಾಜರ ಗ್ರಂಥಗಳು

ಶ್ರೀರಾಘವೇಂದ್ರಸ್ವಾಮಿಗಳು ವೇದ, ಉಪನಿಷತ್, ಭಾಗವತ-ಭಾರತ, ಪುರಾಣಗಳು, ವಿವಿಧ ಶಾಸ್ತ್ರಗಳು, ಮುಖ್ಯವಾಗಿ ಪ್ರಸ್ಥಾನತ್ರಯಗಳಮೇಲೆ ಅನಿತರ ಸಾಧಾರಣಗಳಾದ ಗ್ರಂಥರತ್ನಗಳನ್ನು ರಚಿಸಿ ವೈದಿಕವಾಙ್ಮಯಕ್ಕೆ ಮಹೋಪಕಾರ ಮಾಡಿದ್ದಾರೆ. ಅವರು ರಚಿಸಿರುವ ಗ್ರಂಥಗಳು ಹೀಗಿವೆ-

ಶ್ರುತಿಪ್ರಸ್ಥಾನ : 1-3 ಋಕ್-ಯಜುಸ್ಸಾಮವೇದಗಳಿಗೆ ವಿವೃತಿಗಳು 4. ಮಂತ್ರಾರ್ಥಮಂಜರೀ, 5-9. ಪುರುಷಸೂಕ್ತಾದಿ ಪಂಚಸೂಕ್ತಗಳಿಗೆ ವ್ಯಾಖ್ಯಾನ, 10-19. ದಶೋಪನಿಷತ್ ಖಂಡಾರ್ಥಗಳು-ಹೀಗೆ ಶ್ರುತಿಪ್ರಸ್ಥಾನದಮೇಲೆ ಹತ್ತೊಂಭತ್ತು ಅನ್ಯಾದೃಶಗ್ರಂಥಗಳು.

ಗೀತಾಪ್ರಸ್ಥಾನ : 20 ಗೀತಾರ್ಥಸಂಗ್ರಹ: (ಗೀತಾವಿವೃತಿ) 21 ಗೀತಾಭಾಷ್ಯ ಪ್ರಮೇಯದೀಪಿಕಾ ಟಿಪ್ಪಣೀ. 22, ಗೀತಾತಾತ್ಪರ್ಯಟೀಕಾ ಟಿಪ್ಪಣೀ. ಇಂತು ಗೀತೆಯಮೇಲೆ ಮೂರು ಅಪೂರ್ವಕೃತಿಗಳು.

ಸೂತ್ರಪ್ರಸ್ಥಾನ : 23. ತಂತ್ರದೀಪಿಕಾ, 24. ನ್ಯಾಯಮುಕ್ತಾವಲಿ; 25 ಬ್ರಹ್ಮಸೂತ್ರಭಾಷ್ಯಟೀಕಾ ತತ್ವಪ್ರಕಾಶಿಕಾ "ಭಾವದೀಪ", 26, ಅಣುಭಾಷ್ಯಟೀಕೆ "ತತ್ವಮಂಜರೀ", 27. ಅನುವ್ಯಾಖ್ಯಾನ ಟೀಕಾ ಶ್ರೀಮನ್ನ್ಯಾಯಸುಧಾಕ್ಕೆ "ಪರಿಮಲಃ" ಇಂತು ಸೂತ್ರಗಳ ಮೇಲೆ ಐದು ಗ್ರಂಥರತ್ನಗಳು.

ಇತರ ಗ್ರಂಥಗಳು : 28–37. ದಶಪ್ರಕರಣಟೀಕಾ-ಟಿಪ್ಪಣಿಗಳು, 38. ಚಂದ್ರಿಕಾ "ಪ್ರಕಾಶ", 39. ತರ್ಕತಾಂಡವವ್ಯಾಖ್ಯಾನ, 40. ವಾದಾವಲೀ ವ್ಯಾಖ್ಯಾನ, 41. ಪ್ರಮಾಣಪದ್ಧತಿವ್ಯಾಖ್ಯಾನ, 42. ಶ್ರೀರಾಮ ಚಾರಿತ್ರಮಂಜರೀ, 43. ಶ್ರೀಕೃಷ್ಣಚಾರಿತ್ರಮಂಜರೀ, 44. ಮಹಾಭಾರತ ತಾತ್ಪರ್ಯನಿರ್ಣಯ ಭಾವಸಂಗ್ರಹಃ, 45. ಪ್ರಮೇಯನವಮಾಲಿಕಾ (ಅಣುಮಧ್ವವಿಜ)ಯ ವ್ಯಾಖ್ಯಾನ (ಇದು ಪೂರ್ವಾಶ್ರಮದಲ್ಲಿ ರಚಿಸಿದ್ದು), 46. ಪ್ರಾತಸ್ಸಂಕಲ್ಪಗದ್ಯಮ್, 47. ಭಟ್ಟಸಂಗ್ರಹಃ 48. ಪ್ರಮೇಯಸಂಗ್ರಹಃ –ಹೀಗೆ ಗುರುರಾಜರು ಅಸಾಧಾರಣಗಳಾದ ನಲವತ್ತೆಂಟು ಗ್ರಂಥರತ್ನಗಳನ್ನು ವಿರಚಿಸಿ, ವೈದಿಕ ಸಾಹಿತ್ಯ, ದ್ವೈತಸಿದ್ಧಾಂತ ಭಂಡಾರಗಳಿಗೆ ಶ್ರೇಷ್ಠ ಕೊಡುಗೆ ಗಳನ್ನಿತ್ತು, ಸರ್ವವಿದ್ವಜ್ಜನರಲ್ಲಿ ಮಹೋಪಕಾರಮಾಡಿದ್ದಾರೆ. ಭಾರತೀಯ ವಾಙ್ಮಯ ಪ್ರಪಂಚದಲ್ಲಿ ಶ್ರೀರಾಘವೇಂದ್ರಸ್ವಾಮಿಗಳವರಂತೆ ಸೇವೆಸಲ್ಲಿಸಿದವರು ಬೇರೊಬ್ಬರಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದು.

31. ಶ್ರೀಗುರುರಾಜರ ಉಪಕಾರ

ಶ್ರೀಮಂತ್ರಾಲಯದ ಮುನಿಂದ್ರರು ಜಗತ್ತಿನಜನತೆಗೆ ಮಾಡಿರುವ ಉಪಕಾರ ಬಹುಮುಖವಾಗಿದೆ. ಶ್ರೀಸ್ವಾಮಿಗಳ ಹಿಂದಿನ ಎಲ್ಲ ಅವತಾರಗಳಲ್ಲೂ (ಪ್ರಹ್ಲಾದ-ಬಾಹ್ಲೀಕ-ವ್ಯಾಸರಾಜ) ಹಾಗೂ ಇಂದಿನ ರಾಘವೇಂದ್ರಾ ಅವತಾರದಲ್ಲೂ ಒಂದೇ ಬಗೆಯವ್ಯಾಪಾರ, ನಡತೆ, ಮಹಿಮೆ, ಶ್ರೀಹರಿವಾಯು ಭಕ್ತಿ, ಲೋಕಹಿತಾಕಾಂಕ್ಷೆ, ಸಜ್ಜನೋದ್ಧಾರ, ದೀನ-ದಲಿತ ಜನರಲ್ಲಿ ಅನುಕಂಪ, ಭಕ್ತವಾತ್ಸಲ್ಯ, ತತ್ವದೀಕ್ಷೆ, ಲೋಕಕಲ್ಯಾಣ ಮುಂತಾದ ಅವರ ವ್ಯಕ್ತಿತ್ವದ

ಬಹುಮುಖಗಳನ್ನು ಅವರ ಎಲ್ಲ ಅವತಾರಗಳ ವಿವೇಚನೆಯಿಂದ ಮನಗಾಣಬಹುದಾಗಿದೆ. ಎಲ್ಲ ಅವತಾರಗಳಲ್ಲೂ ಶ್ರೀಹರಿಭಕ್ತಿ, ಭಾಗವತಧರ್ಮಾನುಷ್ಠಾನ ನಿಷ್ಠೆ, ಅದರ ಪ್ರಸಾರಧೌರೇಯತೆಗಳು ಎದ್ದು ತೋರುವವು. ವೈದಿಕ ವೈಷ್ಣವ ಸಂಪ್ರದಾಯ, ಸನಾತನ ಧರ್ಮ-ಸಂಸ್ಕೃತಿಗಳ ಪ್ರಸಾರ, ಸರ್ವರ ಅಭ್ಯುದಯಗಳೇ ಅವರ ಗುರಿ. ಶರಣಾಗತರಲ್ಲಿ ಅವರಿಗಿರುವ ಅನುಕಂಪ-ಅನುಗ್ರಹಗಳು ಎಲ್ಲ ಅವತಾರಗಳಲ್ಲೂ ಎದ್ದು ಕಾಣುವ ಅಂಶವಾಗಿದೆ. ಆದುದರಿಂದಲೇ ಅವರನ್ನು ಸಕಲರೂ ಪ್ರೀತಿಸಿ, ಆರಾಧಿಸುವರು.

ಶ್ರೀರಾಘವೇಂದ್ರಸ್ವಾಮಿಗಳು ಜಗತ್ತಿಗೆ ಮಾಡಿರುವ ಉಪಕಾರಗಳಂತೂ ಅಪಾರವಾಗಿದೆ. ವೇದಗಳಿಗೆ ವಿವರಣೆ ಬರೆಯುವುದರ ಜೊತೆಗೆ ಸ್ವತಂತ್ರಗ್ರಂಥಗಳನ್ನು ರಚಿಸುವ ಮೂಲಕ ವೇದೋಪನಿಷದ್ಗೀತಾರ್ಥಗಳನ್ನು ವಿವರಿಸಿ ಭಾರತೀಯ ಸಂಸ್ಕೃತಿಯ ಹಾರ್ದಿಕ ಉಪದೇಶ ಮಾಡಿದ್ದಾರೆ. ಪೀಠಾಧಿಪತಿಗಳಾಗಿದ್ದಾಗ ಸ್ವಧರ್ಮ-ವಿಧರ್ಮೀಯರಾದ ರಾಜರಿಂದ ಮಾನಿತರಾಗಿ ಹಿಂದೂಧರ್ಮದ ಮಹತ್ವವನ್ನು ಅವರಿಗೆ ತೋರಿಸಿಕೊಟ್ಟಿದ್ದಾರೆ. ಬೃಂದಾವನಪ್ರವೇಶಾನಂತರ ನೂರಾರು ವರ್ಷಗಳಾದಮೇಲೆ ಸರ್ ಥಾಮಸ್ ಮನ್ರೋನಂತಹ ಐರೋಪ್ಯನಿಗೆ ಪ್ರತ್ಯಕ್ಷದರ್ಶನವಿತ್ತು ಮಾತನಾಡಿ ಯೋಗಶಕ್ತಿಯ ಪ್ರಭಾವ, ಭಾಗವತಧರ್ಮದ ಮಹಿಮೆಗಳನ್ನು ತೋರಿಸಿಕೊಟ್ಟರು. ಮಹಾರಾಷ್ಟ್ರ, ಆಂಧ್ರ-ತಮಿಳುನಾಡು-ಕರ್ನಾಟಕರಾಜ್ಯಗಳ ಅರಸರ ಪರಸ್ಪರ ಅಂತಃಕಲಹವನ್ನು ಪರಿಹರಿಸಿ, ಶಾಂತಿ ಸಮಧಾನಗಳನ್ನೇರ್ಪಡಿಸಿ, ಪ್ರಜರು ಸುಖ, ಶಾಂತಿ, ನೆಮ್ಮದಿಗಳಿಂದ ಬಾಳುವಂತೆ ಮಾಡಿದರು. ವ್ಯಾಸರಾಜರಾಗಿದ್ದಾಗ ಕನ್ನಡ ಸಾಮ್ರಾಜ್ಯದ ಆರುಜನ ಚಕ್ರವರ್ತಿಗಳಿಗೆ ಗುರುಗಳಾಗಿ, ಸಲಹೆಗಾರರಾಗಿ, ಅವರಿಂದ ಸೇವಿತರಾಗಿ, ನಾಡು, ನುಡಿ, ಸಂಸ್ಕೃತಿಗಳ ಅಭಿವೃದ್ಧಿಯಾಗುವಂತೆಮಾಡಿ, ವ್ಯಾಸಪಂಥ-ದಾಸಪಂಥಗಳಿಗೆ ಪೋಕರಾಗಿದ್ದು, ಅವುಗಳ ಸರ್ವತೋಮುಖ ಉನ್ನತಿಯನ್ನು ಸಾಧಿಸಿ ಕನ್ನಡ ಭಾಷೆಗೆ ಕಳೆತಂದರು. ಗುರುರಾಜರಾಗಿದ್ದಾಗ ವ್ಯಾಸ-ದಾಸಪಂಥಗಳನ್ನು ಪೋಷಿಸಿ ಸ್ವತಃ ಪದಗಳನ್ನು ರಚಿಸಿ ಉಭಯ ಪಂಥಗಳು ಅಭಿವೃದ್ಧವಾಗಲು ಪ್ರೇರಕಶಕ್ತಿಗಳಾದರು. ಸಾವಿರಾರು ಜನರೆದರು ಸಶರೀರರಾಗಿ ಬೃಂದಾವನ ಪ್ರವೇಶಮಾಡಿ ತಾವು ಪ್ರಕೃತಿ ನಿಯಮವನ್ನು

ಜಯಿಸಿದ ಯೋಗಿಗಳೆಂದು ತೋರಿಕೊಡುವದ್ವಾರಾ ಭಾರತೀಯ ಯೋಗದ ವೈಶಿಷ್ಟ್ಯವನ್ನು ಎತ್ತಿತೋರಿಸದರು. ಮುಖ್ಯವಾಗಿ ದೇವರಿಲ್ಲ, ಧರ್ಮಾದಿ ಅತೀಂದ್ರಿಯ ಪದಾರ್ಥಗಳು ಶಾಸ್ತ್ರಾದಿಗಳು ಸುಳ್ಳೆಂದು ವಾದಿಸುವ ಇಂದಿನ ನಾಸ್ತಿಕಯುಗದಲ್ಲೂ ಭೌತಿಕ ವಿಜ್ಞಾನಕ್ಕೆ ಸವಾಲಾಗಿ ನಿಂತು, ಆಸೇತು ಹಿಮಾಲಯ ಪರ್ಯಂತ ತಮಗೆ ಶರಣಾಗಿಬಂದ, ವೈದ್ಯಕೀಯ, ವೈಜ್ಞಾನಿಕ ಪರಿಣತರಿಂದಲೂ ಪರಿಹರಿಸಲಾಗದ ಶಾರೀರಕ-ಮಾನಸಿಕ ರೋಗ-ರುಜಿನಗಳನ್ನು ಪರಿಹರಿಸಿ, ಐಹಿಕ-ಪಾರತ್ರಿಕ ಸುಖ-ಸಂತೋಷಗಳನ್ನು ಕರುಣಿಸುವ ಮೂಲಕ ಭಗವಂತನ ಅಸ್ತಿತ್ವ, ಶಾಸ್ತ್ರಾದಿಗಳ ಸತ್ಯತ್ವಗಳನ್ನು ಸ್ಥಾಪಿಸುತ್ತಾ. ಅದ್ಯಾಪಿ ಬೃಂದಾವನದಲ್ಲಿ ಸಶರೀರವಾಗಿದ್ದು ಲೋಕಕಲ್ಯಾಣ ಮಾಡುತ್ತಾ, ವಿಶ್ವಗುರುಗಳೆಂದು ಸರ್ವರಿಂದ ಜೇಗೀಮಾನರಾಗಿ, ವೈದಿಕ ಸತ್ತತ್ವ-ಸನಾತನಧರ್ಮಗಳ ಕೀರ್ತಿಧ್ವಜವನ್ನು ಎತ್ತಿಹಿಡಿದು ''ಭಾರತ ಸಂಸ್ಕೃತಿಯ ಸಂಕೇತ''ರೆಂದು ಮಾನ್ಯರಾಗಿದ್ದಾರೆ. ಇಂತಹ ಮಹಾಮಹಿಮರಾದ ಮಂತ್ರಾಲಯ ಮುನೀಂದ್ರರನ್ನು ಗುರುಗಳಾಗಿ ಪಡೆದು, ಅವರ ಪಾದಸೇವೆ, ಭಜನಾದಿಗಳನ್ನು ಮಾಡಿ ದೇವರ ಅನುಗ್ರಹಕ್ಕೆ ಪಾತ್ರರಾಗುತ್ತಿರುವ ಮಾನವರ ಭಾಗ್ಯಕ್ಕೆ ಎಣೆಯುಂಟೆ. ಅವರ ದಾಸರಾದ ಭಾರತೀಯರೇ ಧನ್ಯರು!

32. ಬೃಂದಾವನ ಪ್ರವೇಶಾನಂತರ ಮಹಿಮೆಗಳು

ಶ್ರೀರಾಘವೇಂದ್ರಸ್ವಾಮಿಗಳು ಬೃಂದಾವನ ಪ್ರವೇಶಮಾಡಿ ಇಂದಿಗೆ 329 ವರ್ಷಗಳಾದವು. ಈ ದೀರ್ಘ ಅವಧಿಯಲ್ಲಿ ಶ್ರೀರಾಯರ ಸಹಸ್ರಾಧಿಕ ಮಹಿಮೆಗಳು ಪ್ರಕಟವಾಗಿವೆ. ಲಕ್ಷಾಂತರ ಭಕ್ತರು ಗುರುಗಳ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ-ಆಗುತ್ತಿದ್ದಾರೆ. ಶ್ರೀಗುರುರಾಜರು ಪ್ರಕಟಿಸಿರುವ ಎಲ್ಲ ಮಹಿಮೆಗಳನ್ನೂ ಸಂಗ್ರಹಿಸಿ ಪ್ರಕಟಿಸಿದರೆ ಸಹಸ್ರಾರು ಪುಟಗಳ ಅನೇಕ ಸಂಪುಟಗಳೇ ಆಗುವುದೆಂದು ಹೇಳಬಹುದು. ಈ ಸಣ್ಣ ಗ್ರಂಥದಲ್ಲಿ ತಿಳಿದಿರುವಷ್ಟು ಮಹಿಮೆಗಳನ್ನೂ ನಿರೂಪಿಸಲು ಅವಕಾಶವಿಲ್ಲವಾಗಿದೆ. ಆದರೂ ಕೆಲಪ್ರಮುಖ ಮಹಿಮೆಗಳನ್ನು ಮಾತ್ರ ಇಲ್ಲಿ ನಿರೂಪಿಸಲು ಉದ್ಯುಕ್ತರಾಗಿದ್ದೇವೆ. ಸಹಸ್ರಾರು ಜನರಿಗೆ; ಭಕ್ತರಲ್ಲಿ ದಯೆಬೀರಿ ಗುರುಗಳು ತೋರಿಸಿರುವ ಪವಾಡಗಳು ಮಹಿಮೆಗಳೂ ಅವರವರ ಅನುಭವಕ್ಕೆ ಬಂದಿರುತ್ತದೆ. ಅಪೂರ್ವವಾದ ಕೆಲಮಹಿಮೆಗಳು ಹೀಗಿವೆ:

ಅಪ್ಪಣ್ಣಾಚಾರ್ಯರಲ್ಲಿ ಅನುಗ್ರಹ

ಬಿಚ್ಚಾಲಿಯ ಅಪ್ಪಣ್ಣಾಚಾರ್ಯರು ಗುರುರಾಜರಲ್ಲಿ ಓದಿದ ಉತ್ತಮ ಪಂಡಿತರು, ಶಿಷ್ಯರು, ಭಕ್ತರು. ರಾಯರು ಬೃಂದಾವನ ಪ್ರವೇಶಮಾಡಿವಾಗ ಆಚಾರ್ಯರು ಯಾತ್ರೆಯಲ್ಲಿದ್ದು, ಬಂದಮೇಲೆ ವಿಷಯ ತಿಳಿದು ಗುರುವಿಯೋಗ ದಿಂದ ದುಃಖಿತರಾಗಿ ಬೃಂದಾವನ ದರ್ಶನಮಾಡುವ ತವಕದಿಂದ ಪೂರ್ಣಪ್ರವಾಹ ದಿಂದ ಹರಿಯುತ್ತಿದ್ದ ತುಂಗಭದ್ರೆಗೆ ಹಾರಿದರು. ಈಜಲು ಬರದ ಅವರು ರಾಯರ ಮಹಿಮೆಯಿಂದ ಹೇಗೋ ನದಿ ದಾಟಿ ಮಂಚಾಲೆಗೆ ಬಂದರು. ಆಗವರು ಗುರುಗಳ ಮಹಿಮಾವರ್ಣನರವಾದ 'ಶ್ರೀಗುರುಸ್ತೋತ್ರವನ್ನು' ರಚಿಸುತ್ತಿದ್ದರು. ಬೃಂದಾವನ ಸಮೀಪಕ್ಕೆ ಬರುವ ವೇಳೆಗೆ ಸ್ತೋತ್ರಮುಗಿದು ಫಲಶ್ರುತಿರೂಪವಾದ ಕೊನೆಯ ಶ್ಲೋಕರಚಿಸುತ್ತಿದ್ದರು. ಬೃಂದಾವನ ದರ್ಶನವಾದ ಕೂಡಲೇ ಆ ಸ್ತುತಿ ಏಳು ಅಕ್ಷರ ಪೂರ್ಣವಾಗದೇ ಅರ್ಧಕ್ಕೇ ನಿಂತು ಹೋಯಿತು. ಶ್ರೀರಾಯರಿಗೆ ಸಾಷ್ಟಾಂಗವೆರಗಿದ ಅಪ್ಪಣ್ಣಾಚಾರ್ಯರು ಗುರುಗಳ ಬೃಂದಾವನದ ಮುಂದೆ ಕಣ್ಣೀರು ಸುರಿಸುತ್ತಾ ನಿಂತುಬಿಟ್ಟರು. ಆಗೊಂದು ವಿಚಿತ್ರ ಘಟನೆ ಜರುಗಿತು. 8-10 ದಿನಗಳ ಹಿಂದೆ ಬೃಂದಾವನ ಪ್ರವೇಶ ಮಾಡಿದ್ದ ಗುರುಗಳ ಧ್ವನಿಯು "ಸಾಕ್ಷೀ ಹಯಾಸ್ಯೋ ಏತ್ರಹಿ" ಎಂಬ ಅರ್ಧಕ್ಕೆ ನಿಂತಿದ್ದ ಏಳು ಅಕ್ಷರಾತ್ಮಕವಾಗಿ "ನಿಮ್ಮ ಸ್ತೋತ್ರದಲ್ಲಿ ಹೇಳಿರುವುದಕ್ಕೆ ನಮ್ಮ ಮುಂದೆ ಕುಳಿತು ಸೇವೆಸ್ವೀಕರಿಸುತ್ತಿರುವ ಶ್ರೀಹಯಗ್ರೀವದೇವರೇಸಾಕ್ಷಿ" ಎಂಬ ಸಮ್ಮತಿರೂಪವಾಗಿ ಬೃಂದಾವನದಿಂದ ಕೇಳಿಬಂದಿತು. ಆಚಾರ್ಯರಾದಿಯಾಗಿ ಅಲ್ಲಿದ್ದ ಸರ್ವರೂ ಅದನ್ನು ಕೇಳಿ ಆಶ್ಚರ್ಯಾನಂದ ಚಕಿತರಾದರು. ತಾವು ರಚಿಸಿದ, ಆದರೆ ಅಪೂರ್ಣವಾಗಿದ್ದ ಕೊನೆಯ ಪದ್ಯವನ್ನು ಪೂರ್ಣಗೊಳಿಸಿ ತಾವಿನ್ನೂ ಜೀವಂತವಾಗಿರುವುದನ್ನು ಸ್ಪಷ್ಟಪಡಿಸುತ್ತಾ ತಮ್ಮ ರಚನೆಗೆ ಸಮ್ಮತಿರೂಪ ಆಶೀರ್ವಾದ ಮಾಡಿದ್ದಾರೆಂದು ಅಪ್ಪಣ್ಣಾಚಾರ್ಯರು ಆನಂದಿಸಿದರು. ಶ್ರೀರಾಯರಮೇಲೆ ಅನೇಕ ಸ್ತೋತ್ರಗಳಿವೆ. ಆದರೆ ಈ ಸ್ತೋತ್ರವೇ ರಾಯರಿಗೆ ಪ್ರಿಯವಾಗಿದ್ದು, ಅದರ ಪಠನದಿಂದ ಸಹಸ್ರಾರುಜನ ಅಭಿಷ್ಟಗಳನ್ನು ಪಡೆದಿದ್ದಾರೆ. ಈ ಘಟನೆ ರಾಯರ ಬೃಂದಾವನ ಪ್ರವೇಶಾನಂತರದ ಪ್ರಪ್ರಥಮ ಮಹಿಮೆಯಾಗಿದೆ.

ಬೃಂದಾವನ ತಲೆದೂಗಿತು!

ಶ್ರೀರಾಘವೇಂದ್ರಸ್ವಾಮಿಗಳ ತರುವಾಯ ಶ್ರೀ ಮಧ್ವಾಚಾರ್ಯರ ಪೀಠದಲ್ಲಿ 1. ಶ್ರೀಯೋಗೀಂದ್ರರು, 2. ಶ್ರೀಸೂರೀಂದ್ರರು, 3. ಶ್ರೀಸುಮತೀಂದ್ರರು ಮತ್ತು 4. ಶ್ರೀಉಪೇಂದ್ರತೀರ್ಥರೆಂಬ ನಾಲ್ವರು ಜ್ಞಾನಿಗಳು ಪೀಠಾಧಿಪತಿಗಳಾಗಿದ್ದು, ಈ ಕಥಾನಕ ನಡೆದಾಗ ಶ್ರೀವಾದೀಂದ್ರತೀರ್ಥರೆಂಬ ಜ್ಞಾನಿ ಶ್ರೇಷ್ಠರು ಮಹಾಸಂಸ್ಥಾನಾಧಿಪತಿಗಳಾಗಿದ್ದರು. ಇವರು ಶ್ರೀರಾಯರ ಪೂರ್ವಾಶ್ರಮ ಮಕ್ಕಳಾದ ಲಕ್ಷ್ಮೀನಾರಾಯಣಾಚಾರ್ಯರ ಪುತ್ರರಾದ ಪುರುಷೋತ್ತಮಾಚಾರ್ಯರ ಜೇಷ್ಠಪುತ್ರರು. ಶ್ರೀರಾಯರ ಮರಿಮಕ್ಕಳು. ಇವರು ಶ್ರೀ ಗುರುರಾಜರ ಪರಮಾನುಗ್ರಹಕ್ಕೆ ಪಾತ್ರರು, ಶ್ರೇಷ್ಠ ಪಂಡಿತರು, ಗ್ರಂಥಕಾರರು. ಮಂತ್ರಾಲಯ ಗ್ರಾಮ ಕೈಬಿಟ್ಟು ಹೋಗುವ ಸಂದರ್ಭ ಬಂದಾಗ ಶ್ರೀಗಳವರು ತಮ್ಮ ಮಹಿಮೆ, ಪ್ರಭಾವಗಳನ್ನು ಬೀರಿ ಮಂತ್ರಾಲಯವನ್ನು ಶ್ರೀಮಠಕ್ಕೆ ಶಾಶ್ವತವಾಗಿ ಉಳಿಯುವಂತೆ ಮಾಡಿದ ಮಹಾನುಭಾವರು. ಶ್ರೀರಾಯರ ಬೃಂದಾವನದ ಮುಂದೆ ನಿಂತು ಪಠಿಸಿ ಸಮರ್ಪಿಸಿದಾಗ ಶ್ರೀರಾಯರ ಬೃಂದಾವನವು ಕ್ಷಣಕಾಲ ಅಲುಗಾಡಿ ಬೃಂದಾವನಕ್ಕೆ ಹಾಕಿದ್ದ ಹೂವಿನ ಮಾಲೆಯು ವಾದೀಂದ್ರರ ಕೊರಳಿಗೆ ಬಿದ್ದಿತು! ಈ ಅದ್ಭುತವನ್ನು ಕಂಡು ಅಲ್ಲಿದ್ದ ಸರ್ವರೂ ಹರ್ಷಿಸಿ, ಮರಿಮಕ್ಕಳಾದ ವಾದೀಂದ್ರರಮೇಲೆ ರಾಯರು ತಮಗಿರುವ ಅಪಾರ ವಾತ್ಸಲ್ಯ ತೋರಿದರೆಂತು ಶ್ರೀರಾಯರನ್ನೂ, ಶ್ರೀವಾದೀಂದ್ರರನ್ನೂ ಕೊಂಡಾಡಿದರು. ಬೃಂದಾವನ ಪ್ರವೇಶಾನಂತರ ಅಪ್ಪಣ್ಣಾಚಾರ್ಯರಲ್ಲಿ ಅನುಗ್ರಹಿಸುವ ದ್ವಾರಾ ತೋರಿದ 60 ವರ್ಷಗಳ ಆನಂತರ ಶ್ರೀವಾದೀಂದ್ರರು ರಚಿಸಿದ ತಮ್ಮ ಸ್ತೋತ್ರಕ್ಕೆ ಶಿರಾಕಂಪನಮಾಡುವಂತೆ ಬೃಂದಾವನ ಅಲುಗಾಡುವ ದ್ವಾರಾ ತೋರಿಸಿರುವುದು ಎರಡನೆಯ ಮುಖ್ಯ ಮಹಿಮೆಯಾಗಿದೆ. ಶ್ರೀವಾದೀಂದ್ರತೀರ್ಥರ ಬೃಂದಾವನವು ಶ್ರೀರಾಯರ ಎಡಭಾಗದಲ್ಲಿ ವಿರಾಜಿಸಿರುವುದನ್ನು ಇಂದಿಗೂ ಜನರು ಕಂಡಾನಂದಿಸಬಹುದಾಗಿದೆ.

ವಿಜಯದಾಸರಿಗೆ ಪ್ರತ್ಯಕ್ಷದರ್ಶನ!

ಕನ್ನಡ ಹರಿದಾಸ ಪಂಥದಲ್ಲಿ ಅತ್ಯಂತ ಮಹತ್ವಸ್ಥಾನಗಳಿಸಿದ ಮಹನೀಯರು ಶ್ರೀವಿಜಯದಾಸರು. ಇವರು ಶ್ರೀರಾಯರ ಶಿಷ್ಯರು ಮತ್ತು

ಪರಮ ಭಕ್ತರು. ಶ್ರೀ ವಿಜಯದಾಸರು ಹರಿದಾಸಪಂಥದ ಪೋಷಕರೂ, ಪ್ರೇರಕಶಕ್ತಿಗಳೂ ಆದ ಶ್ರೀಗುರುರಾಜರ ದರ್ಶನಕ್ಕಾಗಿ ಮಂತ್ರಾಲಯಕ್ಕೆ ಬಂದು ಶ್ರೀ ರಾಯರ ಬೃಂದಾವನದ ಮುಂದೆ ನಿಂತು ವಿವಿಧ ರೀತಿಯಿಂದ ಶ್ರೀರಾಯರನ್ನು ಸ್ತುತಿಸುತ್ತಿರುವಾಗ ಇದ್ದಕ್ಕಿದ್ದಂತೆ ಬೃಂದಾವನವು ಇಬ್ಭಾಗವಾಗಿ ದಿವ್ಯ ಪ್ರಕಾಶದಲ್ಲಿ ಶ್ರೀನರಹರಿ, ಶ್ರೀಕೃಷ್ಣ, ಶ್ರೀರಾಮದೇವರನ್ನು ಪೂಜಿಸುತ್ತಿದ್ದ ಶ್ರೀ ಪ್ರಹ್ಲಾದ, ಶ್ರೀ ವ್ಯಾಸರಾಜ ಹಾಗೂ ಶ್ರೀರಾಘವೇಂದ್ರಸ್ವಾಮಿಗಳು ದಾಸರಿಗೆ ದರ್ಶನವಿತ್ತರು! ಮತ್ತು ವಾಯುದೇವರ ಮೂರು ಅವತಾರಗಳು, ಶ್ರೀಪದ್ಮನಾಭತೀರ್ಥರಿಂದಾರಂಭಿಸಿ ಶ್ರೀಸುಧೀಂದ್ರತೀರ್ಥರುಗಳೂ ಅಲ್ಲಿದ್ದು ಶ್ರೀರಾಯರನ್ನು ಅನುಗ್ರಹಿಸುತ್ತಿರುವ ಭವ್ಯದೃಶ್ಯವನ್ನು ಕಂಡು ವಿಜಯದಾಸರು ಭಕ್ತಿ ಪುಳಕಿತ ಗಾತ್ರರಾಗಿ ಶ್ರೀಗುರುರಾಜರಿಗೆ ಸಾಷ್ಟಾಂಗವೆರಗಿದರು. ಶ್ರೀರಾಯರು ಹರಿದಾಸಪಂಥವನ್ನು ಮುಂದುವರಿಸಿಕೊಂಡುಬಂದು ಲೋಕಕಲ್ಯಾಣ ಮಾಡುವಂತೆ ಆಜ್ಞಾಪಿಸಿ ಫಲಮಂತ್ರಾಕ್ಷತೆ ಅನುಗ್ರಹಿಸಿ ಅದೃಶ್ಯರಾದರು. ಮತ್ತೆ ಬೃಂದಾವನ ಮಾತ್ರ ದಾಸರ ದೃಷ್ಟಿಗೆ ಗೋಚರಿಸಿತು. ಹೀಗೆ ಶ್ರೀರಾಯರು ದಾಸರಿಗೆ ಪ್ರತ್ಯಕ್ಷದರ್ಶನವಿತ್ತು ಅದ್ಯಾಪಿ ತಾವು ಬೃಂದಾವನದಲ್ಲಿ ಸಶರೀರವಾಗಿರುವುದನ್ನು ತೋರಿಸಿ ಮಹಾಮಹಿಮೆಯನ್ನು ಪ್ರಕಟಿಸಿದರು.

ಇದರಂತೆ ಶ್ರೀಗೋಪಾಲದಾಸರಿಗೂ ಪ್ರತ್ಯಕ್ಷ ದರ್ಶನ ನೀಡಿದ್ದಲ್ಲದೆ, ಮುಂದೆ ಏಳು ನೂರು ವರ್ಷಕಾಲ ಮಂತ್ರಾಲಯದಲ್ಲಿ ಜರುಗುವ ಮಹಿಮಾದಿಗಳನ್ನು ಚಲನಚಿತ್ರದ ದೃಶ್ಯಗಳಂತೆ ಪ್ರಕಟಪಡಿಸಿ ನೂರಾರುವರ್ಷಗಳಕಾಲ ತಮ್ಮ ಬೃಂದಾವನ ಸನ್ನಿಧಿಯಲ್ಲಿ ನಡೆಯುವ ಭವಿಷ್ಯವನ್ನು ಪ್ರಕಟಿಸಿದರು.

ಜಗನ್ನಾಥದಾಸರಲ್ಲಿ ಅನುಗ್ರಹ

ಶ್ರೀಜಗನ್ನಾಥದಾಸರು ಶ್ರೀಗುರುರಾಜರ ಪರಮಭಕ್ತರು. ಶ್ರೀಮಠದ ಶಿಷ್ಯರು. ಹರಿದಾಸಪಂಥದಲ್ಲಿ ಇವರಸ್ಥಾನ ವೈಶಿಷ್ಟ್ಯಪೂರ್ಣವಾದು. ಹರಿದಾಸ ವಾಙ್ಮಯದ ಮೇರುಕೃತಿಯಾದ ''ಶ್ರೀಹರಿಕಥಾಮೃತಸಾರ''ವನ್ನು ಶ್ರೀಗುರುರಾಜರ ಆಜ್ಞೆಯಂತೆ ರಚಿಸಿ ಮಹೋಪಕಾರ ಮಾಡಿದವರು.

ಸಾವಿರಾರು ಪದ-ಪದ್ಯಸುಳಾದಿಗಳನ್ನೂ ಕಾವ್ಯಗಳನ್ನೂ ರಚಿಸಿ ದಾಸಪಂಥವನ್ನು ಸಮೃದ್ಧಗೊಳಿಸಿದ ಶ್ರೀಜಗನ್ನಾಥದಾಸರು ಮಂತ್ರಾಲಯಕ್ಕೆ ಬಂದು ಬಹುಕಾಲ ವಾಸಮಾಡಿದರು. ಆಗ ಗುರುರಾಜರು ದಾಸರಿಗೆ ಪ್ರತ್ಯಕ್ಷದರ್ಶನವಿತ್ತು ಅವರಿಗೆ ಶ್ರೀಹರಿತತ್ವಗಳನ್ನುಪದೇಶಿಸಿ, ಮಾತುಕತೆ ನಡೆಸುತ್ತಿದ್ದರು. ಪ್ರಹ್ಲಾದರಾಜರೇ ಗುರುರಾಜರೆಂದರಿತ ಶ್ರೀದಾಸರು ಅವರ ಅನುಗ್ರಹಕ್ಕೆ ಮುಖ್ಯ ಪಾತ್ರರಾಗಿದ್ದ, ಪ್ರಹ್ಲಾದರಾಜರ ತಮ್ಮಂದಿರಾದ ಸಹ್ಲಾದರೇ ಜಗನ್ನಾಥದಾಸರಾಗಿ ಅವತರಿಸಿರುವರೆಂದು ಜ್ಞಾನಿಗಳು ಕೊಂಡಾಡುವರು. ಅನೇಕಭಕ್ತರು ದಾಸರಮೂಲಕ ತಮ್ಮ ಕಷ್ಟಗಳನ್ನು ರಾಯರಲ್ಲಿ ಹೇಳಿಕೊಂಡು ಅದಕ್ಕೆ ಪರಿಹಾರ, ಮತ್ತು ಅನುಗ್ರಹವನ್ನು ದಾಸರ ದ್ವಾರಾ ಪಡೆಯುತ್ತಿದ್ದರು. ರಾಯರೊಡನೆ ದಾಸರು ಪ್ರತ್ಯಕ್ಷವಾಗಿ ಸಂಭಾಷಿಸುವ ವಿಚಾರ ಬಹಿರಂಗವಾದ್ದರಿಂದ ಅಂದಿನಿಂದ ರಾಯರು ದಾಸರಿಗೆ ಸ್ವಪ್ನದಲ್ಲಿ ಮಾತ್ರದರ್ಶನವಿತ್ತು ಅವರ, ಭಕ್ತರ ಅಭೀಷ್ಟಗಳನ್ನು ಪೂರೈಸಲಾರಂಭಿಸಿದರು. ದಾಸರು ರಾಯರ ಮೇಲೆ ನೂರಾರುಪದಗಳನ್ನು ರಚಿಸಿ ಅವರ ಮಹಿಮೆಯನ್ನು ಕೊಂಡಾಡಿದ್ದಾರೆ. ಬೃಂದಾವನ ಪ್ರವೇಶಾನಂತರ 75 ವರ್ಷಗಳಾದಮೇಲೆ ದಾಸರಿಗೆ ದರ್ಶನವಿತ್ತು ಸಂಭಾಷಿಸುತ್ತಾ ತಾವಿನ್ನೂ ಜೀವಂತವಾಗಿ ಬೃಂದಾವನದಲ್ಲಿ ವಿರಾಜಿಸುತ್ತಿರುವುದನ್ನು ಸ್ಪಷ್ಟಪಡಿಸಿದ ಈ ಮಹಿಮೆ ಅಭೂತ ಪೂರ್ವವಾದುದು.

ಸರ್‌ಥಾಮಸ್ ಮನ್ರೋನಲ್ಲಿ ಅನುಗ್ರಹ!

ಶ್ರೀವಾದೀಂದ್ರತೀರ್ಥರ ಆನಂತರ 1. ಶ್ರೀವಸುಧೇಂದ್ರತೀರ್ಥರು, 2. ಶ್ರೀವರದೇಂದ್ರತೀರ್ಥರು, 3. ಶ್ರೀಧೀರೇಂದ್ರತೀರ್ಥರು, 4-6 ಶ್ರೀಭುವನೇಂದ್ರ-ಸುಬೋಧೇಂದ್ರ-ಸುಜನೇಂದ್ರತೀರ್ಥರೆಂಬ ಆರುಜನ ಜ್ಞಾನಿವರ್ಯರು ಶ್ರೀಗುರುರಾಜ ಪೀಠವನ್ನಲಂಕರಿಸಿ ಲೋಕಕಲ್ಯಾಣ ಮಾಡಿದರು. ಶ್ರೀಸುಜನೇಂದ್ರತೀರ್ಥರ ತರುವಾಯ ಶ್ರೀಸುಜ್ಞಾನೇಂದ್ರ ತೀರ್ಥರು ಪೀಠಾಧೀಶರಾಗಿ ಶ್ರೀಮಠದ ಮೂಲಸ್ಥಳವಾದ ನಂಜನಗೂಡಿನಲ್ಲಿ ವಿರಾಜಿಸಿದ್ದರು. ಆ ವೇಳೆಗಾಗಲೇ ಭಾರತವೆಲ್ಲಾ ಆಂಗ್ಲರ ಅಧಿಕಾರಕ್ಕೆ ಒಳಪಟ್ಟಿತ್ತು. ಈಸ್ಟ್ ಇಂಡಿಯಾ ಕಂಪನಿಯವರ ಆದೇಶದಂತೆ ಹಿಂದಿನ ರಾಜರು ದತ್ತಿಬಿಟ್ಟ ಗ್ರಾಮಭೂಮಿಗಳು ಸಕ್ರಮವೇ ಅಲ್ಲವೇ ಎಂದು

ವಿಚಾರಣೆಮಾಡಲು ಸರ್ವೇಸೆಟಲ್‌ಮೆಂಟನ್ನು ಪ್ರಾರಂಭಿಸಿದ್ದರು. ಅದರ ಅಧಿಕಾರಿಯಾದ ಥಾಮಸ್ ಮನ್ರೋ ಮಂತ್ರಾಲಯ ಗ್ರಾಮದಬಗ್ಗೆ ವಿಚಾರಮಾಡಲು ಮಂತ್ರಾಲಯಕ್ಕೆಬಂದ. ಶ್ರೀಮಠದ ಆ ಗ್ರಾಮದ ಕಾಗದಪತ್ರಗಳು ನಂಜನಗೂಡಿನಲ್ಲಿ ಶ್ರೀ ಪೀಠಾಧೀಶರಲ್ಲಿ ಇದ್ದುದರಿಂದ ಗ್ರಾಮದ ಗೌಡ-ಕುಲಕರ್ಣಿ, ಧರ್ಮಾಭಿಮಾನಿಗಳು ಮತ್ತು ಮಠದ ಅಧಿಕಾರಿಗಳು ಸರಿಯಾದ ವಿಷಯ ತಿಳಿಸಿ ಗ್ರಾಮವನ್ನು ಶ್ರೀಮಠಕ್ಕೆ ಉಳಿಸಿಕೊಳ್ಳಲು ತೊಂದರೆಯಾದ್ದರಿಂದ ಭಯಗೊಂಡಿದ್ದರು. ಮನ್ರೋ ಸಾಹೇಬ ಬೃಂದಾವನ ದರ್ಶನಕ್ಕೆ ಬಂದಾಗ ಶ್ರೀಗುರುರಾಜರು ಅವನಿಗೆ ಪ್ರತ್ಯಕ್ಷದರ್ಶನವಿತ್ತು ಅವನೊಡನೆ ಮಾತನಾಡಿ ಆ ಐರೋಪ್ಯನನ್ನು ವಿಸ್ಮಯಗೊಳಿಸಿ ಗ್ರಾಮವನ್ನು ಮಠಕ್ಕೆ ಶಾಶ್ವತವಾಗಿ ಉಳಿಸಿಕೊಡುವಂತೆ ಹೇಳಿ ಫಲಮಂತ್ರಕ್ಷತೆ ಕರುಣಿಸಿದರು. ಮನ್ರೋಸಾಹೇಬ 150 ವರ್ಷಗಳ ಹಿಂದೆ ಸಮಾಧಿಸ್ಥರಾದ ಯಿತಿಗಳು ಇನ್ನೂಜೀವಂತವಾಗಿದ್ದು ತನಗೆ ದರ್ಶನವಿತ್ತು (ಮತ್ಯಾರಿಗೂ ರಾಯರ ದರ್ಶನವಾಗಲಿಲ್ಲ!) ಮಾತನಾಡಿ ಮಂತ್ರಾಕ್ಷತೆ ನೀಡಿದ್ದರಿಂದ ಅತ್ಯಂತ ಪ್ರಭಾವಿತನಾಗಿ ಗುರುಗಳು ಯೋಗಸಿದ್ಧರಾದ ಮಾಹಿಮಾವಂತರೆಂದು ಮನಗಂಡು ಮಂತ್ರಾಕ್ಷತೆಯನ್ನು ಅಂದಿನ ತನ್ನ ಊಟಕ್ಕೆ ಉಪಯೋಗಿಸಿ ಶ್ರೀಮಠಕ್ಕೆ ಮಂತ್ರಾಲಯ ಗ್ರಾಮವು ಶಾಶ್ವತವಾಗಿ ನಡೆಯುವಂತೆ ಅಪ್ಪಣೆಮಾಡಿದನು. ಮತ್ತು ಈ ಘಟನೆಯನ್ನು ಮದ್ರಾಸ್ ಗೆಜಿಟಿಯರ್‌ನಲ್ಲಿ ಬರೆದು ರಾಯರ ಮಹಿಮೆ ನಿರೂಪಿಸಿದನು. ಇಂದಿಗೂ ಮದ್ರಾಸ್ ಗೆಜಿಟಿಯರ್‌ನಲ್ಲಿ ಇದನ್ನು ಕಾಣಬಹುದಾಗಿದೆ. ಇದು ರಾಯರ ಮಹಿಮೆಯಲ್ಲಿ ಅತ್ಯಪೂರ್ವವಾಗಿದೆ.

ಶಿಲೆಯಲ್ಲಿ ಪ್ರತ್ಯಕ್ಷರಾದರು!

ಶ್ರೀರಾಘವೇಂದ್ರಸ್ವಾಮಿಗಳ ವಂಶೀಕರೂ, ಪೀಠಾಧೀಶರೂ ಆದ ಶ್ರೀ ಸುಜ್ಞಾನೇಂದ್ರತೀರ್ಥರು (ಕ್ರಿ.ಶ. 1836-18861) ದೊಡ್ಡ ಜ್ಞಾನಿಗಳು, ಮಹಾಪಂಡಿತರು, ''ಚಂದ್ರಿಕಾಭೂಷಣ''ವೆಂಬ ಶ್ರೇಷ್ಠ ಗ್ರಂಥವನ್ನು ರಚಿಸಿ ವಿಖ್ಯಾತರಾದವರು. ಅವರಿಗೆ ಶ್ರೀರಾಯರ ಅನುಗ್ರಹದಿಂದ ''ಮಂತ್ರಸಿದ್ಧಿ'' ಯಾಗಿತ್ತು. ಅವರು ಶ್ರೀಗುರುರಾಜರ ದರ್ಶನಕ್ಕೆ ಮಂತ್ರಾಲಯಕ್ಕೆ ದಯಮಾಡಿಸಿ ಕೆಲಕಾಲ ಅಲ್ಲಿ ವಾಸಮಾಡಿದರು. ಅಲ್ಲಿನ ಪ್ರಶಾಂತ ವಾತಾವರಣ,

ಶ್ರೀರಾಯರ ದಿವ್ಯಸಾನ್ನಿಧ್ಯ ಇವುಗಳಿಂದ ಅತ್ಯಂತ ಮುದಿತರಾದ ಸ್ವಾಮಿಗಳು ಶ್ರೀಗುರುರಾಜ ಸನ್ನಿಧಿಯಲ್ಲಿಯೇ ತಾವು ಬೃಂದಾವನಸ್ಥರಾಗಬೇಕೆಂದು ಗುರುಗಳ ಸೇವೆ ಮಾಡಿದರು. ಅವರ ಸೇವೆಯಿಂದ ಪ್ರಸನ್ನರಾದ ಶ್ರೀರಾಯರು ಸ್ವಪ್ನದಲ್ಲಿ ಅವರಿಗೆ ದರ್ಶನಕೊಟ್ಟು "ನನ್ನ ಸನ್ನಿಧಿಯಲ್ಲಿ ಬೃಂದಾವನಸ್ಥನಾಗಲು ನೀನು ಬಯಸಿದ್ದೀಯೇ. ನಿನ್ನ ಬಯಕೆ ಫಲಿಸುವುದು. ಆದರೆ ಅದು ಇಲ್ಲಲ್ಲ. ನಂಜನಗೂಡಿನಲ್ಲಿ ! ನಾವು ನಂಜನಗೂಡಿಗೆ ಒಂದು ರೂಪದಿಂದ ಬಂದು ಸನ್ನಿಹಿತರಾಗುತ್ತೇವೆ. ಆಗ ನಿನ್ನಾಶೆ ಫಲಿಸುವುದು. ನಿನ್ನ ಭಕ್ತಿಗೆ ಮೆಚ್ಚಿ ನಾವು ನಮ್ಮ ಆರಾಧನೆಯ ಒಂದು ದಿನವನ್ನು ನಿನಗೆ ಅನುಗ್ರಹಿಸುತ್ತೇವೆ. ನಿನಗೆ ಮಂಗಳವಾಗಲಿ" ಎಂದು ಹೇಳಿ ಫಮಂತ್ರಾಕ್ಷತೆ ಅನುಗ್ರಹಿಸಿ ಅದೃಶ್ಯರಾದರು !

ಶ್ರೀ ಸುಜ್ಞಾನೇಂದ್ರತೀರ್ಥರಿಗೆ ಅಭಯವಿತ್ತಂತೆ ಶ್ರೀರಾಯರು ಶ್ರೀರಂಗ ಪಟ್ಟಣದ ಕಾವೇರಿನದೀತೀರದಲ್ಲಿ ಅಗಸನೊಬ್ಬ ಬಟ್ಟೆವಗೆಯುತ್ತಿದ್ದ ಕರೀಶಿಲೆಯಲ್ಲಿ ಉದ್ಭವಿಸಿದರು. ಮತ್ತು ಒಬ್ಬ ಬ್ರಾಹ್ಮಣನಿಗೆ ಸ್ವಪ್ನದಲ್ಲಿ ಈ ವಿಚಾರ ತಿಳಿಸಿ ಆ ಶಿಲೆಯನ್ನು ನಂಜನಗೂಡಿನಲ್ಲಿರುವ ಪೀಠಾಧಿಪತಿಗಳಿಗೆ ಒಪ್ಪಿಸಬೇಕೆಂದು ಆಜ್ಞಾಪಿಸಿದರು. ಶ್ರೀರಾಯರ ಆದೇಶದಂತೆ ಆ ಬ್ರಾಹ್ಮಣ ಶಿಲೆಯನ್ನು ನೋಡಿದಾಗ ಆ ಶಿಲೆಯಲ್ಲಿ ಜ್ಞಾನಮುದ್ರಾಂಕಿತರಾದ ಶ್ರೀರಾಯರ ಆಕೃತಿಯ ರೇಖಾ ರೂಪದಲ್ಲಿ ಕಂಗೊಳಿಸುತ್ತಿತ್ತು ! ಬ್ರಾಹ್ಮಣ ಆ ಶಿಲೆಯನ್ನು ನಂಜನಗೂಡಿಗೆ ಶ್ರೀಮಠಕ್ಕೆ ತಂದು ಒಪ್ಪಿಸಿದ. ಹಿಂದಿನ ದಿನ ಶ್ರೀಗಳವರಿಗೆ ಸ್ವಪ್ನದಲ್ಲಿ "ತಾವು ಪ್ರತಿಮಾ ರೂಪದಲ್ಲಿ ಬರುತ್ತಿರುವುದಾಗಿಯೂ ಅದನ್ನು ಮಠದಲ್ಲಿ ಪ್ರತಿಷ್ಠಿಸಬೇಕು" ಎಂದೂ ಅಪ್ಪಣೆ ಮಾಡಿದ್ದರು. ಶ್ರೀಗಳವರು ಪ್ರತಿಷ್ಠೆಗೆ ಸಕಲಸಿದ್ಧತೆ ಮಾಡಿಕೊಂಡು ಮಠದ ಮುಂದೆ ಕಾಯುತ್ತಿರುವಾಗ ಬ್ರಾಹ್ಮಣ ಶಿಲೆಯನ್ನು ತಂದು ಗುರುಗಳಿಗೆ ಅರ್ಪಿಸಿದ. ಶ್ರೀಗಳವರು ಪರಮಾನಂದಭರಿತರಾಗಿ ಶ್ರೀಗುರುರಾಜರ ಪ್ರತಿಮೆಯನ್ನು ಪ್ರತಿಷ್ಠಾಪನ ಮಾಡಿ ಹಸ್ತೋದಕವನ್ನು ಸಮರ್ಪಿಸಿ ಮಹಾಮಂಗಳಾರತಿಮಾಡಿ ಸರ್ವರಿಗೂ ಕಲ್ಯಾಣವಾಗುವಂತೆ ಪ್ರಾರ್ಥಿಸಿದರು. ಶ್ರೀಮೂಲರಾಮರ ಪೂಜೆಯಾದ ಮೇಲೆ ಸಹಸ್ರಾರು ಬ್ರಾಹ್ಮಣಸುವಾಸಿನಿಯರಿಗೆ ಮೃಷ್ಟಾನ್ನ ಭೋಜನಮಾಡಿಸಿ ದಕ್ಷಿಣಾಪ್ರದಾನಮಾಡಿದರು. ಸಮಸ್ತಜನರೂ ಶ್ರೀರಾಯರು ಶಿಲೆಯಲ್ಲಿ

ಉದ್ಭವಿಸಿ ಶ್ರೀಸುಜ್ಞಾನೇಂದ್ರರಿಗೊಲಿದು ಅವರಲ್ಲಿ ಪರಮಾನುಗ್ರಹ ಮಾಡಿದ್ದರಿಂದ ಹರ್ಷಿತರಾಗಿ ಶ್ರೀಗುರುರಾಜರ ಮಹಿಮೆಯನ್ನು, ಶ್ರೀಗಳವರ ಭಾಗ್ಯವನ್ನೂ ಕೊಂಡಾಡಿದರು.

ಶ್ರೀಪಾದಂಗಳವರಿಗೆ 1861ರಲ್ಲಿ ದೇಹಾಲಸ್ಯವಾಯಿತು. ಅವರು ಶಿಷ್ಯರನ್ನು ಸ್ವೀಕರಿಸಲು ನಿಶ್ಚಯಿಸಿ ಶ್ರೇಷ್ಠಪಂಡಿತರೂ, ರಾಯರ ದೌಹಿತ್ರ ಸಂತತಿಯ ಶ್ರೀವಿಜಯೀಂದ್ರರ ಔರಸ ಸಂತತಿಯವರೂ ಆದ ಶ್ರೀಗಣೇಶಾ ಚಾರ್ಯರಿಗೆ ಆಶ್ರಮವಿತ್ತು, ಸನ್ಯಸ್ತರಾಗಿ ಬಂದ ಅವರಿಗೆ ಮಂತ್ರಮುದ್ರಾಧಾರಣೆ, ಗುರೂಪದೇಶ, ಮಾಡಿ ವಿದ್ಯಾಸಿಂಹಾಸನದಲ್ಲಿ ಮಂಡಿಸಿ "ಶ್ರೀಸುಧರ್ಮೇಂದ್ರ ತೀರ್ಥರು" ಎಂಬ ಅಭಿಧಾನದಿಂದ ಪಟ್ಟಾಭಿಷೇಕಮಾಡಿದರು. ಆ ವರ್ಷ ಶ್ರೀಗಳವರು ನಂಜನಗೂಡಿನಲ್ಲೇ ಶಿಷ್ಯರೊಡನೆ ಚಾತುರ್ಮಾಸ್ಯವ್ರತಕ್ಕೆ ಕುಳಿತರು. ಶ್ರೀರಾಯರ ಆರಾಧನೆ ಬಂದಿತು. ಪೂರ್ವಾರಾಧನೆ ನಡೆದು ಮಹಾ ಸಮಾರಾಧನೆಯ ದಿನ ಶ್ರೀಸುಜ್ಞಾನೇಂದ್ರರ ದೇಹಸ್ಥಿತಿ ಬಿಗಡಾಯಿಸಿತು. ಶ್ರೀರಾಯರ ಉತ್ತರಾರಾಧನೆಯ ದಿನ ಶ್ರೀಗಳವರು ಇಹಲೋಕವ್ಯಾಪಾರವನ್ನು ಮುಗಿಸಿ ಶ್ರೀಹರಿವಾಯುಗಳ, ತಥಾ ಶ್ರೀರಾಯರ ಪಾದಸ್ಮರಣ ಮಾಡುತ್ತಾ ನಾರಾಯಣಧ್ಯಾನಪರರಾಗಿ ಅಮರರಾದರು. ಶ್ರೀಸುಧರ್ಮೇಂದ್ರ ತೀರ್ಥರು ಗುರುಗಳ ಮಹಾಸಮಾರಾಧನೆಯನ್ನು ಭಕ್ತಿಯಿಂದಾಚರಿಸಿ ಗುರುಗಳ ಬೃಂದಾವನ ಮೇಲೆ ಶ್ರೀಮೂಲರಾಮರನ್ನು ಮಂಡಿಸಿ ಕನಕಾಭಿಷೇಕ ಮಾಡಿ, ಚರಮಶ್ಲೋಕರಚಿಸಿ, ಪಠಿಸಿ ಸಮರ್ಪಿಸಿದರು.

ಶ್ರೀರಾಘವೇಂದ್ರ ಸ್ವಾಮಿಗಳ ಉತ್ತರಾರಾಧನೆಯ ದಿನವೇ ಶ್ರೀಗಳು ಹರಿಪದ ಸೇರಿಸಿದರು. ಶ್ರೀರಾಯರು ಅಭಯವಿತ್ತಂತೆ ಪ್ರತಿಮೆಯ ರೂಪದಲ್ಲಿ ಬಂದು ತಮ್ಮ ಸಾನ್ನಿಧ್ಯವನ್ನೂ ತಮ್ಮ ಉತ್ತರಾಧನೆಯ "ದಿನ"ವನ್ನೂ ಶ್ರೀಗಳವರಿಗೆ ಕರುಣಿಸಿ, ಅವರಲ್ಲಿ ತಮಗಿರುವ ಅಪಾರವಾತ್ಸಲ್ಯವನ್ನು ಹೊರಸೂಸಿ ಮಹಿಮೆಬೀರಿ ಸರ್ವರನ್ನೂ ಆನಂದಗೊಳಿಸಿದರು.

ಭಾರತಾದ್ಯಂತ ಶ್ರೀಮಠಕ್ಕಿದ್ದ ಗ್ರಾಮಭೂಮಿ-ಆಸ್ತಿಗಳು ಈಸ್ಟ್ ಇಂಡಿಯಾ ಕಂಪನಿಯಿಂದ ಶ್ರೀಸುಜ್ಞಾನೇಂದ್ರರ ಹೆಸರಿಗೇ ಶಾಶ್ವತವಾಗಿ ಉಳಿಯುವಂತೆ (ಮಂತ್ರಾಲಯವೂ ಶ್ರೀಗಳವರ ಹೆಸರಿಗೆ ಶಾಶ್ವತವಾಗಿದೆ)

ಮಾಡಿ ಶ್ರೀಸುಜ್ಞಾನೇಂದ್ರರ ಮಹಿಮೆ-ಪ್ರಭಾವಗಳೂ ಜಗತ್ತಿನಲ್ಲಿ ಖ್ಯಾತವಾಗುವಂತೆ ಶ್ರೀರಾಯರು ಅನುಗ್ರಹಿಸಿರುವುದು ಅವರ ಭಕ್ತವಾತ್ಸಲ್ಯಕ್ಕೆ ಇನ್ನೊಂದು ಉದಾಹರಣೆಯಾಗಿದೆ.

ಸುಧಾಸಾರಾರ್ಥತತ್ವಜ್ಞಂ ಸುರದ್ರುಮಸಮಂ ಸತಾಮ್।
ಸುರಾಧಿಪಗುರುಪ್ರಖ್ಯಂ ಸುಜ್ಞಾನೇಂದ್ರಗುರುಂ ಭಜೇ॥

33. ಮಂತ್ರಾಲಯದ ಮಹಾಶಿಲ್ಪಿಗಳು

1. ಶ್ರೀಸುಶೀಲೇಂದ್ರತೀರ್ಥರು

ಶ್ರೀಸುಜ್ಞಾನೇಂದ್ರ ತೀರ್ಥರ ತರುವಾಯ ಶ್ರೀಸುಧರ್ಮೇಂದ್ರತೀರ್ಥರು, ಶ್ರೀಸುಗುಣೇಂದ್ರತೀರ್ಥರು, ಶ್ರೀಸುಪ್ರಜ್ಞೇಂದ್ರತೀರ್ಥರು ಹಾಗೂ ಶ್ರೀಸುಕೃತೀಂದ್ರ ತೀರ್ಥರು ಎಂಬ ನಾಲ್ವರು ಮಹಾನುಭಾವರು ಶ್ರೀ ಗುರುರಾಜರ ಪೀಠವನ್ನ ಲಂಕರಿಸಿ ಕೀರ್ತಿಗಳಿಸಿದರು.

ಶ್ರೀಸುಜ್ಞಾನೇಂದ್ರ ತೀರ್ಥರಿಗೆ। ಶ್ರೀ ರಾಜಾ ವೇಣುಗೋಪಾಲಾ ಚಾರ್ಯರು, 2 ರಾಜಾ. ಶ್ರೀಕೃಷ್ಣಾಚಾರ್ಯರು, 3 ರಾಜಾ ಶ್ರೀ ಸುಜ್ಞಾನೇಂದ್ರಾಚಾರ್ಯರೆಂಬ ಮೂರುಜನ ಮರಿಮಕ್ಕಳಾದರು. ವೇಣುಗೋಪಾಲಾಚಾರ್ಯರು ಶ್ರೀಸುಕೃತೀಂದ್ರತೀರ್ಥರೆಂಬ ಹೆಸರಿನಿಂದ ಪ್ರಖ್ಯಾತರಾದರು. ಎರಡನೆಯವರಾದ ಶ್ರೀಕೃಷ್ಣಾಚಾರ್ಯರಿಗೆ ಶ್ರೀಸುಕೃತೀಂದ್ರ ತೀರ್ಥರು ಕ್ರಿ.ಶ. 1912ರಲ್ಲಿ ವಿಜಯಾದಶಮೀ, ಶ್ರೀಮಧ್ವಜಯಂತಿಯ ಮಂಗಳಕರದಿನದಂದು ಪರಮಹಂಸಾಶ್ರಮ ಪ್ರದಾನಮಾಡಿ ಶ್ರೀಮಧ್ವಾಚಾರ್ಯರ ವೇದಾಂತ ಸಾಮ್ರಾಜ್ಯ ವಿದ್ಯಾಸಿಂಹಾಸನದಲ್ಲಿ ಮಂಡಿಸಿ ''ಶ್ರೀಸುಶೀಲೇಂದ್ರ ತೀರ್ಥ''ರೆಂದು ನಾಮಕರಣಮಾಡಿ ಮಹಾಸಂಸ್ಥಾನವನ್ನು ಒಪ್ಪಿಸಿಕೊಟ್ಟು ಶ್ರೀಹರಿಪಾದಸೇರಿದರು. ಶ್ರೀವಿಜಯದಶಮೀ, ಶ್ರೀಮಧ್ವಜಯಂತಿಯ ಮಂಗಳಕರ ದಿನ ಮಹಾಸಂಸ್ಥಾನಾಧಿಪತಿಗಳಾದ ಶ್ರೀಸುಶೀಲೇಂದ್ರತೀರ್ಥರು ಅನಿತರ ಸಾಧಾರಣ ಕಾರ್ಯಗಳನ್ನೆಸಗಿ ಶ್ರೀಮಂತ್ರಾಲಯದ ಮಹಾಶಿಲ್ಪಿಗಳಲ್ಲಿ ಮೊದಲಿಗ ರಾಗಿ ಕೀರ್ತಿಗಳಿಸಿದರು. ಶ್ರೀಗುರುರಾಜರ, ಶ್ರೀಮಹಾಸಂಸ್ಥಾನದ ಕೀರ್ತಿ ಎಲ್ಲೆಡೆ ಬೆಳಗುವಂತೆ ಮಾಡಿದ ಶ್ರೇಯಸ್ಸು ಶ್ರೀಸುಶೀಲೇಂದ್ರರಿಗೆ ಸಲ್ಲುವುದು.

ನ್ಯಾಯ-ವೇದಾಂತದಿಶಾಸ್ತ್ರಗಳಲ್ಲಿ ಪ್ರಕಾಂಡ ಪಂಡಿತರೂ, ಪಾಠ-ಪ್ರವಚನ ಧುರೀಣರೂ ವಿದ್ವತ್ಪೋಷಣ ದೀಕ್ಷಾಬದ್ಧರೂ, ಸರ್ವಸಜ್ಜನೋದ್ಧಾರಕರೂ ಆದ ಶ್ರೀಗಳವರು ಮಾಡಿದ ಮಹಾಸಂಸ್ಥಾನ ಮತ್ತು ಶ್ರೀಗುರುರಾಜರ ಸೇವೆ ಅಸಾಧಾರಣವಾದುದು. ಮಂತ್ರಾಲಯ ಗ್ರಾಮವು ಮಠದ ಸ್ವಾಧೀನದಲ್ಲಿದ್ದರೂ ಶ್ರೀರಾಯರ ಬೃಂದಾವನದ ಮೆಲಿನ ಅಧಿಕಾರ ತಮ್ಮದೆಂದು ಅರ್ಚಕರು ವಾದಿಸಿ ಮಠಕ್ಕೆ ಬೃಂದಾವನದ ಮೇಲಿನ ಅಧಿಕಾರವೇ ಇಲ್ಲದಂತಾಗುವ ಪ್ರಸಂಗಬಂದಾಗ ಶ್ರೀಸುಪ್ರಜ್ಞೇಂದ್ರ-ಸುಕೃತೀಂದ್ರರ ಕಾಲದಿಂದಲೂ ಶ್ರೀ ಸುಶೀಲೇಂದ್ರರು ತಮ್ಮ ಪೂರ್ವಾಶ್ರಮದಲ್ಲಿ ಶ್ರೀರಾಯರ ಬೃಂದಾವನನದ ಮೇಲೆ ಶ್ರೀಮಠದ ಅಧಿಕಾರವನ್ನು ಉಳಿಸಲು ನ್ಯಾಯಲಯದಲ್ಲಿ ಸುಮಾರು ಹತ್ತಾರುವರ್ಷ ಹೋರಾಡಿ ಬೃಂದಾವನದ ಮೇಲೆ ಶ್ರೀಮಠಕ್ಕೆ ಅಧಿಕಾರವೇ ವಿನಃ ಅರ್ಚಕರಿಗಿಲ್ಲ. ಅರ್ಚಕರು ವರ್ಷಕ್ಕೆ 25 ರೂಪಾಯಿಗಳ ಸಂಬಳಕ್ಕೆ ಮಾತ್ರ ಬಾಧ್ಯರೆಂದು ಶ್ರೇಷ್ಠನ್ಯಾಯಲಯದ ತೀರ್ಪು ಬರುವಂತೆಮಾಡಿ, ಆನಂತರ ಬೃಂದಾವನದ ಅಧಿಕಾರವನ್ನು ಸ್ವಾಧೀನಪಡಿಸಿ ಕೊಳ್ಳಲು ಹತ್ತಾರುವರ್ಷ ಶ್ರಮಿಸಿ ಪೀಠಾಧೀಶರಾದ ತರುಣದಲ್ಲೇ ಶ್ರೀಸುಶೀಲೇಂದ್ರರು ಶ್ರೀಗುರುರಾಜರ ಬೃಂದಾವನದ ಮೇಲಿನ ಅಧಿಕಾರವನ್ನು ಶಾಶ್ವತವಾಗಿ ಶ್ರೀಮಠಕ್ಕೆ ಉಳಿಸಿಕೊಟ್ಟು, ಎಂದಿಗೂ ಮರೆಯಲಾದ ಮಹಾ ಸಂಸ್ಥಾನ ಸೇವೆಮಾಡಿ ಅಪಾರ ಕೀರ್ತಿಗಲಿಸಿದರು. ಬೃಂದಾವನವೇ ಮಠಕ್ಕಿಲ್ಲದಿದ್ದಲ್ಲಿ ಮುಂದಿನ ಪೀಠಾಧೀಶರು ಅದನ್ನು ಅಭಿವೃದ್ಧಿಪಡಿಸಿ, ನೂತನ ಮಂತ್ರಾಲಯದ ಮಹಾಶಿಲ್ಪಿಗಳೆಂದು ಖ್ಯಾತರಾಗಲು ಸಾಧ್ಯವಿತ್ತೆ? ಇಂತಹ ಮಹತ್ವಪೂರ್ಣ ಸೇವೆ ಮಾಡಿ ಶ್ರೀಮಠಕ್ಕೆ ರಾಯರ ಬೃಂದಾವನದ ಅಧಿಕಾರವನ್ನು ಉಳಿಸಿಕೊಟ್ಟ ಶ್ರೀಸುಶೀಲೇಂದ್ರರಿಗೆ ಇಂದು-ಮತ್ತು ಮುಂದಿನ ತಲೆಮಾರಿನ ಪೀಠಾಧೀಶರು ಕೃತಜ್ಞರಾಗಿರಬೇಕು.

ಇದಾದನಂತರ ಶ್ರೀಗಳವರು ಮಂತ್ರಾಲಯದ ಅಭಿವೃದ್ಧಿಕಾರ್ಯ ವನ್ನಾರಂಭಿಸಿ ಶ್ರೀರಾಯರ ಪೂಜಾರಾಧನೆ, ವಿಶೇಷ ಉತ್ಸವಗಳು, ಪ್ರತಿನಿತ್ಯ ಹಸ್ತೋದಕ, ಅಲಂಕಾರ, ಬ್ರಾಹ್ಮಣಸುವಾಸಿನಿಯರ ಭೋಜನ, ವಿಶೇಷೋತ್ಸ ವಗಳು ಆರಾಧನಾಂಗವಾಗಿ ಪಂಚರಾತ್ರೋತ್ಸವ, ಆ ಕಾಲದಲ್ಲಿ ಶ್ರೀಸಮೀರ ಸಮಯ ಸಂವರ್ಧಿನೀಸಭೆ, ವಾಕ್ಯಾರ್ಥ, ವಿದ್ವಾಂಸರ ಸನ್ಮಾನ, ಮಹಾಸಂಸ್ಥಾನದ

ಅಭಿವೃದ್ಧಿ, ಪಾಠಪ್ರವಚನ ದೇವತಾರ್ಚನ, ಸಜ್ಜನಪೋಷಣ, ಸಂಸ್ಕೃತ ಪಾಠಶಾಲಾಸ್ಥಾಪನೆ, ಮುಂತಾದ ಕಾರ್ಯಗಳನ್ನು ಮಾಡುತ್ತಾ ಮಂತ್ರಾಲಯದ ಸರ್ವತೋಮುಖ ಅಭಿವೃದ್ಧಿಕಾರ್ಯಮಾಡಿ, ಶ್ರೀರಾಯರ ಮಹಿಮಾ ಪ್ರಸಾರ ಮಾಡಿ ಸರ್ವರಿಂದ ವಂದ್ಯರಾಗಿ ಕೀರ್ತಿಗಳಿಸಿದರು. ಇವರು ಧಾರವಾಡಜಿಲ್ಲೆಯ ಹಾವೇರಿತಾಲ್ಲೂಕಿನ ಹೊಸರಿತ್ತಿ ಕ್ಷೇತ್ರದಲ್ಲಿ ಶ್ರೀಧೀರೇಂದ್ರತೀರ್ಥರ ಸನ್ನಿಧಿಯಲ್ಲಿ ಶ್ರೀರಾಯರ ಪ್ರತ್ಯಕ್ಷದರ್ಶನ ಪಡೆದು, ಪಂಡಿತಪ್ರಕಾಂಡ ದುರ್ಗದ ಕೃಷ್ಣಾಚಾರ್ಯರಿಗೆ ಆಶ್ರಮವಿತ್ತು ''ಶ್ರೀಸುವ್ರತೀಂದ್ರತೀರ್ಥ''ರೆಂಬ ಹೆಸರಿನಿಂದ ಪಟ್ಟಾಭಿಷೇಕಮಾಡಿ ನಾರಾಯಣ ಧ್ಯಾನಪರರಾಗಿ ಬೃಂದಾವನಸ್ಥರಾದರು.

ಈ ಮಹಾಪೀಠದಲ್ಲಿ ವಿರಾಜಿಸಿ ಕೀರ್ತಿಗಳಿಸಿದವರಲ್ಲಿ ''ಆಧುನಿಕ ಮಂತ್ರಾಲಯದ ಮಹಾಶಿಲ್ಪಿ' ಗಳೆನಿಸಿದ ಮೂರವಲ್ಲಿ ಶ್ರೀಸುಶೀಲೇಂದ್ರತೀರ್ಥರು ಮೊದಲನೆಯವರು. ಇವರ ಉಪಕಾರವನ್ನು ಭಕ್ತ-ಶಿಷ್ಯ ಜನರು ಎಂದಿಗೂ ಮರೆಯುವಂತಿಲ್ಲ.

''ಸುಧಾದ್ಯಮಲಸದ್ಬೋಧಂ ಸುಕೀರ್ತಿವಿಲಸದ್ವಿಶಂ।
ಸುಧೀಸಂಸ್ತುತ್ಯಸುಗುಣಂ ಸುಶೀಲೇಂದ್ರಗುರುಂ ಭಜೇ॥''

2. ಶ್ರೀಸುಯಮೀಂದ್ರತೀರ್ಥರು - (1933-1967)

ಶ್ರೀಸುಶೀಲೇಂದ್ರರಿಂದ ಆಶ್ರಮಪಡೆದು ಪೀಠಾಧೀಶರಾದ 1926-1933 ಶ್ರೀಸುವ್ರತೀಂದ್ರತೀರ್ಥರಿಂದ ಆಶ್ರಮಪಡೆದು ಶ್ರೀಸುಯಮೀಂದ್ರ ತೀರ್ಥರೆಂಬ ಆಚಾರ್ಯ ಶ್ರೀಮಧ್ವರ ವಿದ್ಯಾಸಾಮ್ರಾಜ್ಯದಲ್ಲಿ 1933ನೇ ವೈಶಾಖ ಶುಕ್ಲಪಂಚಮಿ ಅಭಿಷಕ್ತರಾದ ಶ್ರೀಸುಯಮಿಂದ್ರತೀರ್ಥರು 1933ರಿಂದ 1967ರ ಜನವರಿ ರವರೆಗೆ ಮಹಾಸಂಸ್ಥಾನವನ್ನು ಪರಿಪಾಲಿಸಿದರು. ಇವರು ತಮ್ಮ ಗುರುಗಳ ಅಪ್ಪಣೆಯಂತೆ ಮಹಾಸಂಸ್ಥಾನ ಮತ್ತು ಮಂತ್ರಾಲಯದ ಅಭಿವೃದ್ಧಿಯನ್ನು ಅಸಾಧಾರಣ ರೀತಿಯಿಂದ ನೆರವೇರಿಸಿದರು. 30-40 ಸಾವಿರ ಆದಾಯವಿದ್ದ ಮಠವನ್ನು ಅಭಿವೃದ್ಧಿಸಿ, ಅದು 15 ಲಕ್ಷಕ್ಕೇರುವಂತೆ ಮಾಡಿದರು. **3 ಸಾವಿರ** ಆದಾಯವಿದ್ದ ಶ್ರೀ ಬೃಂದಾವನ ಸನ್ನಿಧಿಯ ಉತ್ಪನ್ನವನ್ನು 5-6 ಲಕ್ಷಕ್ಕೇರುವಂತ ಮಾಡಿದರು. ಬೃಂದಾವನ ಅಲಯಜೀರ್ಣೋದ್ಧಾರ, ಛತ್ರ, ಕಟ್ಟಡಗಳು, ಶಿಲಾಮಟಂಪಗಳು, ಭೋಜನಶಾಲೆ, ಶ್ರೀಮಂತ್ರಾಲಯಮ್ಮನ ಗುಡಿಗಳನ್ನು,

ನಿರ್ಮಿಸಿದರು. ಮಂತ್ರಾಲಯದಲ್ಲಿ ಮಠದ ಪೂರ್ಣಾಧಿಕಾರ ಸ್ಥಾಪಿಸಲು ಶ್ರೀರಾಘವೇಂದ್ರಸ್ವಾಮಿಗಳ ಬೃಂದಾವನಕಛೇರಿಯನ್ನು ಪ್ರಪ್ರಥಮವಾಗಿ ಸ್ಥಾಪಿಸಿ, ಸೇವಾವ್ಯವಸ್ಥೆ, ನಿತ್ಯನೈಮಿತ್ತಿಕ, ವಿಶೇಷಉತ್ಸವ, ಆರಾಧನಾ ಸಪ್ತರಾತ್ರೋತ್ಸವ, ವಿದ್ವತ್ಸಭೆ, ವಿದ್ವತ್ಪೋಷಣೆ, ಸಂಸ್ಕೃತ ಕಾಲೇಜುಸ್ಥಾಪನ, ಬ್ರಾಹ್ಮಣಸುವಾಸನಿಯರಿಗೆ ಭೋಜನ, ಯಾತ್ರಾರ್ಥಿಗಳಿಗೆ ಸಕಲ ಸೌಕರ್ಯ, ಶ್ರೀರಾಯರಿಗೆ ರತ್ನಕಿರೀಟ, ಸುವರ್ಣಾಭರಣಗಳು, ರಜತ ರಥ. ಪಾಲಕಿ, ಪೀಠಪ್ರಭಾವಳಿ, ಉತ್ಸವರಾಯರಿಗೆ ಸ್ವರ್ಣಕವಚ, ಪಂಚೆ, ಹಸ್ತಪಾದಗಳು, ಹೀಗೆ ಅಮಿತರೀತಿಯಿಂದ ಅಭಿವೃದ್ಧಿಪಡಿಸಿದ್ದಲ್ಲದೆ ಕೋಟ್ಯಂತರರೂಪಾಯಿ ಬೆಲೆ ಬಾಳುವ ಹೊಸ ಆಸ್ತಿ, ಕೈಬಿಟ್ಟು ಹೋಗಿದ್ದ ಜಮೀನು, ಕೈಬಿಟ್ಟ ಮಠಗಳನ್ನು ಮತ್ತೆ ಸಂಪಾದಿಸಿ ಶ್ರೀರಾಯರ ಮಹಿಮಾಪ್ರಸಾರಮಾಡಿ ಲಕ್ಷಾಂತರ ಭಕ್ತರು ಬಂದು ರಾಯರನ್ನು ಸೇವಿಸಿ ಉದ್ಧೃತರಾಗುವಂತೆಮಾಡಿ ಮಂತ್ರಾಲಯದ ಮಹಾಶಿಲ್ಪಿಗಳೆಂದು ಅಪಾರ ಕೀರ್ತಿ ಗಳಿಸಿದರು.

ಸುಖತೀರ್ಥಮತಾಬ್ಧೀಂದುಂ ಸುಧೀಂದ್ರಸುತಸೇವಕಂ।
ಸುಧಾಪರಿಮಳಾಸಕ್ತಂ ಸುಯಮೀಂದ್ರಗುರುಂ ಭಜೇ॥

3. ಶ್ರೀಸುಜಯೀಂದ್ರತೀರ್ಥರು – (1933 1986)

ಶ್ರೀಸುಯಮೀಂದ್ರತೀರ್ಥರಿಂದ ಆಶ್ರಮಪಡೆದು "ಶ್ರೀಸುಜಯೀಂದ್ರ ತೀರ್ಥ"ರೆಂಬ ಹೆಸರಿನಿಂದ ಶ್ರೀಮಧ್ವಾಚಾರ್ಯರ ವಿದ್ಯಾಸಿಂಹಾಸನದಲ್ಲಿ ಪಟ್ಟಾಭಿಷಿಕ್ತರಾದ ಶ್ರೀಸುಜಯೀಂದ್ರತೀರ್ಥರು ತಮ್ಮ ಗುರುಗಳ ಆದೇಶದಂತೆ ಮಂತ್ರಾಲಯಕ್ಕೆ ದಯಮಾಡಿಸಿ ಅಲ್ಲಿ ಪ್ರತಿನಿತ್ಯ ಶ್ರೀರಾಯರ ಸೇವೆಮಾಡುತ್ತಾ ನೂರಾರು ಕಟ್ಟಡ, ಕಾಲೇಜುಗಳು, ಭೋಜನಶಾಲೆಗಳು, ಕಲ್ಯಾಣಮಂಟಪ, ಆಲಯಕ್ಕೆ ಸುಂದರವಾದನೂತನ ಕಟ್ಟಡ, ಆಸ್ಪತ್ರೆ, ವಿದ್ಯುದ್ದೀಪ, ನೀರಿನ ಸೌಕರ್ಯ, ಪ್ರತಿನಿತ್ಯ ಸಾವಿರಾರು ಜನರಿಗೆ ಭೋಜನ, ಶ್ರೀರಾಯರಿಗೆ ಸುವರ್ಣಕವಚ, ಸುವರ್ಣಾಭರಣಗಳನ್ನು ಮಾಡಿಸಿ ಉತ್ತಮ ಆಡಳಿತನೆಡಸಿ ಮಂತ್ರಾಲಯದ ಅಭಿವೃದ್ಧಿಯನ್ನು ಅತ್ಯಂತವಾಗಿಮಾಡಿ ಮಂತ್ರಾಲಯವನ್ನು "ಸುರಪನಾಲಯದಂತೆ ಮಂತ್ರಾಲಯ" ಎಂಬ ಹರಿದಾಸರ ವಚನವನ್ನು ಅನ್ವರ್ಥಗೊಳಿಸಿದ್ದಲ್ಲದೆ, ಭಾರತಾದ್ಯಂತ ಶ್ರೀರಾಯರ ಬೃಂದಾವನ ಪ್ರತಿಷ್ಠೆ,

ಕಟ್ಟಡ ನಿರ್ಮಾಣಗಳನ್ನು ಮಾಡಿ ಮಂತ್ರಾಲಯದಲ್ಲಿ ಕೋಟ್ಯಂತರ ರೂಪಾಯಿ ಆದಾಯಬರುವಂತೆ ಮಾಡಿದರು, ಶ್ರೀಮಠದ ಆದಾಯವೂ ಅತ್ಯಧಿಕವಾಗುವಂತೆಮಾಡಿ ಸರ್ವರ ಗೌರವಾದರಗಳಿಗೆ ಪಾತ್ರರಾಗಿ "ಮಂತ್ರಾಲಯದ ಮಹಾಶಿಲ್ಪಿ"ಗಳೆಂದು ಕೀರ್ತಿಗಳಿಸಿದರು. ಮೇಲೆ ಹೇಳಿದ ಮೂವರು ಶಿಲ್ಪಿಗೆ ಸಮಸ್ತ ಶಿಷ್ಯ-ಭಕ್ತವೃಂದ ಯಾವಾಗಲೂ ಕೃತಜ್ಞವಾಗಿದೆ.

ಸುಯಮೀಂದ್ರಕರಾಬ್ಜೋತ್ಥಂ ಸುವಿದ್ಯಾಬೋಧಕಂ ಸದಾ ।
ಸುಮೂಲರಾಮಪೂಜಾಢ್ಯಂ ಸುಜಯೀಂದ್ರಗುರುಂ ಭಜೇ ॥

ಉಪಸಂಹಾರ

ಶ್ರೀಸುಜಯೀಂದ್ರತೀರ್ಥರಿಂದ ಆಶ್ರಮಪಡೆದು "ಶ್ರೀಸುಶಮೀಂದ್ರತೀರ್ಥ"ರೆಂಬ ಹೆಸರಿನಿಂದ ಪಟ್ಟಾಭಿಷಿಕ್ತರಾದ ನೂತನ ಪೀಠಾಧೀಶ್ವರರು ಇಂದು ಶ್ರೀಮಹಾಸಂಸ್ಥಾನದಲ್ಲಿ ವಿರಾಜಿಸಿ ಶ್ರೀಮಠದ ಮತ್ತು ಮಂತ್ರಾಲಯದ ಅಭಿವೃದ್ಧಿಮಾಡುತ್ತಾ ಸರ್ವರೂ ಶ್ರೀರಾಯರ ಭಕ್ತರಾಗುವಂತೆ ಮಾಡುತ್ತಾ ಲೋಕಕಲ್ಯಾಣ ಮಾಡುತ್ತಿದ್ದಾರೆ. ಶ್ರೀ ಸುಶಮೀಂದ್ರತೀರ್ಥರು ಬಹುಕಾಲ ಶ್ರೀಗುರುರಾಜರ ಪೀಠದಲ್ಲಿ ವಿರಾಜಿಸಿ, ವಿದ್ವಜ್ಜನ, ಶಿಷ್ಯಭಕ್ತಜನರನ್ನು ಕಾಪಾಡಿಕೊಂಡು ಬರುವಂತೆ ಶ್ರೀಮೂಲರಘುಪತಿ ವೇದವ್ಯಾಸದೇವರು. ಶ್ರೀಮಧ್ವಾಚಾರ್ಯರು, ಶ್ರೀಗುರುರಾಜರು ಅನುಗ್ರಹಿಸಲಿಯೆಂದು ಪ್ರಾರ್ಥಿಸುತ್ತಾ ವಿರಮಿಸುವೆವು.

"ಜೀಯಾತ್ ಶ್ರೀಸುಶಮೀಂದ್ರತೀರ್ಥಯತಿರಾಟ್
ವೇದಾಂತರಾಜ್ಯೇ ಚಿರಮ್"

ಶ್ರೀಕೃಷ್ಣಾರ್ಪಣಮಸ್ತು

|| ಶ್ರೀಗುರುರಾಜೋ ವಿಜಯತೇ ||

ಶ್ರೀಹರಿ-ಗುರು

ಶ್ರೀರಾಘವೇಂದ್ರ-ಸುಪ್ರಭಾತಮ್

ರಾಜಾ ಶ್ರಿ ಗುರುರಾಜಾಚಾರ್ಯ ವಿರಚಿತಮ್

ಶ್ರೀಮೂಲರಾಮಸ್ತುತಿ :

ಇಕ್ಷ್ವಾಕುವಂಶ್ಯನೃಪಮೌಕ್ತಿಕಭೂಷಿತಾತ್ಮನ್ ।
ಶ್ರೀಬ್ರಹ್ಮಹಸ್ತನಲಿನಾರ್ಚಿತಪಾದಪದ್ಮ ।
ಆನಂದತೀರ್ಥಮುಖತೀರ್ಥನಿಷೇವ್ಯಮಾಣ ।
ಶ್ರೀಮೂಲರಾಮ, ಭಗವನ್! ತವ ಸುಪ್ರಭಾದಮ್ || 1 ||

ತಾತ್ಪರ್ಯ : ಶ್ರೀ ಹರಿ-ಗುರು-ರಾಘವೇಂದ್ರರಿಗೆ ಸುಪ್ರಭಾತವನ್ನು ಹೇಳುವುದರಿಂದ ಸುಪ್ರೀತರಾದ ಅವರು ಭಕ್ತರಿಗೆ ಮಂಗಳವನ್ನು ಕರುಣಿಸುವರು ಎಂಬುದು ಆರ್ಷೇಯುವಾಗಿ ಬಂದ ನಂಬಿಕೆಯಾಗಿದೆ. ಕವಿಯು ಶ್ರೀರಾಘವೇಂದ್ರಸ್ವಾಮಿಗಳ ಮಠದಲ್ಲಿ ಆರಾಧ್ಯವಾದ ಮುಖ್ಯ ಪ್ರತಿಮೆಗಳು; ಶ್ರೀನಿವಾಸ, ಉಡುಪಿಕೃಷ್ಣ, ಮಹಾಲಕ್ಷ್ಮೀ, ವಾಯುದೇವರು, ಶ್ರೀಕಂಠೇಶ್ವರ ಸ್ವಾಮಿ, ಶ್ರೀಮಧ್ವಾಚಾರ್ಯರ ಪೀಠಪರಂಪರೆಯ ಜ್ಞಾನಿಗಳು ಮತ್ತು ಶ್ರೀರಾಘವೇಂದ್ರಸ್ವಾಮಿಗಳವರನ್ನು ಸುಪ್ರಭಾತದಿಂದ ಸ್ತುತಿಸಲು ಆಶಿಸಿ ಮೊದಲು ಶ್ರೀರಾಘವೇಂದ್ರಸ್ವಾಮಿಗಳ ಮಠದ ಮುಖ್ಯ ಪ್ರತಿಮೆಯಾದ ಚತುರ್ಯುಗಮೂರ್ತಿ ಶ್ರೀಮೂಲರಾಮದೇವರಿಗೆ ಸುಪ್ರಭಾತವನ್ನು ಬಯಸುತ್ತಿದ್ದಾನೆ -

ಇಕ್ಷ್ವಾಕುವಂಶಜರಾದ ನೃಪಶ್ರೇಷ್ಠರೆಂಬ ಮುತ್ತುಗಳಿಂದ ಅಲಂಕೃತಶರೀರವುಳ್ಳವನೇ! ಶ್ರೀಬ್ರಹ್ಮದೇವರ ಕರಕಮಲಾರ್ಚಿತ ಪಾದಪದ್ಮಉಳ್ಳವನೇ, ಶ್ರೀಮನ್ಮಧ್ವಾಚಾರ್ಯರೇ ಮೊದಲಾದ ಪೂಜ್ಯರಿಂದ

ಸಂಸೇವಿತನೇ, ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಮೂಲರಾಮಚಂದ್ರ! ನಿನಗೆ ಸುಪ್ರಭಾತವಾಗಲಿ ॥ ೧॥

ಶ್ರೀದಿಗ್ವಿಜಯರಾಮಸ್ತುತಿ :

ಮಧ್ವಾಖ್ಯಭಾವಿವಿಧಿನಿರ್ಮಿತರೌಪ್ಯಮೂರ್ತೇ।
ರಮ್ಯಾಂಘ್ರಿಪೀಠವಿಲಸತ್‌ಸ್ವದಶಾವತಾರ ॥
ಶ್ರೀಷಾಂಘ್ರಿಶೋಭಿತಸುದರ್ಶನದರ್ಶನೀಯ
ಶ್ರೀರಾಮದಿಗ್ವಿಜಯಿನಸ್ತವ ಸುಪ್ರಭಾತಮ್ ॥ 2 ॥

ತಾತ್ಪರ್ಯ : ಕವಿಯು ಈಗ, ಶ್ರೀಮಧ್ವಾಚಾರ್ಯರಿಗೆ ಗೋಪೀಚಂದನದ ಗಡ್ಡೆಯಲ್ಲಿ ಶ್ರೀಕೃಷ್ಣನೊಡನೆ ದೊರಕಿದ ದಶಾವತಾರಯುಕ್ತ ರಜತಪೀಠದ ಮೇಲೆ ಶ್ರೀಮಧ್ವಾಚಾರ್ಯರು ಸ್ವಹಸ್ತದಿಂದ ನಿರ್ಮಿಸಿ ಪೂಜಿಸಿದ ಶ್ರೀದಿಗ್ವಿಜಯರಾಮ ದೇವರಿಗೆ ಸುಪ್ರಭಾತವನ್ನು ಪ್ರಾರ್ಥಿಸುತ್ತಾನೆ.

ಮುಂದಿನಕಲ್ಪದಲ್ಲಿ ಬ್ರಹ್ಮಪದವಿಗೆ ಬರಲಿರುವ ಶ್ರೀಮಧ್ವಾಚಾರ್ಯರೆಂಬ ಹೆಸರಿನ ಮುಖ್ಯಪ್ರಾಣದೇವರಿಂದ ನಿರ್ಮಿಸಲ್ಪಟ್ಟ, ರಜತಮಯ ವಿಗ್ರಹನಾದ, ಸುಂದರಪಾದಪೀಠಗಳಲ್ಲಿ ನಿನ್ನ ದಶಾವತಾರಮೂರ್ತಿಗಳಿಂದ ಕಂಗೊಳಿಸುವ, ಶಿರಸ್ಸು, ಪಾದಗಳಲ್ಲಿ ಶೋಭಿಸುವ ಸುದರ್ಶನಗಳಿಂದ ಪ್ರೇಕ್ಷಣೀಯ ಸೌಂದರ್ಯೋಪೇತನಾದ ಶ್ರೀದಿಗ್ವಿಜಯರಾಮದೇವ! ನಿನಗೆ ಸುಪ್ರಭಾತವಾಗಲಿ ॥ 2 ॥

ಶ್ರೀಜಯರಾಮಸ್ತುತಿ :

ಟೀಕಾಕೃತೀದ್ಧಜಯತೀರ್ಥಸಮರ್ಥಿತಾಗ್ರ್ಯ *
ಸ್ವೋರಸ್ಥಪೀಠ! ಜಯರಾಮ! ಜಗನ್ನಿಯಂತಃ।
ಶ್ರೀಭ್ವಾದಿಪಾರ್ಶ್ವಪರಿಶೋಭಿತ ವಾಸುದೇವ
ಶ್ರೀವ್ಯಾಸದೇವ। ಕಲಯೇ ತವ ಸುಪ್ರಭಾತಮ್ ॥ 3 ॥

---

* ಪಾ : ಸಮರ್ಚಿತ್ವಾಗ್ರ್ಯ

ತಾತ್ಪರ್ಯ : ಈಗ ಶ್ರೀಜಯತೀರ್ಥ ಶ್ರೀಪಾದಂಗಳವರು ಪೂಜಿಸಿದ ಶ್ರೀಜಯರಾಮದೇವರು ಮತ್ತು ಸ್ರೀಕೃಷ್ಣನ, ಅಷ್ಟಮಹಿಷಿಯರಲ್ಲಿ ಒಬ್ಬಳಾದ ನೀಲಾದೇವಿಯು ಪೂಜಿಸಿದ ನವರತ್ನಖಚಿತವಾದ ಶ್ರೀದೇವಿ ಭೂದೇವಿ. ದುರ್ಗಾದೇವಿಯಿಂದ ಕೂಡಿದ ಶ್ರೀವೈಕುಂಠವಾಸುದೇವರಿಗೆ ಕವಿಯು ಸುಪ್ರಭಾತವನ್ನು ಕೋರುತ್ತಿದ್ದಾನೆ. (ಮಧುರೆಯ ಪಾಂಡ್ಯರಾಜರು ಶ್ರೀ ಸಮತೀಂದ್ರತೀರ್ಥರಿಗೆ ಈ ಪ್ರತಿಮೆಯನ್ನು ಕಾಣಿಕೆಯಾಗಿ ಸಮರ್ಪಿಸಿದ್ದರು. ಅಲಾಗಾಯಿತು ಶ್ರೀರಾಘವೇಂದ್ರಸ್ವಾಮಿಗಳ ಮಠದಲ್ಲಿ ಈ ಪ್ರತಿಮೆಯು ಪೂಜೆಗೊಳ್ಳುತ್ತಿದೆ-ಪ್ರಕಾಶಕ) ಟೀಕಾರೂಪವ್ಯಾಖ್ಯಾನಗಳಿಂದ ಪ್ರಕಾಶಿಸುತ್ತಿರುವ, ಶ್ರೀಜಯತೀರ್ಥರಿಂದ ಸಾಧಿಸಲ್ಪಟ್ಟ (ಪಾ.ಪೂಜಿಸಲ್ಪಟ್ಟ) ಸರ್ವೋತ್ತಮತ್ವವುಳ್ಳವನೇ, ನೈಜವೃಕ್ಷಸ್ಥಳದಲ್ಲಿ ಸೀತಾದೇವಿಯಿಂದ ರಾರಾಜಿಸುತ್ತಿರುವವನೆ, ಶ್ರೀಜಯರಾಮದೇವ! ಜಗನ್ನಿಯಾಮಕನೆ ಮತ್ತು ಶ್ರೀಭೂ-ದುರ್ಗಾ ದೇವಿಯರಿಂದ ಪಾರ್ಶ್ವಗಳಲ್ಲಿ ಪ್ರಕಾಶಿಸಲ್ಪಟ್ಟ ಶ್ರೀವೈಕುಂಠ ವಾಸುದೇವರೇ, ವ್ಯಾಸಮುಷ್ಟಿಕೆಯಲ್ಲಿ ಅಂತರ್ಗತನಾದ ಶ್ರೀವೇದವ್ಯಾಸಾಭಿಧ ಶ್ರೀಹರಿಯೇ, ನಿನಗೆ ಈ ಸ್ತೋತ್ರದ ಮೂಲಕ ಸುಪ್ರಭಾತವನ್ನು ಬಯಸುತ್ತೇನೆ. ॥ 3 ॥

ಶ್ರೀನೃಸಿಂಹಸ್ತುತಿ :

ಸ್ವಪ್ನೋಪಲಬ್ಧವಿಬುಧೇಂದ್ರಕರಾರ್ಚ್ಯ, ಬಾಹು-
ದ್ವ್ಯಷ್ಟಾಭಿಶೋಭಿತ ಹಿರಣ್ಯಕಗರ್ವಹಾರಿನ್।
"ದುರ್ವಾದಿವಾರಣವಿದಾರಣ" ದಕ್ಷಕಾರಿನ್।
ಶ್ರೀಮಜ್ಜಯೀಂದ್ರಸುಯಮೀಷ್ಟದ। ಸುಪ್ರಭಾತಮ್ ॥ 4 ॥

ತಾತ್ಪರ್ಯ: ಇಲ್ಲಿ ಕವಿಯು ಶ್ರೀಮಠದ ಪ್ರಾಚೀನಾಚಾರ್ಯರಾದ ಶ್ರೀವಿಬುಧೇಂದ್ರತೀರ್ಥರಿಗೆ ಸ್ವಪ್ನ ಸೂಚನೆಯಂತೆ ಕೃಷ್ಣಾನದಿಯಲ್ಲಿ ದೊರಕಿ ಅವರಿಂದ ಪೂಜ್ಯನಾದ ಶ್ರೀಷೋಡಶಬಾಹು ಶ್ರೀನೃಸಿಂಹದೇವರಿಗೆ ಸುಪ್ರಭಾತ ಬಯಸುತ್ತಿದ್ದಾನೆ.

ಸ್ವಪ್ನಸೂಚನೆಯಂತ ದೊರೆತವನೇ, ಶ್ರೀವಿಬುಧೇಂದ್ರತೀರ್ಥರ

ಕರಕಮಲಗಳಿಂದ ಪೂಜೆಗೊಂಡವನೇ, ಷೋಢಶಬಾಹುಗಳಿಂದ ಶೋಭಿಸುತ್ತಿರುವವನೇ, ಮತ್ತನಾದ ಹಿರಣ್ಯಕಶ್ಯಪನ ಅಹಂಕಾರವನ್ನು ಮುರಿದವನೇ, ದುರ್ವಾದಿಗಳೆಂಬ ಮದಿಸಿದ ಆನೆಗಳನ್ನು ಸೀಳುವ ಸಾಮರ್ಥ್ಯವನ್ನು ನೀಡುವವನೇ, ಶ್ರೀವಿಜಯೀಂದ್ರತೀರ್ಥರ, ಶ್ರೀಸುಯಮೀಂದ್ರ ತೀರ್ಥರ ಮನೋಭೀಷ್ಟಗಳನ್ನು ಅನುಗ್ರಹಿಸಿದ ಷೋಡಶಬಾಹು ಶ್ರೀನೃಸಿಂಹದೇವ! ನಿನಗೆ ಒಳ್ಳೆಯ ಪ್ರಭಾತವಾಗಲಿ ॥ 4 ॥

ಶ್ರೀಲಕ್ಷ್ಮೀನಾರಾಯಣ ಮತ್ತು ಶ್ರೀಸಂತಾನಕೃಷ್ಣದೇವರ ಸ್ತುತಿ :

ಶ್ರೀಮತ್ಸುಧೀಂದ್ರಕರಪಂಕಜಸೇವ್ಯ, ವೀಶ
ಸ್ಕಂಧಾಧಿರೂಢಕಮಲೇಶ। ಸುವರ್ಣಮೂರ್ತೇ।
ಶ್ರೀರಾಘುವೇಂದ್ರಸುಕರಾರ್ಚಿತ ಸರ್ವದ ಶ್ರೀ–
ಸಂತಾನಕೃಷ್ಣ! ಭವತಾತ್ತವ ಸುಪ್ರಭಾತಂ ॥ 5 ॥

ತಾತ್ಪರ್ಯ: ಶ್ರೀರಾಘವೇಂದ್ರಗುರುಗಳ ಗುರುವರ್ಯರಾದ ಶ್ರೀಸುಧೀಂದ್ರ ತೀರ್ಥ ಶ್ರೀಪಾಂದಗಳವರಿಂದ ಪೂಜಿತನಾದ, ಗರುಡನ ಹೆಗಲಮೇಲೆ ವಿರಾಜಿಸುವ ಶ್ರೀಲಕ್ಷ್ಮೀನಾರಾಯಣದೇವರೇ! ಮತ್ತು ಶ್ರೀರಾಘವೇಂದ್ರಸ್ವಾಮಿಗಳವರ ಮಂಗಳಕರವಾದ ಕರಗಳಿಂದ ಅರ್ಚಿಸಲ್ಪಟ್ಟ, ಸಕಲ ವಾಂಛಿತಾರ್ಥ ಪ್ರದನಾದ ಸುವರ್ಣಮಯವಿಗ್ರಹನಾದ ವೇದ ಪ್ರತಿಪಾದ್ಯನಾದ ಶ್ರೀಸಂತಾನಗೋಪಾಲಕೃಷ್ಣ! ನಿನಗೆ ಶೋಭನಬೆಳಗಾಗಲಿ ಎಂದು ಭಾವ, ಶ್ರೀಗುರುರಾಜರು ಪೂಜಿಸಿದ ಈ ಸಂತಾನಗೋಪಾಲಕೃಷ್ಣನ ಉಪಾಸನೆ, ಅನುಗ್ರಹದಿಂದಲೇ ವಿವಿಧ ರೋಗ, ಭೂತಬಾಧೆಗಳಿಂದ ಪೀಡಿತರಾದವರಿಗೆ, ಸಂತಾನಾಪೇಕ್ಷಿಗಳಿಗೆ, ವಿವಿಧ ಮನೋರಥವನ್ನು ಬಯಸುವವರಿಗೆ, ಭೀತಿಯಂತ್ರ, ಸಂತಾನಯಂತ್ರ, ಸರ್ವಸಿದ್ಧಿಯಂತ್ರಗಳನ್ನು ಶ್ರೀಪೀಠಾಧೀಶರು ಕೊಡುವುದು ಸಂಪ್ರದಾಯವಾಗಿದೆ. ಈ ದೇವರ ಅನುಗ್ರಹದಿಂದ ಯಂತ್ರ ಪಡೆದವರು ತಮ್ಮ ಅಭೀಷ್ಟಸಿದ್ಧಿಯನ್ನು ಹೊಂದಿ ಸುಖಿಸುತ್ತಿರುವುದು ಇಂದು ಪ್ರತಿಯೊಬ್ಬರ ಅನುಭವಕ್ಕೂ ಬಂದ ವಿಷಯವಾಗಿದೆ ॥ 5 ॥

ಶ್ರೀಕೃಷ್ಣಸ್ತುತಿ :

ಸಂಪೂರ್ಣಬೋಧಸುಖಪೂರ್ಣಗುಣೈಕಮೂರ್ತೇ
ಲಕ್ಷ್ಮ್ಯಾದಿಭಿನ್ನಶುಭಜೀವಗಣಾದ್ವರಿಷ್ಠ!
ಜನ್ಮಾದ್ಯಮುಷ್ಯ ವಿದಧತ್ ಶ್ರುತಿಗಮ್ಯ ಕೃಷ್ಣ!
ಶ್ರೀರೌಪ್ಯಪೀಠವಸತೇ ತವ ಸುಪ್ರಭಾತಮ್ ॥ 6॥

ತಾತ್ಪರ್ಯ : ಪರಿಪೂರ್ಣವಾದ ಜ್ಞಾನ ಆನಂದಾದಿ ಅನಂತಕಲ್ಯಾಣ ಗುಣಗಳೇ ಶರೀರವಾಗುಳ್ಳ, ಶ್ರೀಲಕ್ಷ್ಮೀದೇವಿ ಮುಂತಾದವರಿಂದ ಅತ್ಯಂತ ಭಿನ್ನನಾದ, ಮೋಕ್ಷಯೋಗ್ಯರಿಗೆ ಸೃಷ್ಟ್ಯಾದ್ಯಷ್ಟಕವನ್ನು ಯಥಾಯೋಗ್ಯವಾಗಿ ಉಂಟುಮಾಡುವ ಸಕಲವೇದಪ್ರತಿಪಾದ್ಯನೂ ಗಮ್ಯನೂ ಆದ, ಕಾಂತಿ ಸಂಪನ್ನನಾದ, ಸಂಪದ್ಯುಕ್ತನಾದ ರಜತಪೀಠ (ಉಡುಪಿ)ದಲ್ಲಿ ವಿರಾಜಿಸುವ ಹೇ ಕೃಷ್ಣ! ನಿನಗೆ ಸುಪ್ರಭಾತವಾಗಲಿ ॥ 6॥

ಶ್ರೀವೆಂಕಟೇಶಸ್ತುತಿ:

ವೇದೈಕವೇದ್ಯ ಭವವೈದ್ಯ ಸುದೇವತಾದ್ಯ!
ಬ್ರಹ್ಮಾದಿವಂದ್ಯ ನಿರವದ್ಯಲಸದ್ಗುಣಾಢ್ಯ!
ಮಧ್ವಾದ್ಯಪೀಠಗಯತೀಂದ್ರನಿಷೇವ್ಯಮಾಣ!
ಭೋ ವೆಂಕಟೇಶ! ಭವತಾತ್ತವ ಸುಪ್ರಭಾತಮ್ ॥ 7॥

ತಾತ್ಪರ್ಯ : ಅಪೌರುಷೇಯಗಳಾದ ಸದಾಗಮಗಳಿಂದ ಮಾತ್ರ ತಿಳಿಯಲು ಯೋಗ್ಯನಾದ. ಸಂಸಾರವೆಂಬ ಮಹಾರೋಗದಿಂದ ಬಳಲುತ್ತಿರುವ ಸುಜನರಿಗೆ ಆ ರೋಗ ನಿವಾರಣಮಾಡಲು ಶಕ್ತನಾದ ವೈದ್ಯನಂತಿರುವ, ಮಂಗಳದೇವತೆಯಾದ ಶ್ರೀಲಕ್ಷ್ಮೀದೇವಿಗೂ ಮೊದಲಿಗನಾದ, ಅಥವಾ ಸಕಲದೇವತೆಗಳ ಗುಂಪಿನಲ್ಲಿ ಅಗ್ರಗಣ್ಯನಾದ (ಸರ್ವೋತ್ತಮನಾದ), ಶ್ರೀಚತುರ್ಮುಖಬ್ರಹ್ಮದೇವರು, ವಾಯು, ಗರುಡ-ಶೇಷ-ರುದ್ರಾದಿ ದೇವತೆಗಳಿಂದ ವಂದನೀಯನಾದ, ದೋಷರಹಿತಗಳಾದ ಅನಂತಕಲ್ಯಾಣಗುಣ ಪೂರ್ಣನಾಗಿ ಕಂಗೊಳಿಸುವ ಶ್ರೀಮದಾಚಾರ್ಯರ ಮುಖ್ಯಪೀಠಸ್ಥರಾದ

ಯತಿವರ್ಯರಿಂದ ಸೇವೆಯನ್ನು ಸ್ವೀಕರಿಸುತ್ತಿರುವ ಹೇ ಶ್ರೀನಿವಾಸದೇವ, ಶ್ರೀವೆಂಕಟೇಶ್ವರ, ನಿನಗೆ ಸುಪ್ರಭಾತವಾಗಲಿ. ॥ 7 ॥

ಶ್ರೀಲಕ್ಷ್ಮೀಸ್ತುತಿ :

ಕೀಲಾಲಜಾಕ್ಷಮಧುವೈರಿಮನೋನುಕೂಲ-
ಲೀಲಾವಿಲಾಸರಸಿಕೇಽಖಿಲೋಕಮಾತಃ।
ನೀಲಾಲಕಾಲಿಕಲಿತಾಮಲಫಾಲದೇಶೆ!
ಬಾಲಾರ್ಕಭೆ! ಸುಕಮಲೆ! ತವ ಸುಪ್ರಭಾತಮ್ ॥ 8 ॥

ತಾತ್ಪರ್ಯ : ಅರಳಿದ ತಾವರೆಯಂತೆ ಶೋಭಿಸುವ ನೇತ್ರಗಳುಳ್ಳ, ಮಧುನಾಮಕದೈತ್ಯನಿಗೆ ಶತ್ರುವಾದ ಶ್ರೀಮಾಧವನ ಮನಸ್ಸನ್ನು ರಂಜಿಸಲು ಅಥವಾ ಮಾಧವನ ಮನಸ್ಸಿಗೆ ಅನುಕೂಲವಾದ ಶೃಂಗಾರ ಲೀಲಾವಿಲಾಸಗಳಲ್ಲಿ ರಸಿಕಳಾದ, ಸಕಲ ಲೋಕಗಳಿಗೆ ತಾಯಿಯಾದ ನೀಲವರ್ಣದ ಮುಂಗುರುಳುಗಳಿಂದ ಕೂಡಿದ ನಿರ್ಮಲವಾದ ಮನೋಹರ ಫಾಲಪ್ರದೇಶವುಳ್ಳ, ಆಗತಾನೇ ಉದಯಿಸುತ್ತಿರುವ ಚಂದ್ರನಂತೆ ಕಾಂತಿಯುಕ್ತಳಾದ ಎಲೈ ಮಂಗಳಕರಳಾದ ಕಮಲೆ! (ಲಕ್ಷ್ಮೀದೇವಿ) ನಿನಗೆ ಸುಪ್ರಭಾತವಾಗಲಿ. ॥ 8 ॥

ಅವತಾರತ್ರಯ ವಾಯುದೇವಸ್ತುತಿ :

ಶ್ರೀರಾಮಚಂದ್ರಪರಿಷೇವಕ ಭೋ ಹನೂಮನ್
ಭೋ ಭೀಮ! ಭೀಮಕೃತಿತೋಷಿತಕೃಷ್ಣಜಿಷ್ಣೋ।
ಭೋ ಮಧ್ವ! ಮಧ್ವಹಿತದೇವಸುತತ್ತ್ವನೇತಃ
ಶ್ರೀ ಭಾರತೀಶ ! ಸುಮತೇ! ತವ ಸುಪ್ರಭಾತಮ್ ॥ 9 ॥

ತಾತ್ಪರ್ಯ : ರಾವಣಾದಿ ರಾಕ್ಷಸ ಸಂಹಾರಕ್ಕಾಗಿ ಅವತರಿಸಿದ ಶ್ರೀ ರಾಮಚಂದ್ರದೇವರನ್ನು ಸುತ್ತಮುತ್ತಲೂ ಇದ್ದು, ಜ್ಞಾನಪೂರ್ಣರಾದ ಅಂತೆಯೇ ಹನುಮಂತದೇವರೆಂದು ಖ್ಯಾತರಾಗಿ ಸೇವೆ ಮಾಡಿದ, ಭೂಭಾರ ಹರಣಕ್ಕಾಗಿ ಅವತರಿಸಿದ ಶ್ರೀ ಕೃಷ್ಣರೂಪಿ ನಾರಾಯಣನನ್ನು (ಕೃಷ್ಣಾರ್ಜುನರನ್ನು) ಯುದ್ಧ ಮುಂತಾದ ಅನಿರತಸಾಧಾರಣ ಭಯಂಕರ ಕೃತಿಗಳಿಂದ ಭೀಮಸೇನ ರೂಪದಿಂದ ಸಂತೋಷಪಡಿಸಿದ, ಮಧುನಾಮಕ ದೈತ್ಯನಿಗೆ ಶತ್ರುವಾದ ಶ್ರೀ ವೇದವ್ಯಾಸಾಭಿನ್ನ

ಶ್ರೀಹರಿಯ ಸತ್ತತ್ವಪ್ರಸಾರಕಾರ್ಯದಲ್ಲಿ ನಾಯಕರಾದ ಅಂದರೆ ಶ್ರೀವೇದವ್ಯಾಸದೇವರ ಬ್ರಹ್ಮಮೀಮಾಂಶಾಸ್ತ್ರಕ್ಕೆ ಅವರಿಗೆ ಸಮ್ಮತವಾದ ಭಾಷ್ಯಗಳನ್ನು ರಚಿಸಿ, ಸತ್ತತ್ವಶಾಸ್ತ್ರ ಪ್ರಸಾರದ ನಾಯಕರಾದ, ಆನದಂಪ್ರದ ಶಾಸ್ತ್ರಪ್ರವರ್ತಕರಾದ್ದರಿಂದ ಶ್ರೀಮಧ್ವಾಚಾರ್ಯರೆಂಬ ಅನ್ವರ್ಥಕನಾಮದಿಂದ ಸೇವಿಸಿ ಮಂಗಳಕರಮತಿಗಳಾದ, ವೇದಾಭಿಮಾನಿನಿಯಾದ ಶ್ರೀ ಭಾರತೀದೇವಿಯ ಪತಿಗಳಾದ ಶ್ರೀವಾಯುದೇವರೇ ನಿಮಗೆ ಶುಭಪ್ರಭಾತವಾಗಲಿ ॥ 9 ॥

ಶ್ರೀಜಯತೀರ್ಥಸ್ತುತಿ :

ಅಕ್ಷೋಭ್ಯತೀರ್ಥಪೃಥುತೀರ್ಥಸಮುತ್ಥಿತ! ಶ್ರೀ
ವಕ್ಷೋಭಿನೇತ್ರರುಚಿಪಾತ್ರ! ಸದರ್ಚ್ಯಗಾತ್ರ।
ರಕ್ಷೋಭಿಜಾತಮತಜಾತತಮಸ್ಸುಧಾಂಶೋ
ಟೀಕಾಕೃದಾಢ್ಯ ಜಯರಾಟ್ ತವ ಸುಪ್ರಭಾತಮ್ ॥ 10 ॥

ತಾತ್ಪರ್ಯ :ಕ್ಷೋಭಾರಹಿತ ಶಾಸ್ತ್ರಪ್ರವರ್ತಕರಾದ ಶ್ರೀ ಮಧ್ವಾಚಾರ್ಯರ ಶಿಷ್ಯರಾದ ಶ್ರೀ ಅಕ್ಷೋಭ್ಯತೀರ್ಥರೆಂಬ ದೊಡ್ಡಗುರುಗಳಿಂದ ಉತ್ಪನ್ನರಾದ (ಕರಕಮಲಸಂಜಾತರಾದ), ಕಣ್ಣೆದುರು ಕಂಗೊಳಿಸುವ ಲಕ್ಷ್ಮೀದೇವಿ (ಸೀತಾ) ದೇವಿಯನ್ನು ಹೃದಯದಲ್ಲಿಟ್ಟುಕೊಂಡಿರುವ ಶ್ರೀಜಯರಾಮದೇವರ ಪ್ರೀತಿಗೆ ಪಾತ್ರರಾದ (ಹೃದಯದಲ್ಲಿ ಸೀತಾದೇವಿಯಿಂದ ಶೋಭಿಸುವ ಶ್ರೀಜಯ ರಾಮದೇವರನ್ನು ಪೂಜಿಸಿ ಅವರ ಪ್ರೀತಿಗೆ ಪಾತ್ರರಾದ) ಸಜ್ಜನರಿಂದ ಪೂಜನೀಯ ಶರೀರರಾದ, ದೈತ್ಯನಾದ ಹಿರಣ್ಯಕಶ್ಯಪನ ಪುತ್ರರಾದ ಪ್ರಹ್ಲಾದ ರಾಜರಿಗೆ ಸಮ್ಮತವಾದ ಶ್ರೀಮದ್ವೈಷ್ಣವ ಮತದಲ್ಲಿ ಉತ್ಪನ್ನರಾದ, ಮಾಯಾಮತದ ಅಬ್ಬರದಿಂದುಂಟಾದ ಅಜ್ಞಾನವೆಂಬ ಕತ್ತಲನ್ನು ಪರಿಹರಿಸಿ ಜ್ಞಾನಪ್ರಕಾಶ (ಬೆಳದಿಂಗಳು)ವನ್ನು ನೀಡುವ ಚಂದ್ರಮರಾದ, ಅಸದೃಶ ಗುಣಯುಕ್ತರಾದ, ಟೀಕಾ ಗ್ರಂಥಗಳ ರಚನೆಯಿಂದ ಪೂಜ್ಯರಾದ ಶ್ರೀ ಜಯತೀರ್ಥ ಶ್ರೀಪಾಂದಗಳವರೇ, ನಿಮಗೆ ಸುಪ್ರಭಾತವಾಗಲಿ ॥ 10 ॥

ಶ್ರೀವ್ಯಾಸರಾಜಸ್ತುತಿ :

ಸಂಸಾರತಾಪತತಿಶಾಮಕಚಂದ್ರಿಕಾಢ್ಯ
ನ್ಯಾಯಾಮೃತಾಪಹೃತಸಾಧುಕುಮರ್ತ್ಯಭಾವ।

ಸತ್ತರ್ಕತಾಂಡವವಿನಿರ್ಜಿತದುರ್ಗಿರೀಶ
ಶ್ರೀ ವ್ಯಾಸರಾಜ! ಭವತಾತ್ ತವ ಸುಪ್ರಭಾತಮ್ ॥ 11 ॥

ತಾತ್ಪರ್ಯ : ಕವಿಯು ಶ್ರೀರಾಘವೇಂದ್ರಸ್ವಾಮಿಗಳ ಪೂರ್ವಾವತಾರರೂ, ಶ್ರೀಪ್ರಹ್ಲಾದಾವತಾರರೂ ಆದ ಶ್ರೀಮದ್ವ್ಯಾಸರಾಜಗುರುಸಾರ್ವಭೌಮರನ್ನು ಈಗ ಚಂದ್ರನಿಗೆ ಹೋಲಿಸಿ ಶ್ಲೇಷಾಲಂಕಾರದಿಂದ ಸುಪ್ರಭಾತವನ್ನು ಕೋರುತ್ತಾನೆ.

ಶ್ರೀ ವ್ಯಾಸರಾಜರೇ, ನೀವು ಚಂದ್ರನಂತಿದ್ದೀರಿ. ಅವನ ಧರ್ಮಗಳೆಲ್ಲವೂ ನಿಮ್ಮಲ್ಲಿಯೂ ಇವೆ. ಚಂದ್ರನು ಸಂಸಾರದಲ್ಲಿ ಬಳಲಿ ಬೆಂಡಾದವರ ಶ್ರಮವನ್ನು ಪರಿಹರಿಸುವ ಬೆಳದಿಂಗಳಿನಿಂದ ಕೂಡಿದ್ದಾನೆ. ನೀವು ಜನನ ಮರಣರೂಪ ಭವತಾಪದ ಪರಿಹಾರಕ್ಕೆ ಸಾಧನವಾದ ಸತ್ತ್ವಗಳನ್ನು ತಿಳಿಸಿಕೊಡುವ ಚಂದ್ರಿಕಾಗ್ರಂಥವನ್ನು ರಚಿಸಿ ಅಧ್ವರರಾಗಿದ್ದೀರಿ. ಚಂದ್ರನು ತನ್ನಲ್ಲಿರುವ ಅಮೃತಸೇಚನದಿಂದ ದುಷ್ಪಶಾರೀರಕ ದುಃಖಾದಿಗಳನ್ನು ಚೆನ್ನಾಗಿ ಅಪಹರಿಸುತ್ತಾನೆ (ಕಳೆಯುವನು). ನೀವು ನಿಮ್ಮ ನ್ಯಾಯಾಮೃತವೆಂಬ ಗ್ರಂಥದಿಂದ ಸಜ್ಜನರ ಕುತ್ಸಿತ ಮರಣಶೀಲ ದೇಹಭಾವವನ್ನು ಅಪಹರಿಸುವಿರಿ, ಅಂದರೆ ಅಮರತ್ವವನ್ನು ನೀಡುವಿರಿ. ಚಂದ್ರನು ತನ್ನ ನರ್ತನ ವೈಶಿಷ್ಟ್ಯದಿಂದ ದುಷ್ಪ್ರಾಪ್ಯರಾದ ರುದ್ರದೇವರನ್ನು ವಿನೋದಾರ್ಥವಾಗಿ ಜಯಿಸಿದ್ದಾನೆ! ನೀವು ನಿಮ್ಮ ತರ್ಕತಾಂಡವ ಗ್ರಂಥ ರಚನೆಯಿಂದ ದುರ್ವಾದಿಶ್ರೇಷ್ಠರನ್ನು ಜಯಿಸಿದ್ದೀರಿ! ಹೀಗೆ ಚಂದ್ರನಂತೆ ವಿಶಿಷ್ಟಧರ್ಮಗಳಿಂದ ಯುಕ್ತರಾಗಿ ಶ್ರೀಮಾಧ್ವಾಕಾಶದಲ್ಲಿ ಆಹ್ಲಾದದಾಯಕರಾಗಿ ರಾಜಿಸುತ್ತಿರುವ ಶ್ರೀವ್ಯಾಸರಾಜಗುರುಸಾರ್ವಭೌಮರೆಂಬ ಚಂದ್ರಮರೇ ನಿಮಗೆ ಸುಪ್ರಭಾವತಾಗಲಿ ॥ 11 ॥

ಶ್ರೀರಾಘವೇಂದ್ರಸ್ತುತಿ :

ಮಿತ್ರಾಕ್ಷಮಾಪತಿವರೋತ್ಥ ಪವಿತ್ರಮೂರ್ತೇ!
ಪತ್ರೀಶವಾಹಕರುಣಾಪ್ತಶುಭಾರ್ಥಪೂರ್ತೇ।
ಸುತ್ರಾಮಲೋಕಸುರಗೀತಚರಿತ್ರಕೀರ್ತೇ
ಶ್ರೀರಾಘವೇಂದ್ರಯತಿರಾಟ್ ! ತವ ಸುಪ್ರಭಾತಮ್ ॥ 12 ॥

ತಾತ್ಪರ್ಯ : ಈಗ ಕವಿಯು ಮಹಾಮಹಿಮರಾದ ಶ್ರೀ ರಾಘವೇಂದ್ರ ಸ್ವಾಮಿಗಳವರನ್ನು 14 ಪದ್ಯಗಳಿಂದ ಸ್ತುತಿಸಿ ಸುಪ್ರಭಾತವನ್ನು ಹೇಳಲು ಪ್ರಾರಂಭಿಸುತ್ತಾನೆ.

ಸ್ವಾಮಿ, ಲೋಕವಿಲೋಕನಾಕ್ಷನಾದ, ಶ್ರೀ ಲಕ್ಷ್ಮೀಪತಿಯಾದ ಶ್ರೀನಿವಾಸದೇವರ ವರದಿಂದ ಅವತರಿಸಿದ ನೀವು ಪರಮಪಾವನ ಮೂರ್ತಿಗಳಾಗಿದ್ದೀರಿ. ಆದ್ದರಿಂದಲೇ ನೀವು ಗರುಡವಾಹನನಾದ, ವೈಕುಂಠ ಪತಿಯಾದ ಶ್ರೀ ಲಕ್ಷ್ಮೀನಾರಾಯಣದೇವರ ಕರುಣೆಯಿಂದ ಲಬ್ಧವಾದ ಚತುರ್ವಿಧ ಶುಭಾರ್ಥವುಳ್ಳವರಾಗಿದ್ದೀರಿ. ಅಷ್ಟೇ ಅಲ್ಲ, ನಿಮ್ಮನ್ನು ಆಶ್ರಯಿಸಿ ಸೇವಿಸಿದ ಭಕ್ತರಿಗೆ ಶ್ರೀಹರಿಯ ವರಬಲ-ಅನುಗ್ರಹಗಳಿಂದ ಚತುಃ ಪುಮರ್ಥಗಳನ್ನು ಅನುಗ್ರಹಿಸಲು ಸಮರ್ಥರಾಗಿದ್ದೀರಿ. ನೀವು ಅಗಮ್ಯ ಮಹಿಮರೂ ಭಾಗವತಾಗ್ರಣಿಗಳೂ, ಆದ್ದರಿಂದಲೇ ಇಂದ್ರನ ಅಮರಾವತಿಯಲ್ಲಿ ದೇವತಕೆಗಳೂ ಸಹ ನಿಮ್ಮ ಅಮರಚರಿತ್ರೆಯ ಕೀರ್ತಿಯನ್ನು ಗಾನಮಾಡುತ್ತಿರುವರು. (ಕೀರ್ತಿಂ ವಿಶುದ್ಧಾಂ ಸುರಲೋಕಗೀತಾಂ - ಭಾಗವತ) ಇಂತು ಮಹಿಮಾವಂತ ಸಂತ ಶ್ರೀ ರಾಘವೇಂದ್ರಯತಿಸಾರ್ವ ಭೌಮರೇ! ನಿಮಗೆ ಸುಪ್ರಭಾತವಾಗಲಿ ॥ 12 ॥

ಪೂರ್ಣಪ್ರಬೋಧಪರಿಪೂರ್ಣಕೃಪಾಪ್ರಪೂರ್ಣ
ಚೂರ್ಣೀಕತಾಘ ಕರುಣಾರ್ಣವ ಸ್ವರ್ಣಕಾಂತ।
ನಿರ್ಣೀತಪೂರ್ಣಮತಿಭಾವಸುಪೂರ್ಣಟೀಕಾ-
ಕೃದ್ಭಾವದೀಪಕಕೃತೀಢ್ಯ!* ತವ ಪ್ರಭಾತಮ್ ॥ 13 ॥

ತಾತ್ಪರ್ಯ : ಈಗ ಕವಿಯು ಅಗಾಧವಾದ ಶ್ರೀ ಗುರುರಾಜರ ಚರಿತ್ರೆ, ಗ್ರಂಥರಚನಾ ಸಾಮರ್ಥ್ಯ, ಮಹಿಮಾದಿಗಳನ್ನು ಪೂರ್ಣವಾಗಿ ನಿರೂಪಿಸಲು ಯಾರಿಂದಲೂ ಅಸಾಧ್ಯವಾದರೂ, ಗ್ರಂಥರಚನಾದಿಮಹಿಮಗಳ ಒಂದಂಶ ವನ್ನಾದರೂ ನಿರೂಪಿಸಬಯಸಿ ಸುಪ್ರಭಾತವನ್ನು ಕೋರುತ್ತಿದ್ದಾನೆ.

---

* ಶುಭ ಪ್ರಭಾತಮ್

ಶ್ರೀವಾಯುದೇವರ ಅವತಾರರಾದ ಶ್ರೀಮಧ್ವಾಚಾರ್ಯರ ಸಂಪೂರ್ಣ ಕರುಣೆಯಿಂದ ಪೂರ್ಣರಾದ, ಆಶ್ರಿತಜನರ ಸಕಲ ಪಾಪಗಳನ್ನು ಪುಡಿಪುಡಿ ಮಾಡುವ, ಕರುಣಾಸಮುದ್ರರಾದ, ಭಂಗಾರದಕಾಂತಿಯಿಂದ ಶೋಭಾಯಮಾನರಾಗಿರುವ, ಶ್ರೀಪೂರ್ಣಪ್ರಜ್ಞಾಚಾರ್ಯರ ಸಮಸ್ತ ಭಾವಗಳನ್ನು ಚೆನ್ನಾಗಿ ನಿರ್ಣಯಿಸಿ, ಭಾವಪೂರ್ಣವಾದ ಉತ್ತಮ ಟೀಕೆಗಳನ್ನು ರಚಿಸಿ ಟೀಕಾಕೃತ್ಪಾದರೆಂದು ಖ್ಯಾತರಾದ ಶ್ರೀ ಜಯತೀರ್ಥರ ಭಾವಗಳನ್ನು (ಅಭಿಪ್ರಾಯಗಳನ್ನು) ಚೆನ್ನಾಗಿ ಬೆಳಗಿಸುವ ''ಭಾವದೀಪ'' ಮುಂತಾದ ಅಸಾಧಾರಣ ಟಿಪ್ಪಣಿಗಳನ್ನು ರಚಿಸಿ ''ಟಿಪ್ಪಣ್ಯಾಚಾರ್ಯ ಚಕ್ರವರ್ತಿ''ಗಳೆಂದು ಪುಣ್ಯಶಾಲಿಗಳಾದ ಜ್ಞಾನಿವರ್ಯರಿಂದ ಸ್ತುತ್ಯರಾದ ಶ್ರೀರಾಘವೇಂದ್ರ ಸ್ವಾಮಿಗಳವರೇ, ನಿಮಗೆ ಶುಭ ಪ್ರಭಾತವಾಗಲಿ ॥ 13 ॥

ತುಂಗಾತರಂಗಪರಿಪೂತಸುಮಂತ್ರಸದ್ಮ
ರಂಗಾರಿಪುತ್ರವಿಹಿತಾಮಲಯಜ್ಞರಂಗೇ।
ಶೃಂಗಾರಬೃಂದಸದನೇಶಪದಾಬ್ಜಸಂಗಿ-
ಭೃಂಗಾದ್ಯ ತೇ ಭವತು ಮಂಗಳಸುಪ್ರಭಾತಮ್ ॥ 14 ॥

ತಾತ್ಪರ್ಯ : ತುಂಗಾನದಿಯ ಅಲೆಗಳ ಸಂಪರ್ಕದಿಂದ ಪಾವನವಾದ ಶ್ರೇಷ್ಠ ಶ್ರೀಮಂತ್ರಾಲಯ ಕ್ಷೇತ್ರದಲ್ಲಿ, ದೇವದೇವನಾದ ನೃಕಂಠೀರವನ ಶತ್ರುವಾದ ಹಿರಣ್ಯಕಶ್ಯಪನ ಪುತ್ರನಾದ ಶ್ರೀ ಪ್ರಹ್ಲಾದರಾಜನಾಗಿ (ಹಿಂದೆ ನೀವು) ನೆರವೇರಿಸಿದ ಶ್ರೇಷ್ಠ ಯಾಗಗಳ ಯಜ್ಞವೇದಿಕೆಯಲ್ಲಿ, ಮನೋಹರವಾದ ಬೃಂದಮಂದಿರ (ಬೃಂದಾವನ)ದಲ್ಲಿ ನೆಲೆಸಿ, ಶ್ರೀಮನ್ನಾರಾಣನ ಚರಣ ಕಮಲಗಳಲ್ಲಿ ಅಸಕ್ತಮಧುಕರರಾದ, ಶ್ರೀರಾಘವೇಂದ್ರ ಗುರುಗಳೇ! ಈಗ ನಿಮಗೆ ಮಂಗಳಪ್ರಭಾತವಾಗಲಿ ॥ 14 ॥

ಸಂತಾಪಸಂಸ್ಕೃತಿವಿಸಂಚಿತಪಾಪಹಂತಃ
ಸಂತೋಷಕಾಂತಿಧನಸಂತತಿಧೀಪ್ರದಾತಃ।
ಹಂತಾಖಿಲವ್ರತಿಕುಲೇಡ್ಯ! ಸದಂತರಂಗ
ಮಂತ್ರಾಲಯೇಶ ! ಭವತಾತ್ ತವ ಸುಪ್ರಭಾತಮ್ ॥ 15 ॥

ತಾತ್ಪರ್ಯ : ಅತ್ಯಂತ ದುಃಖಕ್ಕೆ ಕಾರಣವಾದ ಸಂಸಾರದಲ್ಲಿ ಅವಶ್ಯ ಅನುಭವಿಸಬೇಕಾದ, ಹಿಂದಿನಿಂದ ವಿಶೇಷವಾಗಿ ಕೂಡಿಟ್ಟ ಪಾಪಗಳನ್ನು ನಾಶಗೊಳಿಸುವ, ಭಕ್ತಜನರಿಗೆ ಆನಂದ, ಬೆಡಗು, ಐಶ್ವರ್ಯ, ಸಂತಾನ, ಬುದ್ಧಿಗಳನ್ನು ವಿಶೇಷವಾಗಿ ಅನುಗ್ರಹಿಸುವ, ಸಕಲ ಕರ್ಮಂದಿಗಳಿಂದ ಸ್ತುತ್ಯರಾಗಿರುವ, ಪರಮಾತ್ಮನನ್ನು ಹೃದಯಸಿಂಹಾಸನದಲ್ಲಿ ಮಂಡಿಸಿ ಕೊಂಡಿರುವ, ಶ್ರೀಮಂತ್ರಾಲಯ ಸುಕ್ಷೇತ್ರಕ್ಕೆ ಒಡೆಯರಾದ ಶ್ರೀ ರಾಘವೇಂದ್ರ ಗುರುವರ್ಯರೇ, ನಿಮಗೆ ಸುಪ್ರಬಾತವಾಗಲಿ. ಇದು ಅತ್ಯಂತ ಸಂತೋಷವು. ॥ 15 ॥

ಭೋಗಾನ್ ಪ್ರದಾತರಪನೇತರಿಹೋರುರೋಗಾನ್
ಯೋಗಾನ್ವಿಧಾತರಪಹರ್ತರಘಾರಿವೇಗಾನ್।
ರಾಗಾನ್‌ನಿಹಂತರಧಿಯಂತರಸಂಗಿನಾಗಾನ್
ಶ್ರೀ ರಾಘವೇಂದ್ರಯತಿರಾಟ್ ! ತವ ಸುಪ್ರಬಾತಮ್ ॥ 16 ॥

ತಾತ್ಪರ್ಯ : ಶ್ರೀಗುರುಸಾರ್ವಭೌಮರೇ, ಈ ಭೂಲೋಕದಲ್ಲಿ ನಿಮ್ಮನ್ನು ಭಜಿಸುವ ಭಕ್ತರಿಗೆ ಹೆಚ್ಚಾದ ಭೋಗಗಳನ್ನು ಬಹುವಿಧವಾಗಿ ಅನುಗ್ರಹಿಸುತ್ತಿದ್ದೀರಿ. ದೀನದಲಿತ ಜನರಿಗೆ ಬಂದ ವಿವಿಧ ರೋಗಗಳನ್ನು ಪರಿಹರಿಸುತ್ತಿರುವಿರಿ, ಅರ್ಥಿಜನರಿಗೆ ವಿವಿಧ ಶುಭಯೋಗಗಳನ್ನುಂಟು ಮಾಡುತ್ತಿದ್ದೀರಿ. ನಂಬಿದ ಸುಜನ ವೃಂದದ ಅಧಿಕವಾದ ಪಾಪವೆಂಬ ಶತ್ರು ಬಾಧೆಯ ವೇಗವನ್ನು ನಿವಾರಿಸುತ್ತಿದ್ದೀರಿ. ಭಕ್ತರ ಕಾಮಾದಿ ಷಡ್‌ರಿಪು ಗಳನ್ನು ನಾಶಪಡಿಸುತ್ತಿರುವಿರಿ. ಸನ್ಯಾಸಿಶ್ರೇಷ್ಠರಿಗೆ ಅಥವಾ ಸನ್ಯಾಸಿಗಳೆಂಬ ಗಜಗಳಿಗೆ ಮುಖ್ಯ ನಿಯಂತಾರರಾಗಿರುವಿರಿ, ಸ್ವಾಮಿ ನಿಮಗೆ ಸುಪ್ರಭಾತವಾಗಲಿ ॥ 17 ॥

ವೇದೋಽಪ್ರಮಾಣಮಿತಿ ಭೂಸುರನಿಂದಕಂ, ಗೋ
ಮಂತ್ರೇಣ ತಂ ಮುಸಲಮಂಕುರಿತಂ ವಿತನ್ವನ್।
ವೇದಪ್ರಭಾವಶರಣಾಗತಸ್ಯೈರಸಂಗಂ
ಭಕ್ತಂ ಧರೇಶಮಕರೋಸ್ತ್ವವ ಸುಪ್ರಭಾತಮ್ ॥ 18 ॥

ತಾತ್ಪರ್ಯ : ಶಿರಸಂಗಿಯ ದೇಸಾಯಿಯು ವೇದಗಳು ಸುಳ್ಳು, ಮಂತ್ರಗಳೆಲ್ಲ ಹೊಟ್ಟೆಪಾಡಿಗಾಗಿ ಬ್ರಾಹ್ಮಣರಿಂದ ನಿರ್ಮಿತವಾದವುಗಳು, ಮುಂತಾಗಿ ವೇದನಿಂದಕನಾಗಿರಲು, ನಿಮ್ಮಲ್ಲಿ ಈ ವಿಷಯವನ್ನು ಬ್ರಾಹ್ಮಣರು ಅರಿಕೆಮಾಡಲು, ನೀವು ಶಿರಸಂಗಿಯ ದೇಸಾಯಿಯ ಅಪೇಕ್ಷೆಯಂತೆ ವನಕೆಯನ್ನು ನಿಮ್ಮ ಮಂತ್ರಶಕ್ತಿಯ ಪ್ರಭಾವದಿಂದ ಚಿಗುರಿಸಿ, ವೇದದ ಮಹತ್ವವನ್ನು ತೋರಿ, ವೇದಪ್ರಭಾವವನ್ನು ಕಣ್ಣಾರೆ ಕಂಡು ನಿಮಗೆ ಶರಣಾಗತನಾದ ದೇಸಾಯಿಯನ್ನು ಅನುಗ್ರಹಿಸಿ, ನಿಮ್ಮ ಭಕ್ತನನ್ನಾಗಿ ಮಾಡಿಕೊಂಡಿರಿ. ಇಂಥ ಮಹಾಮಹಿಮರಾದ ನಿಮಗೆ ಸುಪ್ರಭಾತವಾಗಲಿ ॥ 18 ॥

ಚೌತೇರಸೇ ಹಿ ಪತಿತಂ, ಮರಣಂಗತಂ, ತಂ
ಗ್ರಾಮಾಧಿನಾಯಕಶಿಶುಂ ನಿಜಮಂತ್ರಶಕ್ತ್ಯಾ।
ಸಂಜೀವಯನ್ ಪರಿಮಳಾರ್ಯ! ಕಿರೀಟಶೈಲಂ
ಸಂಪ್ರಾಪ್ಯ ಸರ್ವವಿನುತಸ್ತ್ವ ಸುಪ್ರಭಾತಮ್ ॥ 19 ॥

ತಾತ್ಪರ್ಯ : ಪೂಜ್ಯರಾದ ಪರಿಮಾಳಾಚಾರ್ಯರೇ, ಸಂಚಾರಕ್ರಮದಲ್ಲಿ ಕಿರೀಟಗಿರಿಗೆ ತಾವು ದಯಮಾಡಿಸಿದಾಗ, ಜಹಗೀರುದಾರನಾದ ದೇಸಾಯಿ ವೆಂಕಟರಾಯನ ಮಗನು ಮಾವಿನಹಣ್ಣಿನ ರಸಾಯನದಲ್ಲಿ ಬಿದ್ದು ಮೃತನಾಗಲು ಕರುಣಾಳುಗಳಾದ ನೀವು ಕಮಂಡಲೋದಕವನ್ನು ಪ್ರೋಕ್ಷಿಸಿ ಆ ಬಾಲಕನನ್ನು ಬದುಕಿಸಿ ದೇಸಾಯಿದಂಪತಿಗಳಲ್ಲಿ ಪರಮಾನುಗ್ರಹ ಮಾಡಿದಿರಿ. ತನ್ನ ವಂಶ ದೀಪಕನಾದ ಪುತ್ರನನ್ನು ಬದುಕಿಸಿಕೊಟ್ಟ ತಮಗೆ ದೇಸಾಯಿಯು ತನ್ನ ಗ್ರಾಮವಾದ ಕಿರೀಟಗಿರಿಯನ್ನು ದಾನವಾಗಿತ್ತನು. ತಮ್ಮ ಈ ಅದ್ಭುತ ಮಹಿಮೆಯನ್ನು ಕಂಡು ಸಕಲ ಜನರೂ ತಮ್ಮನ್ನು ಕೊಂಡಾಡಿದರು. ಇಂಥ ಮಹಾಮಹಿಮರಾದ ಗುರುರಾಜರೇ, ನಿಮಗೆ ಶೋಭನ ಬೆಳಗಾಗಲಿ ॥ 19 ॥

ಶಿಷ್ಟಾಯ, ಶಾಂತಹೃದಯಾಯ ಕವೀಶ್ವರಾಯ,
ಸನ್ಮಂತ್ರಧಾಮಲಸಿತಾಯ, ವರಪ್ರದಾಯ।
ಭಕ್ತಾಯ, ಮುಕ್ತಿದರತಾಯ, ವಿಧೀಡ್ಯವಿಷ್ಣು-
ಚಿತ್ತಾಯ, ಭಕ್ತನಿವಹಾಯ ಚ, ಸುಪ್ರಭಾತಮ್ ॥ 20 ॥

ತಾತ್ಪರ್ಯ : ಅರಿಷಡ್ವರ್ಗ ದೂರರಾದ, ವೇದಪ್ರಾಮಾಣ್ಯವಾದಿಗಳಾದ, ಪ್ರಶಾಂತಮನಸ್ಕರಾದ, ಭಕ್ತರು ಬೇಡಿದ ವರಗಳನ್ನು ಅನುಗ್ರಹಿಸುವ ಪರಮಪುರುಷಾರ್ಥವೆನಿಸಿದ ಮೋಕ್ಷಸುಖವನ್ನು ಕರುಣಿಸುವ ಶ್ರೀನಾರಾಯಣ ಚರಣಕಮಲಗಳ ಸೇವೆಯಲ್ಲಿ ನಿರತರಾದ, ಆಜನ್ಮಹರಿಭಕ್ತರಾದ, ತಮ್ಮನ್ನು ಸೇವಿಸುವ ಲಕ್ಷಾಂತರಭಕ್ತಮಂಡಲಿಯುಳ್ಳ, ಜ್ಞಾನಿನಾಯಕರಾದ ಶ್ರೀ ಮಂತ್ರಾಲಯಕ್ಷೇತ್ರದಲ್ಲಿ ವಿರಾಜಿಸುತ್ತಿರುವ, ಶ್ರೀ ಬ್ರಹ್ಮದೇವರಿಂದ ಸೇವ್ಯನಾದ ನಾರಾಯಣಾಭಿನ್ನ ಶ್ರೀಮೂಲರಾಮನಲ್ಲೇ ಮನಸ್ಸುಳ್ಳ, ಶ್ರೀ ರಾಘವೇಂದ್ರ ಸ್ವಾಮಿಗಳವರೇ, ನಿಮಗೆ ಶೋಭನದ ಬೆಳಗಾಗಲಿ ॥ 20 ॥

ಸತ್ಯೇಶಸೇವಕ ಗುಣೋಜ್ವಲ, ಶಂಕುಕರ್ಣ!
ಪ್ರಹ್ಲಾದರೂಪಪರಿಸೇವಿತ ಶ್ರೀನೃಸಿಂಹ।
ವ್ಯಾಸಾರ್ಯರೂಪಪರಿತೋಷಿತಯಾದವೇಂದ್ರ!
ಶ್ರೀ ರಾಘವೇಂದ್ರ! ಭವತಾತ್ ತವ ಸುಪ್ರಭಾತಮ್ ॥ 21 ॥

ತಾತ್ಪರ್ಯ : ಕವಿಯು ಇಲ್ಲಿ ಶ್ರೀ ರಾಘವೇಂದ್ರಗುರುಗಳ ಮೂಲ ರೂಪ, ಅವತಾರಗಳನ್ನು ನೃಸಿಂಹ ಪುರಾಣದಲ್ಲಿ "ಶಂಕುಕರ್ಣಾಖ್ಯ ದೇವಸ್ತುಬ್ರಹ್ಮಶಾಪಾಚ್ಚ ಭೂತಲೇ। ಪ್ರಹ್ಲಾದ ಇತಿ ವಿಖ್ಯಾತೋ ಭೂಭಾರ ಪಕ್ಷಣೇರತಃ॥ ಸ ಏವ ರಾಘವೇಂದ್ರಾಖ್ಯ ಯತಿರೂಪೇಣ ಸರ್ವದಾ। ಕಲೌಯುಗೇ ರಾಮಸೇವಾಂ ಕುರ್ವನ್ ಮಂತ್ರಾಲಯೇಭವತ್॥" ಮುಂತಾಗಿ ಹೇಳಿರುವ ಕ್ರಮದಂತೆ ವರ್ಣಿಸಿ, ಮೂಲರೂಪ-ಅವತಾರ ರೂಪಗಳಿಗೆ ಸುಪ್ರಭಾತವನ್ನು ಬಯಸುತ್ತಿದ್ದಾನೆ.

ಸತ್ಯಲೋಕೇಶರಾದ ಬ್ರಹ್ಮದೇವರ ಸೇವಕರೂ, ಸತ್ಯನಾಮಕನೂ, ಪ್ರಭುವೂ ಆದ ನಾರಾಯಣನ ಸೇವಕರಾದ, ಬ್ರಹ್ಮದೇವರ ಶಾಪವೆಂಬ ಗುಣದಿಂದ ಕಂಗೊಳಿಸುವ ಶಂಕುಕರ್ಣರೇ! ನೀವು ಶ್ರೀ ಲಕ್ಷ್ಮೀನರಸಿಂಹವನ್ನು ಪ್ರಹ್ಲಾದ ರೂಪದಿಂದ ಚೆನ್ನಾಗಿ ಸೇವಿಸಿದ್ದೀರಿ. ಅಧಿಕವಾದ ಆಹ್ಲಾದದಿಂದ ಕೂಡಿ ಬಾಹ್ಲೀಕರಾಜರ ರೂಪದಿಂದ ಮತ್ತೆ ಶ್ರೀ ರುಕ್ಮಿಣೀಪತಿಯಾದ, ಅಂತೆಯೇ ದೇವೋತ್ತಮನಾದ ಶ್ರೀಕೃಷ್ಣನನ್ನು ಪೂಜಾದಿಗಳಿಂದ ಚೆನ್ನಾಗಿ ಸಂತೋಷಗೊಳಿಸಿದ್ದೀರಿ, ಶ್ರೀವೇದವ್ಯಾಸರೇ ಅರ್ಚ್ಯರಾಗುಳ್ಳ, ಅಥವಾ

ಶ್ರೀವ್ಯಾಸರಾಜರೇ ಆರ್ಯರಾಗುಳ್ಳ, ಶ್ರೀವ್ಯಾಸರಾಜಾವತಾರಿಗಳಾದ ಶ್ರೀರಾಘವೇಂದ್ರಸ್ವಾಮಿಗಳ ರೂಪದಿಂದ ಶ್ರೀಸಂತಾನಗೋಪಾಲಕೃಷ್ಣನನ್ನು ಅಥವಾ ಆಶ್ರಮಜ್ಯೋಷ್ಠರಾದ ಶ್ರೀಯಾದವೇಂದ್ರತೀರ್ಥರನ್ನು ಚೆನ್ನಾಗಿ ಆನಂದಗೊಳಿಸಿದ್ದೀರಿ. ಹೀಗೆ ಮೂಲರೂಪದಲ್ಲಿ ಶಂಕುಕರ್ಣರೆಂಬ ದೇವತೆಗಳಾದ ನೀವು ಶ್ರೀ ಪ್ರಹ್ಲಾದ-ಬಾಹ್ಲೀಕ, ವ್ಯಾಸರಾಜ, ಶ್ರೀ ರಾಘವೇಂದ್ರಸ್ವಾಮಿಗಳ ಅವತರಾಗಳಿಂದ ಶ್ರೀಹರಿಯನ್ನು ಸೇವಿಸಿ ಧನ್ಯರಾಗಿದ್ದೀರಿ. ಇಂಥ ನಿಮಗೆ ಸುಪ್ರಭಾತವಾಗಲಿ ॥ 21 ॥

ಶ್ರೀದಾಯ, ಮಾಧವ ಶಿವಾಧವ* ಭೇದತತ್ತ್ವ-
ಬೋಧಾಯ, ಸಾಧುಭವವೇದನನೋದನೇನ।
ಮೋದಾಯ, ಯಾದವಪರತ್ವಸುಸಾಧನಾಯ,
ಬೃಂದಾವನೇ ನಿವಸತಸ್ತವ ಸುಪ್ರಭಾತಮ್ ॥ 22 ॥

ತಾತ್ಪರ್ಯ : ಭಕ್ತಜನರಿಗೆ ಸಂಪತ್ಪ್ರದರಾದ, ಲಕ್ಷ್ಮೀಪತಿಯಾದ ನಾರಾಯಣ ಮತ್ತು ಗಿರಿಜಾಪತಿಯಾದ ರುದ್ರ, ಇವರೀರ್ವರ ಪರಸ್ಪರ ಅತ್ಯಂತ ಭೇದತತ್ತ್ವವನ್ನು ಬೋಧಿಸುವ, ಸಜ್ಜನರ ಸಾಂಸಾರಿಕ ದುಃಖವನ್ನು ಪರಿಹರಿಸುವುದರ ಮೂಲಕ ಆನಂದವನ್ನುಂಟುಮಾಡುವ, ಯದುಕುಲ ಭೂಷಣನಾದ ಶ್ರೀಕೃಷ್ಣನ ಸರ್ವೋತ್ತಮತ್ವವನ್ನು ಚೆನ್ನಾಗಿ ಸಾಧಿಸಲು ಶ್ರೀಮಂತ್ರಾಲಯದಲ್ಲಿ ಬೃಂದಾವನದಲ್ಲಿ ಸಶರೀರರಾಗಿ ವಾಸಮಾಡುತ್ತಿರುವ ಶ್ರೀ ಗುರುರಾಜರೇ, ನಿಮಗೆ ಮಂಗಳ ಪ್ರಭಾತವಾಗಲಿ ॥ 22 ॥

ವೇದತ್ರಯೀನಿಖಿಲಮಂತ್ರಪುರಾಣಗೀತಾ-
ಭಾಷ್ಯಾಣ್ಯಥೋಪನಿಷದಾಂ ದಶಕಂ ವಿವೃಣ್ವನ್।**
ದ್ವೈತಾಗಮಂ ಸುದೃಢಮಾಶು ವಿಧಾಯ, ಲೋಕ-
ಮಾನ್ಯೋಽಸಿ, ಮಂತ್ರನಿಲಯಾಧಿಪ! ಸುಪ್ರಭಾತಂ ॥ 23 ॥

---

* ಉಮಾಧವ

** ಪಾಠಾಂತರ : ವಿತನ್ವನ್

ತಾತ್ಪರ್ಯ : ಈಗ ಕವಿಯು ಶ್ರೀಗುರುರಾಜರ ಗ್ರಂಥರಚನಾ ವೈಶಿಷ್ಟ್ಯವನ್ನು ಕೊಂಡಾಡುತ್ತಾ ಸುಪ್ರಭಾತವನ್ನು ಕೋರುತ್ತಾನೆ.

ಸ್ವಾಮಿ, ತ್ರಯೀ ಎಂದು ಪ್ರಖ್ಯಾತವಾದ ಋಕ್ ಯಜುಸ್ಸಾಮವೇದಗಳಿಗೆ, ಸಕಲ ಋಙ್ಮಂತ್ರಗಳಿಗೆ, ರಾಮಾಯಣ, ಭಾರತ ಮತ್ತು ಭಾಗವತಾದಿಪುರಾಣಗಳ ಮೇಲೆ ಶ್ರೀಮಧ್ವಾಚಾರ್ಯರು ರಚಿಸಿದ ಸಕಲ ಭಾಷ್ಯಗಳು ಮತ್ತು ಟೀಕೆಗಳಿಗೆ, ದಶೋಪನಿಷತ್ತುಗಳಿಗೆ ಅತ್ಯಂತ ಪ್ರೌಢವೂ, ವಿದ್ವತ್ಪೂರ್ಣವೂ ಆದ ಗ್ರಂಥರತ್ನಗಳನ್ನು ರಚಿಸಿ ಶ್ರೀದ್ವೈತಸಿದ್ಧಾಂತವು ಆಚಂದ್ರಾರ್ಕವಾಗಿ ಬೆಳಗುವಂತೆ ಮಾಡಿ, ವಿದ್ವತ್ಪ್ರಪಂಚದಲ್ಲಿ, ಲೋಕದ ಜನರಿಂದ ಮಾನ್ಯರಾಗಿದ್ದೀರಿ. ಇಂತು ಮಹಿಮಾವಂತರಾದ ಶ್ರೀ ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರ ಗುರುವರೇಣ್ಯರೇ। ನಿಮಗೆ ಸುಪ್ರಭಾತವಾಗಲಿ ॥ 23 ॥

ವೃಂದಾರಕೇಂದ್ರಪರಿವಂದಿತನಂದನಂದಿ-
ಪಾದಾರವಿಂದಮಕರಂದಸುಧಾಪ್ರಮೋದಿನ್।
ವಂದಾರುಬೃಂದವರದೇಂದ್ರ! ಮುನೀಂದ್ರ! ಭಕ್ತ
ವೃಂದಾವನಾಖಿಲಗುರೋ! ತವ ಸುಪ್ರಭಾತಮ್ ॥ 24 ॥

ತಾತ್ಪರ್ಯ : ಅಮರರಾದ ಇಂದ್ರಾದಿಗಳಿಂದ ನಮಸ್ಕೃತನಾದ, ನಂದ ಗೋಪನನ್ನು ಆನಂದಗೊಳಿಸುವ ಗೋವಿಂದನ ಚರಣಕಮಲಗಳ ಮಕರಂದದ ಮಧುವನ್ನು ಆಸ್ವಾದಿಸಿ ಹೆಚ್ಚಾಗಿ ಸಂತಸಗೊಂಡಿರುವ, ಶರಣಾಗತರ ಸಮೂಹಕ್ಕೆ ಬೇಡಿದ ವರಗಳನ್ನು ಕೊಡುವವರಲ್ಲಿ ಶ್ರೇಷ್ಠರಾದ, ಮುನಿವರ್ಯರಾದ, ಭಕ್ತಾನೀಕವನ್ನು ಕಾಪಾಡುವ, ಸರ್ವರಿಗೂ ಗುರುಗಳಾದ ಶ್ರೀ ರಾಘವೇಂದ್ರರೇ, ನಿಮಗೆ ಸುಪ್ರಭಾತವಾಗಲಿ ॥ 24 ॥

ಸಿದ್ಧೀಮಸೂದ ಇತಿ ಯಾವನಭೂಮಿಪಾಲೋಽ
ಭಕ್ಷ್ಯಂ, ಪರೀಕ್ಷಣಕೃತೇಽರ್ಪಿತವಾನ್, ಫಲಾದಿ ॥
ಮಂತ್ರೋಕ್ಷಣೇನ ಕೃತವಾನ್, ಸ ತು, ಮಂತ್ರಸದ್ಮ
ದತ್ವಾ, ನನಾಮ, ಮಹಿಮಾದ್ಭುತ, ಸುಪ್ರಭಾತಮ್ ॥ 25 ॥

ತಾತ್ಪರ್ಯ : ಕವಿಯು ಈಗ ಶ್ರೀಮಂತ್ರಾಲಯಗ್ರಾಮವನ್ನು ಶ್ರೀಗುರುರಾಜರು ಸಂಪಾದಿಸಿದ ಮಹಿಮಾವರ್ಣನಪೂರ್ವಕವಾಗಿ ಸುಪ್ರಭಾತವನ್ನು ಬಯಸುತ್ತಿದ್ದಾನೆ.

ಸ್ವಾಮಿ, ಆದವಾನಿಯ ನವಾಬನಾದ ಸಿದ್ದೀಮಸೂದ್ ಖಾನನೆಂಬ ಯವನಭೂಪಾಲನು ನಿಮ್ಮ ಮಹಿಮೆಯನ್ನು ಪರೀಕ್ಷಿಸಲು ಮಾಂಸಮದ್ಯಾದಿ ನಿವೇದನಾನರ್ಹವಾದ ಪದಾರ್ಥಗಳನ್ನು ತಂದು ನಿಮಗರ್ಪಿಸಿದನು, ವಿಧರ್ಮಿಯಾದ ಆ ರಾಜನಿಗೆ ಸನಾತನ ಹಿಂದೂಧರ್ಮದ ಮತ್ತು ಭಗವಂತನ ಮಹಿಮೆಯನ್ನು ತೋರಿಸಿಕೊಟ್ಟು ಉದ್ಧರಿಸಬೇಕೆಂಬ ಉದಾರಬುದ್ಧಿಯಿಂದ ನೀವು ಮಂತ್ರಪೂತಜಲವನ್ನು ಪ್ರೋಕ್ಷಣೆಮಾಡಿ ಮದ್ಯಮಾಂಸಾದಿಗಳನ್ನು ಹಣ್ಣುಹೂವುಗಳಾಗಿ ಪರಿವರ್ತನೆ ಮಾಡಿದಿರಿ. ಈ ಪರಮಾದ್ಭುತವನ್ನು ಕಣ್ಣಾರೆಕಂಡ ಆ ನವಾಬನು ತಾನು ಮಾಡಿದ ಅಪರಾಧ ಪರಿಹಾರಕ್ಕಾಗಿ ದಿವಾನ್ ವೆಂಕಣ್ಣಪಂತನ ಮೂಲಕ ನಿಮ್ಮನ್ನು ಪ್ರಾರ್ಥಿಸಿ ನಿಮಗೆ ಇಷ್ಟವಾಗಿದ್ದ ಶ್ರೀಮಂತ್ರಾಲಯಕ್ಷೇತ್ರವನ್ನು ಸಮರ್ಪಿಸಿ ಅನುಗ್ರಹಿಸುವಂತೆ ಪ್ರಾರ್ಥಿಸಿದನು. ಇಂಥ ಅದ್ಭುತ ಮಹಿಮೆಯಿಂದ ಕೂಡಿದ ಶ್ರೀಗುರುರಾಜರೇ, ನಿಮಗೆ ಸುಪ್ರಭಾತವು ॥ 25 ॥

ಮಂತ್ರಾಲಯೇಶಪರಿಶೋಭಿವರಾತ್ಮಚಿತ್ತ
ಮಂತ್ರಾಲಯೇಶಕರುಣಾಪ್ತಸಮಸ್ತವಿತ್ತ।
ಮಂತ್ರಾಲಯೇಶಪರಿಸೇವನಮತ್ತಚಿತ್ತ
ಮಂತ್ರಾಲಯೇಶ! ಕಲಯೇ ತವ ಸುಪ್ರಭಾತಮ್ ॥ 26 ॥

ತಾತ್ಪರ್ಯ : ವೇದಗಳ ಸಮೂಹದಿಂದ ಪ್ರತಿಪಾದ್ಯನಾದ ನಾರಾಯಣನಿಂದ ಕಂಗೊಳಿಸುವ ಉತ್ತಮವಾದ ಮನಸ್ಸುಳ್ಳವರೇ, ಮಂತ್ರಗಳಿಗೆ ನೆಲೆವೀಡಾದ, ರಮಾದೇವಿಗೆ ಸ್ವಾಮಿಯಾದ ಶ್ರೀಹರಿಯ ಕರುಣೆಯಿಂದ ಪಡೆದ ಮಹೈಶ್ವರ್ಯವುಳ್ಳ ಸಪ್ತಕೋಟಿ ಮಹಾಮಂತ್ರಗಳಿಗೆ ನೆಲೆವೀಡಾದ ಶ್ರೀವಾಯುದೇವರಿಗೆ ಪ್ರಭುವಾದ ಶ್ರೀಮನ್ನಾರಾಯಣನ ಭಜನೆಯಲ್ಲಿ ತನ್ಮಯರಾದ, ಶ್ರೀಮಂತ್ರಲಾಯಕ್ಕೆ (ಅಧಿಪತಿ) ಪ್ರಭುಗಳಾದ

ಶ್ರೀರಾಘವೇಂದ್ರತೀರ್ಥ ಗುರುಸಾರ್ವಭೌಮರೇ! ನಿಮಗೆ ಮಂಗಳ ಪ್ರಭಾತವಾಗಲಿ ॥ 26 ॥

ಶ್ರೀಮೂಲರಾಮಪದಪಕಂಜಭೃಂಗರಾಜ!
ಶ್ರೀಮಧ್ವರಾಜಮತಸಾರಸಹಂಸರಾಜ।
ಶ್ರೀರಾಘವೇಂದ್ರವರವಂಶಜಯೋಗಿರಾಜ!
ಶ್ರೀಸಂಯಮೀಂದ್ರಗುರುರಾಜ! ಶುಭಪ್ರಭಾತಮ್ ॥ 27 ॥

ತಾತ್ಪರ್ಯ : ಕವಿಯು ಈಗ ಶ್ರೀಗುರುರಾಜರಿಗೆ, ಶ್ರೀವಾದೀಂದ್ರ ತೀರ್ಥರಿಗೆ, ಶ್ರೀ ಸುಧರ್ಮೇಂದ್ರತೀರ್ಥರಿಗೆ, ಶ್ರೀಸುಶೀಲೇಂದ್ರತೀರ್ಥರಿಗೆ ಶ್ರೀ ಸುವ್ರತೀಂದ್ರತೀರ್ಥರಿಗೆ ಮತ್ತು ಪರಮಪೂಜ್ಯರಾದ ಶ್ರೀಸುಯಮೀಂದ್ರ ತೀರ್ಥರಿಗೆ ಒಂದೇ ಪದ್ಯದಿಂದ ಸುಪ್ರಭಾತವನ್ನು ಹೇಳುತ್ತಿದ್ದಾನೆ!

1. ಶ್ರೀಮೂಲರಾಮಚಂದ್ರನ ಪಾದಕಮಗಳಿಗೆ ದುಂಬಯಂತಿರುವ, ಶ್ರೀಮಧ್ವಾಚಾರ್ಯರ ದ್ವೈತಮತವೆಂಬ ಸರೋವರದಲ್ಲಿ ಶೋಭಿಸುವ ರಾಜಹಂಸರಾದ, ಶ್ರೀರಾಘವೇಂದ್ರನೆಂಬ ಶ್ರೀಹಂಸನಾಮಕ ಪರಮಾತ್ಮನ ಪರಮಹಂಸಕುಲಸಂಜಾತರಾದ, ಯೋಗಿಶ್ರೇಷ್ಠರಾದ, ಕಾಂತಿಸಂಪನ್ನರಾದ ಯತಿಗಳಿಗೆ ಪ್ರಭುಗಳಾದ ಶ್ರೀಗುರುರಾಜರೇ, ನಿಮಗೆ ಮಂಗಳಪ್ರಭಾತವು.

2. ಶ್ರೀಮೂಲರಾಮಪದಾರವಿಂದಕ್ಕೆ ಮಧುಕರರಾದ, ಶ್ರೀಮದಾಚಾರ್ಯರಿಗೆ ಪ್ರಭುವಾದ ಶ್ರೀಹರಿಯಮತವೆಂಬ ಕೊಳದಲ್ಲಿ ವಿಹರಿಸುವ ರಾಜ ಹಂಸರಾದ, ಶ್ರೀರಾಘವೇಂದ್ರಸ್ವಾಮಿಗಳ ಶ್ರೇಷ್ಠ ಪೂರ್ವಾಶ್ರಮ ಮತ್ತು ಪರಮಹಂಸಾಶ್ರಮ ವಂಶಗಳಲ್ಲಿ ಉತ್ಪನ್ನರಾದ ಯೋಗಿವರ್ಯರಾದ, ಶ್ರೀಯತಿವರ್ಯರಾದ ಶ್ರೀ ರಾಘವೇಂದ್ರರೇರಾಜರಾಗುಳ್ಳ ಶ್ರೀವಾದೀಂದ್ರತೀರ್ಥರೇ, ನಿಮಗೆ ಸುಪ್ರಭಾತವು.

3. ಶ್ರೀಮೂಲರಾಮದೇವರ ಚರಣಾಂಭೋಜಗಳಿಗೆ ದುಂಬಿಯಂತಿರುವ, ಶ್ರೀಮಧ್ವಾಚಾರ್ಯರ ಮತವೆಂಬ ಸರೋವರದಲ್ಲಿ ವಿಹರಿಸುವ ರಾಜಹಂಸರಾದ, ಶ್ರೀರಾಘವೇಂದ್ರಸ್ವಾಮಿಗಳವರ ಪೀಠಪರಂಪರೆಯಲ್ಲಿ

ಬಂದಯೋಗಿರಾಜರಾದ, ಶ್ರೀಸಂನ್ಯಾಸಿಶ್ರೇಷ್ಠರಿಗೆ ಗುರುಗಳಾದ ಶ್ರೀ ಸುಧರ್ಮೇಂದ್ರ ತೀರ್ಥರೇ, ನಿಮಗೆ ಸುಪ್ರಭಾತವಾಗಲಿ.

4. ಶ್ರೀಮೂಲರಾಮಚರಣಸರೋಜಭೃಂಗರಾದ, ಶ್ರೀಮಧ್ವಾಚಾರ್ಯರ ಸದ್ವೈಷ್ಣವಮತವೆಂಬ ಸರೋವರಕ್ಕೆ ರಾಜಹಂಸರಾದ, ಶ್ರೀರಾಘವೇಂದ್ರ ಸ್ವಾಮಿಗಳಶ್ರೇಷ್ಠ ಕುಲೋತ್ಪನ್ನರಾದ ಯೋಗೀಂದ್ರರಾದ ಶ್ರೀಸುಯಮೀಂದ್ರರಿಗೆ ಗುರುಗಳಾದ ಶ್ರೀಸುವ್ರತೀಂದ್ರರಿಗೆ ಪ್ರಭುಗಳಾದ (ಗುರುಗಳಾದ) ಶ್ರೀ ಸುಶೀಲೇಂದ್ರತೀರ್ಥರೇ, ನಿಮಗೆ ಸುಪ್ರಭಾತವು.

5. ಶ್ರೀಮೂಲರಾಮಚಂದ್ರನ ಪದಸಕಿಸಲಯಚಂಚರೀಕರಾದ, ಶ್ರೀ ಮಧ್ವಮತವೆಂಬ ಸರೋವರದಲ್ಲಿ ಮೈಮರೆತು ವಿಹರಿಸುವ ಪರಮಹಂಸ ಶ್ರೇಷ್ಠರಾದ, ಶ್ರೀ ರಾಘವೇಂದ್ರಸ್ವಾಮಿಗಳವರ ಮಹಾಪೀಠದ ಸದ್ವಂಶದಲ್ಲಿ ಉತ್ಪನ್ನರಾಗಿ ಜ್ಞಾನಭಕ್ತಿ-ವೈರಾಗ್ಯದಿಗಳಿಂದ ಕೂಡಿ ಯೋಗಿಶ್ರೇಷ್ಠರೆನಿಸಿದ, ಶ್ರೀ ಸುಯಮೀಂದ್ರತೀರ್ಥರಿಗೆ ಗುರುವರ್ಯರಾದ, ಶ್ರೀಸುವ್ರತೀಂದ್ರತೀರ್ಥರೇ, ನಿಮಗೆ ಸುಪ್ರಭಾತವು.

6. ಮೂವತ್ಮೂರು ವರ್ಷಗಳಕಾಲ ಶ್ರೀಮೂಲರಾಮಚಂದ್ರದೇವರ ಪಾದಕಮಲಗಳ ಮಕರಂದಾಸ್ವಾದನಚತುರರಾದ ಮಧುಕರರೇ! ಶ್ರೀಮನ್ಮಧ್ವಾಚಾರ್ಯರ ಪವಿತ್ರದ್ವೈತಮತವೆಂಬ ಸರೋವರದಲ್ಲಿ 33 ವರ್ಷಗಳ ಕಾಲ ಮೈಮರೆತು ವಿಹರಿಸಿದ ಶ್ರೇಷ್ಠ ಪರಮಹಂಸರೇ! ಕಾಂತಿಸಂಪದ್ಯುಕ್ತರಾದ ಶ್ರೀರಾಘವೇಂದ್ರಗುರುವರೇಣ್ಯರ ಉಭಯವಂಶಗಳಲ್ಲಿ ಉತ್ಪನ್ನರಾಗಿ 'ಉಭಯವಂಶಾಬ್ಧಿಚಂದ್ರಮ'ರೆನಿಸಿ ಕೀರ್ತಿಗಳಿಸಿದ, ಮಹಾತಪಸ್ವಿಗಳಾದ ಯೋಗಿವರ್ಯರೇ, ಶ್ರೀಸುಯಮೀಶ್ರೇಷ್ಠರಾದ ಶ್ರೀಸುಯಮೀಂದ್ರ ತೀರ್ಥಗುರುವರ್ಯರೇ! ನಿಮಗೆ ಮಂಗಳದ ಬೆಳಗಾಗಲಿ ॥ 27 ॥

ಏತಲ್ಲಿಲೇಖ ಶುಭದಾಯಕ ಸುಪ್ರಭಾತ-
ಸ್ತೋತ್ರಂ ಗುರೋಃ ಕರುಣಯಾ ಗುರುರಾಜನಾಮಾ।
ಪ್ರಾತಃ ಪ್ರಬುಧ್ಯ, ಪಠತೀಹ ಜನೋ, ಯ ಏತತ್,
ಸ ಪ್ರಾಪ್ನುಯಾದ್ಧಿ ಸಕಲಾರ್ಥಸುಮಂಗಲಾನಿ ॥ 28 ॥

ತಾತ್ಪರ್ಯ : ಈ ಶುಭಪ್ರದವಾದ ಸುಪ್ರಭಾತಸ್ತೋತ್ರವನ್ನು ಶ್ರೀ ಗುರುರಾಜರ ಕಾರುಣ್ಯದಿಂದ ಗುರುರಾಜನಾಮಕ ಕವಿಯು ಬರೆದನು, ಪ್ರಾತಃ ಕಾಲದಲ್ಲಿ ಎದ್ದು ಈ ಉತ್ತಮವಾದ ಸುಪ್ರಭಾತವನ್ನು ಯಾವನು ಪಠಿಸುವನೋ ಅವನು ಶ್ರೀಹರಿ-ವಾಯು-ಶ್ರೀರಾಘವೇಂದ್ರ ಗುರುಸಾರ್ವಭೌಮರ ಅನುಗ್ರಹಬಲದಿಂದ ಸರ್ವವಿಧಪುರುಷಾರ್ಥಗಳನ್ನೂ ಮತ್ತು ಸನ್ಮಂಗಳಗಳನ್ನೂ ನಿಶ್ಚಯವಾಗಿ ಪಡೆದು ಸುಖಿಯಾಗುವನು ॥ 28 ॥

ಶ್ರೀ ಗುರುರಾಜರ ತ್ರಿಶತಮಾನೋತ್ಸವದ ಸೇವಾಕಾರ್ಯಕ್ಕಾಗಿ ಕವಿಗಳು ಶ್ರೀ ಗುರುರಾಜರ ಪ್ರೇರಣೆಯಂತೆ ರಚಿಸಿದ ಈ ಐದು ಪದ್ಯಗಳನ್ನು ಶ್ರೀ ಗುರುಭಕ್ತರ ಮನಸ್ಸಂತೋಷಕ್ಕಾಗಿ ಇಲ್ಲಿ ಕೊಡಲಾಗಿದೆ.

ತ್ವನ್ಮಂಗಲಾನನಸರೋಜಸುರಂಗಧಾಮ್ನಿ
ನೃತ್ಯದ್ವಿರಿಂಚರಮಣೀಕಬರೀವಿಲಾಸಾತ್।
ಮಂದಂ ಗಲತ್ಕುಸುಮಸಂತತಿರೇವ, ವಾಣೀ
ಹೃದ್ಯಾ ನು ಹಂತ! ಗುರುಗಾಜ! ಶುಭಪ್ರಭಾತಮ್ ॥ 1 ॥

ತ್ರಿಂಶತ್ಸುವತ್ಸರಮಪಾರದಯಾರ್ದ್ರದೃಷ್ಟ್ಯಾ
ಸಂವೀಕ್ಷ್ಯ ಪಾನ್ ನಿಜಜನಾನ್ ಗುರುರಾಘವೇಂದ್ರ।
ಶ್ರೀಸಂಯಮೀಂದ್ರ ಪರಿಕಲ್ಪಿತ "ಸಪ್ತರಾತ್ರ-
ಭಕ್ತ್ಯುತ್ಸವೇನ" ಮುದಿತೋಽಸಿ ಶುಭಪ್ರಭಾತಮ್ ॥ 2 ॥

ಉತ್ತಿಷ್ಠ ಜಾಗೃಹಿ ಗುರೋ ಬಹಿರೇಹಿ ಪಾಹಿ
ಬೃಂದಾವನಾತ್ ತ್ರಿಶತಮಾನಶುಭೋತ್ಸವೇದ್ಯ।
ಭಕ್ತಾಘಭಂಜನಮನೋರಥ ಪೂರಣಾಯ
ಸನ್ಮಂಗಲಾಯ ಕಲಯೇ ತವ ಸುಪ್ರಭಾತಮ್ ॥ 3 ॥

ವಾಕ್ಯಾರ್ಥ-ಮಂತ್ರ-ಹರಿಗೀತ-ಪುರಾಣ-ವೇದ-
ಪಾರಾಯಣಾಮಿತ-ಸುಗಾಯನ-ವಾದ್ಯಘೋಷೈಃ।

ಸಂಪ್ರಾರ್ಥಯಂತಿ ಸುಜಯೀಂದ್ರಯತೀಶ್ವರಾಃ ಸದ್
ವೃಂದಾವನಾಯ ಕಲಯೇ ತವ ಸುಪ್ರಬಾತಮ್ ॥ 4 ॥

ಶ್ರೀರಾಘುವತ್ರಿಶತವರ್ಷಮಹೋತ್ಸವೇಽಸ್ಮಿನ್
ತ್ವತ್ಪಾದಪದ್ಮಪರಿಸೇವನಮಾನಸಾ ಯೇ ।
ಸಂಪ್ರಾರ್ಥಯಂತಿ ಮಿಲಿತಾಸ್ತ್ವದನುಗ್ರಹಾರ್ಥ-
ಮುತ್ತಿಷ್ಠ ಬೃಂದಸದನಾತ್ತವ ಸುಪ್ರಭಾತಮ್ ॥ 5 ॥

ಶ್ರೀ ಸುಯಮೀಂದ್ರತೀರ್ಥಗುರ್ವಂತರ್ಗತ ಶ್ರೀರಾಘವೇಂದ್ರ ಗುರುಸಾರ್ವಭೌಮಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮಲ್ಲಕ್ಷ್ಮೀವೆಂಕಟೇಶ್ವರಃ ಪ್ರೀಯತಾಮ್

॥ ಶ್ರೀಕೃಷ್ಣಾರ್ಪಣಮಸ್ತು ॥



ಶ್ರೀ ರಾಜಾ ಎಸ್. ಗುರುರಾಜಾಚಾರ್ಯರು

ಶ್ರೀ ರಾಘವೇಂದ್ರ ಸ್ವಾಮಿಗಳ ಪೂರ್ವಾಶ್ರಮ ಜೇಷ್ಠವಂಶದಲ್ಲಿ ಬಂದ ಭಾಗ್ಯಶಾಲಿಗಳು. ಇವರು ಶ್ರೇಷ್ಠ ಪಂಡಿತರು, ಕವಿಗಳು, ವಾಗ್ಗೇಯಕಾರರು ಮತ್ತು ಗ್ರಂಥಕಾರರು. ಸಂಸ್ಕೃತ ಕನ್ನಡದಲ್ಲಿ ಅನೇಕ ಗ್ರಂಥಗಳನ್ನು ರಚಿಸಿ ದೇಶದಲ್ಲಿ ವಿಖ್ಯಾತರಾಗಿದ್ದಾರೆ. ಇವರ ಕಮಲೇಶಾಂಕಿತ ಕೀರ್ತನೆಗಳು ಅತ್ಯಂತ ಜನಪ್ರಿಯವಾಗಿವೆ. ಮಠ, ವಿದ್ಯಾಸಂಸ್ಥೆ, ಧರ್ಮಸಂಸ್ಥೆ, ರಾಜ್ಯಸರಕಾರಗಳಿಂದ ವಿದ್ವತ್ಪ್ರಶಸ್ತಿಗಳನ್ನು ಗಳಿಸಿ ಸನ್ಮಾನಿತರಾಗಿದ್ದಾರೆ. 1999ರ ಸ್ವಾತಂತ್ರ್ಯೋತ್ಸವದ ದಿನ ಭಾರತ ಸರ್ಕಾರದವರು ಆಚಾರ್ಯರಿಗೆ ಶ್ರೇಷ್ಠ ಪಂಡಿತರೆಂದು ರಾಷ್ಟ್ರಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ತಮ್ಮ ಪರಿಮಳ ವಿದ್ಯಾಸಂಸ್ಥೆಯಿಂದ ಅನೇಕ ಕನ್ನಡ, ಸಂಸ್ಕೃತ ಗ್ರಂಥಗಳನ್ನೂ, ಪರಿಮಳ ಮಾಸಪತ್ರಿಕೆಯನ್ನೂ ಪ್ರಕಟಿಸುತ್ತಾ ತತ್ವ, ಧರ್ಮ, ಸಂಸ್ಕೃತಿ, ಸಾಹಿತ್ಯಸೇವೆ ಮಾಡುತ್ತಿದ್ದಾರೆ. ಆಚಾರ್ಯರ ಅಜಯ್ಯ-ವಿಜಯೀಂದ್ರರು, ಕಲಿಯುಗ - ಕಲ್ಪತರು, ಗ್ರಂಥಗಳು ಅವರ ಗ್ರಂಥರಚನಾ ಕೌಶಲ್ಯಕ್ಕೆ ಜೀವಂತ ಸಾಕ್ಷಿಯಂತಿವೆ. ಶ್ರೀಗುರುರಾಜರ ಪರಮಾನುಗ್ರಹಕ್ಕೆ ಪಾತ್ರರಾದ ಆಚಾರ್ಯರ ಈ ಗ್ರಂಥ ಶ್ರೀ ಗುರುಭಕ್ತರನ್ನು ಸಂತೋಷಗೊಳಿಸುವುದರಲ್ಲಿ ಸಂಶಯವಿಲ್ಲ.

ಚಿತ್ರಾ ಪ್ರಿಂಟರ್ಸ್, 35/1, ಡಾ|| ಟಿ.ಸಿ.ಎಂ. ರಾಯನ್ ರಸ್ತೆ, ಬೆಂಗಳೂರು - 53